
# ಬಿ.ಆರ್. ಅರಿಷಿಣಗೋಡಿ



ಡಾ. ರಾಮಕೃಷ್ಣ ಮರಾಠೆ

ರಂಗಸಂಪನ್ನರು ಮಾಲಿಕೆ

# ಬಿ.ಆರ್. ಅರಿಷಿಣಗೋಡಿ

ಡಾ। ರಾಮಕೃಷ್ಣ ಮರಾಠೆ

**ಕರ್ನಾಟಕ ನಾಟಕ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨
ದೂರವಾಣಿ: ೦೮೦- ೨೨೨೩ ೭೪೮೪

**B.R. ARISHINAGODI :** A Monograph in Kannada by Dr. Ramakrishna Marathe, Lecturer, B.K. College, Club Road, Belgaum. Ph.94488 63818

**Published by :** Siddaraju, Registrar, Karnataka Nataka Academy, Bangalore -2, Ph. 080-2223 7484

ಹಕ್ಕುಗಳು : ಆಯಾ ಲೇಖಕರವು

ಎರಡನೆ ಮುದ್ರಣ : ೨೦೧೫
ಮೊದಲ ಮುದ್ರಣ : ೨೦೦೦

ಪ್ರತಿಗಳು : ೧,೦೦೦
ಪುಟಗಳು : ೮೦
ಬೆಲೆ : ರೂ.೬೦/-

ಪ್ರಕಾಶಕರು:
ಸಿದ್ಧರಾಜು, ರಿಜಿಸ್ಟ್ರಾರ್,
ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಭವನ
ಬೆಂಗಳೂರು – ೫೬೦೦೦೨

ಮುಖಪುಟ ವಿನ್ಯಾಸ : ಬಿ.ಎಸ್. ವಿದ್ಯಾರಣ್ಯ

ಮುದ್ರಣ: ಚಾರುಮತಿ ಪ್ರಕಾಶನ
ಚಾಮರಾಜಪೇಟೆ, ಬೆಂಗಳೂರು–18

# ಮೊದಲ ಮಾತು
(ಮೊದಲ ಮುದ್ರಣಕ್ಕೆ)

ಕರ್ನಾಟಕ ನಾಟಕ ಅಕಾಡೆಮಿಯು ವರ್ಷದುದ್ದಕ್ಕೂ ನಾಡಿನಾದ್ಯಂತ ಹಾಗೂ ನಾಡಿನ ಹೊರಗಡೆಗೆ ರಂಗಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ ಕನ್ನಡದ ನಾಟಕ ಕ್ಷೇತ್ರವನ್ನು ನಿರಂತರ ವಿಸ್ತರಿಸುತ್ತ ಬಂದಿದೆ. ಇಂಥ ರಂಗಕಾರ್ಯಗಳ ಜೊತೆಗೆ ನಾಟಕ ಕೃತಿ, ರಂಗ ವಿಮರ್ಶೆ, ರಂಗಕರ್ಮಿಗಳ ಪರಿಚಯ ಇತ್ಯಾದಿ ಕುರಿತ ಕೃತಿಗಳನ್ನೂ ಆಗಾಗ ಪ್ರಕಟಿಸಿದೆ.

ಕನ್ನಡ ನಾಡಿನಲ್ಲಿ ಎಷ್ಟೋ ಜನ ಮಹತ್ವದ ರಂಗಸಂಪನ್ನರು ಆಗಿಹೋಗಿದ್ದಾರೆ. ಜಾನಪದ, ವೃತ್ತಿ ಮತ್ತು ಹವ್ಯಾಸಿ ಎಲ್ಲ ಕ್ಷೇತ್ರಗಳಲ್ಲಿ ರಂಗಭೂಮಿಯ ಶ್ರೇಯಸ್ಸಿಗಾಗಿ ಶ್ರಮಿಸಿದ ಅಸಂಖ್ಯ ವ್ಯಕ್ತಿಗಳ ಬದುಕಿನ ಪರಿಚಯವು ಅವರು ಗತಿಸಿದ ನಂತರ ನಿಧಾನವಾಗಿ ಇತಿಹಾಸದ ಹಿನ್ನೆಲೆಗೆ ಸಿಲುಕುತ್ತ ಹೋಗುತ್ತದೆ. ಅಂಥವರೆಲ್ಲರ ಬದುಕಿನ ಚರಿತ್ರೆಗಳು ಸುಸಂಘಟಿತವಾಗಿ ನಿರೂಪಿತಗೊಳ್ಳಬೇಕು, ಬರೆಯಲ್ಪಡಬೇಕು. ಹಾಗೆಯೇ ಈಗ ನಮ್ಮೊಡನಿರುವ ಮಹತ್ವದ ಸಾಧನೆಗೈದಿರುವ ನಟರು, ನಾಟಕಕಾರರು, ನಿರ್ದೇಶಕರು, ಹಿನ್ನೆಲೆ ರಂಗಕರ್ಮಿಗಳು ಮುಂತಾದ ರಂಗಸಂಪನ್ನ ವ್ಯಕ್ತಿಗಳನ್ನು ಕುರಿತು ಆದಷ್ಟು ಬೇಗನೆ ಕೃತಿಗಳನ್ನು ಪ್ರಕಟಿಸುವ ಮೂಲಕ ಅವರ ನೆಮ್ಮದಿಯ, ಕೀರ್ತಿಯ ಬದುಕಿಗೆ ಇನ್ನಷ್ಟು ಹೆಚ್ಚಿನ ಸುಖವನ್ನು ಕೊಡಲೆತ್ನಿಸಬೇಕೆಂದು ನಿರ್ಧರಿಸಿ, ನಾಟಕ ಅಕಾಡೆಮಿ ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ. ಮೊದಲ ಹಂತವಾಗಿ ಎಚ್. ಎನ್. ಹೂಗಾರ, ಬಿ.ವಿ. ಕಾರಂತ, ಮಾಸ್ಟರ್ ಹಿರಣ್ಣಯ್ಯ, ಆರ್. ನಾಗರತ್ನಮ್ಮ, ಎಚ್.ಕೆ. ಯೋಗಾನರಸಿಂಹ, ಮೇಕಪ್ ನಾಣಿ, ಪಿ.ಬಿ. ಧುತ್ತರಗಿ, ಚಿಂದೋಡಿ ಲೀಲಾ, ಎಂ.ಎಸ್. ಸತ್ಯು, ಆರ್. ನಾಗೇಶ್ ಅವರನ್ನು ಕುರಿತು ಪುಸ್ತಿಕೆಗಳನ್ನು ಪ್ರಕಟಿಸಲಾಗಿದೆ.

ಎರಡನೆ ಹಂತದಲ್ಲಿ ಶ್ರೀಮತಿ ಸುಭದ್ರಮ್ಮ ಮನ್ಸೂರು, ಶ್ರೀ ಶ್ರೀನಿವಾಸ ತಾವರಗೆರೆ, ಶ್ರೀ ಪ್ರಸನ್ನ, ಶ್ರೀ ರಾಜಾನಂದ್, ಶ್ರೀ ಹುನಗುಂದ ಬಾಬಣ್ಣ, ಶ್ರೀ ಹೆಚ್.ಟಿ. ಅರಸು, ಶ್ರೀ ಲೋಕನಾಥ್, ಶ್ರೀ ವಿ. ರಾಮಮೂರ್ತಿ, ಶ್ರೀ ದುರ್ಗಾದಾಸ್, ಶ್ರೀ ಜಿ.ವಿ. ಐಯ್ಯರ್, ಶ್ರೀ ಬಿ.ಆರ್. ಅರಿಶಿಣಗೋಡಿ ಅವರನ್ನು ಕುರಿತು ಹನ್ನೊಂದು ಪುಸ್ತಿಕೆಗಳನ್ನು ಪ್ರಕಟಿಸಲು ನಿರ್ಧರಿಸಲಾಗಿದೆ.

ನಾಟಕ ಅಕಾಡೆಮಿಯ ಸದಸ್ಯರಾದ ಡಾ॥ ಸಿದ್ದಲಿಂಗ ಪಟ್ಟಣಶೆಟ್ಟಿ, ಕೆ.ವಿ. ನಾಗರಾಜಮೂರ್ತಿ, ಹೂಲಿಶೇಖರ್ ಹಾಗೂ ಟಿ. ರಘು ಅವರುಳ್ಳ ಸಂಪಾದಕ ಸಮಿತಿಯು ಈ ಪುಸ್ತಿಕೆಗಳನ್ನು ಚೆನ್ನಾಗಿ ಸಂಪಾದಿಸಿ ಹೊರತರುವ ಗುರುತರ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಅವರಿಗೆ ನಾಟಕ ಅಕಾಡೆಮಿಯ ಹಾಗೂ ವೈಯಕ್ತಿಕವಾಗಿ ಗೌರವ ಕೃತಜ್ಞತೆ ಸಲ್ಲಿಸುತ್ತೇವೆ.

ಈ ಪುಸ್ತಿಕೆಗಳ ಪ್ರಕಟಣೆಗೆ ಒಮ್ಮತದಿಂದ ನಿರ್ಧರಿಸಿದ ಹಾಗೂ ಪ್ರಕಟಣೆಗೆ ಪೂರ್ವದಲ್ಲಿಯೇ ಅವನ್ನು ಮಾರಾಟ ಮಾಡಲು ನೆರವಾದ ನಾಟಕ ಅಕಾಡೆಮಿಯ ಎಲ್ಲ ಸದಸ್ಯರಿಗೆ, ಕೃತಿ ರಚಿಸಿ ಕೊಟ್ಟ ಲೇಖಕರಿಗೆ, ಮುಖಪುಟ ಕಲಾವಿದರಿಗೆ ಹಾಗೂ ಮುದ್ರಕರಿಗೆ ಹಾರ್ದಿಕ ಕೃತಜ್ಞತೆಗಳು.

**ಸಿ.ಜಿ. ಕೃಷ್ಣಸ್ವಾಮಿ**
ಅಧ್ಯಕ್ಷರು
೧೫-೪-೨೦೦೦ ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

# ಸಂಪಾದಕರ ಮಾತು
## (ಮೊದಲ ಮುದ್ರಣಕ್ಕೆ)

ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ರಂಗಭೂಮಿಯು ವ್ಯಕ್ತಿಗಳ ಬದುಕಿನ ಎಲ್ಲ ಆಯಾಮಗಳನ್ನು ಸ್ಪರ್ಶಿಸಿ, ಅವರ ಭಾವೋದ್ವೇಗ, ಭಾವೋನ್ಮಿಲನಗಳಿಗೆ ಅಭಿವ್ಯಕ್ತಿಗಳನ್ನು ನೀಡುವಂತೆ ಕಲಾಪ್ರಪಂಚದ ಉಳಿದ ಮಾಧ್ಯಮಗಳು ಮಾಡಲಾರವು. ಕರ್ನಾಟಕದ ಮೂಲೆ ಮೂಲೆಯಲ್ಲಿ ಜಾನಪದ, ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿ ಈ ದೃಷ್ಟಿಯಿಂದ ಹಲವಾರು ವರ್ಷಗಳಿಂದ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಪ್ರಯೋಗದಿಂದ ಪ್ರಯೋಗಕ್ಕೆ ಬದಲಾಗುತ್ತ, ಬೆಳೆಯುತ್ತ, ಹೊಸದಾಗುತ್ತ ಸಾಗುವ ಸಜೀವ ರಂಗಕಲೆಯನ್ನು ದಾಖಲೆಯ ಕಟ್ಟುಪಾಡಿಗೆ ಸಿಲುಕಿಸುವುದು ಬಲು ಕಷ್ಟದ ಕೆಲಸ.

ಮೊದಲಿನಿಂದಲೂ ಇತಿಹಾಸವನ್ನು ರಕ್ಷಿಸುವ ನಿಟ್ಟಿನಲ್ಲಿ ನಮ್ಮವರು ಯೋಚಿಸಿದ್ದೇ ಕಡಿಮೆ. ಹೀಗಾಗಿ ಅಸಂಖ್ಯ ರಂಗಕಲಾವಿದರ ಬದುಕು ಇತಿಹಾಸದ ಪುಟಗಳಲ್ಲಿ ಸೇರಿ ಕಾಲ ಕಳೆದಂತೆ ಮಸುಕಾಗುತ್ತ ಹೋದದ್ದು ಸಹಜ. ಈಗಲಾದರೂ ನಾವು ಲಭ್ಯವಿರುವ, ಲಭ್ಯವಾಗುವ ಎಲ್ಲ ವಿವರಗಳನ್ನು ಸಂಗ್ರಹಿಸಿ, ಈಗ ನಮ್ಮೊಡನಿರುವ ಕಲಾವಿದರ ಬದುಕಿನ ವರ್ಣಮಯ ನೆನಪುಗಳನ್ನು ಇತಿಹಾಸದ ಅರ್ಥಪೂರ್ಣ ಪುಟಗಳನ್ನು ಪರಿವರ್ತಿಸಲು ಯತ್ನಿಸುವುದು ಅಗತ್ಯವಾಗಿ ಆಗಬೇಕಾದ ಕಾರ್ಯ.

ಕರ್ನಾಟಕ ನಾಟಕ ಅಕಾಡೆಮಿಯ ಉತ್ಸಾಹಿ ಅಧ್ಯಕ್ಷರಾದ ಸಿ.ಜಿ. ಕೃಷ್ಣಸ್ವಾಮಿಯವರ ಒತ್ತಾಸೆ ಹಾಗೂ ಎಲ್ಲ ಸದಸ್ಯರ ಸಕ್ರಿಯ ಸಹಕಾರದ ಮೇರೆಗೆ ಈ ಸಲದ ಅಕಾಡೆಮಿ ಈ ಕಾರ್ಯದಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ. ಈಗಾಗಲೇ ನಮ್ಮೊಡನಿರುವ ಹತ್ತು ಜನ ರಂಗಕರ್ಮಿಗಳ ಬಗ್ಗೆ ರಂಗಸಂಪನ್ನರು ಎಂಬ ಮಾಲಿಕೆಯಲ್ಲಿ ಕಿರುಜೀವನ ಚರಿತ್ರೆಯ ಪುಸ್ತಿಕೆಗಳನ್ನು ಪ್ರಕಟಿಸಿದೆ. ಎರಡನೇ ಹಂತದಲ್ಲಿ ಹನ್ನೊಂದು ಜನ ರಂಗಕರ್ಮಿಗಳ ಬಗ್ಗೆ ಅವರ ಕಿರು ಜೀವನ ಚರಿತ್ರೆಯನ್ನು ಈ ವರ್ಷ ಪ್ರಕಟಿಸಲು ನಿರ್ಧರಿಸಲಾಗಿದೆ.

ನಾಟಕ ಮೂಲತಃ ಪ್ರದರ್ಶಕ ಕಲೆಯಾದರೂ ಸಾಧ್ಯವಿದ್ದಷ್ಟು ಮಟ್ಟಿಗೆ ಅದನ್ನು ಸಾಹಿತ್ಯ, ಬರವಣಿಗೆ, ವಸ್ತು ಸಂಗ್ರಹಣೆ, ವಿಡಿಯೋ ಚಿತ್ರೀಕರಣ, ಧ್ವನಿಮುದ್ರಣ, ನೆನಪು ಸಂಗ್ರಹ ಮುಂತಾದ ರೀತಿಯಲ್ಲಿ ದಾಖಲಿಸುವ ಪ್ರಯತ್ನ ಆಗಬೇಕಾಗಿದೆ. ನಮ್ಮ ರಂಗಭೂಮಿಯ ನಟರು, ನಾಟಕಕಾರರು, ನಿರ್ದೇಶಕರು, ರಂಗಸಂಗೀತಗಾರರು, ಹಿನ್ನೆಲೆ ರಂಗಕರ್ಮಿಗಳು ಮುಂತಾದವರು ಮಾಡಿದ ಐತಿಹಾಸಿಕ ಕೆಲಸಗಳು ಜೀವಂತವಾಗಿ ಆಸಕ್ತ ಓದುಗರಿಗೆ, ಚರಿತ್ರಕಾರರಿಗೆ ಲಭಿಸುವಂತಾಗಬೇಕು. ಆಗ ಕತ್ತಲೆಗೆ ಸಂದ, ನಾಟಕ ಸಾಹಿತ್ಯ ಹಾಗೂ

ಪ್ರಯೋಗಗಳ ಎಷ್ಟೋ ಪುಟಗಳು ಮತ್ತೆ ಬೆಳಕಿಗೆ ಬರುವುದರಲ್ಲಿ ಸಂಶಯವಿಲ್ಲ. ಈಗ ಪ್ರಕಟವಾಗುತ್ತಿರುವ ಈ ಕೃತಿಗಳು ಆಯಾ ರಂಗಸಂಪನ್ನ ಕಲಾವಿದರ ಬಗ್ಗೆ ಕೇವಲ ದಿಕ್ಸೂಚಿಯಂತಿವೆ. ಅವರನ್ನು ಕುರಿತು ಇನ್ನೂ ಎಷ್ಟೋ ವಿಷಯಗಳು, ವಿವರಣೆಗಳು ಹೊರಬರಬೇಕು, ಪ್ರಕಟಗೊಳ್ಳಬೇಕು. ಅಂಥ ಕಾರ್ಯಕ್ಕೆ ಈಗಿನ ಈ ಪ್ರಕಟಣೆಗಳು ನಾಂದಿ ಹಾಗೂ ಪ್ರೇರಕ ರಚನೆಗಳು ಎಂಬುದನ್ನು ಮರೆಯಲಾಗದು. ಇಲ್ಲಿ ನಮೂದಿಸಲಾದ ವಿವರಗಳಿಗೆ ಹಾಗೂ ವ್ಯಕ್ತವಾದ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಗಾರರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಕಮತಗಿಯ ಶ್ರೀ ಹುಚ್ಚೇಶ್ವರ ನಾಟ್ಯ ಸಂಘದ ಭೀಮಪ್ಪ ರಂಗಪ್ಪ ಅರಿಷಿಣಗೋಡಿ ಅವರನ್ನು ಕುರಿತು ಡಾ. ರಾಮಕೃಷ್ಣ ಮರಾಠೆ ಈ ಕೃತಿಯನ್ನು ರಚಿಸಿದ್ದಾರೆ. ಬಿ.ಆರ್. ಅರಿಷಿಣಗೋಡಿ ವಿದ್ಯಾರ್ಥಿ ಜೀವನದಿಂದಲೇ ಶ್ರಮಜೀವಿಯಾಗಿ ಸಾಕಷ್ಟು ಅನುಭವಗಳನ್ನು ಸಂಪಾದಿಸಿದವರು. ಕೃಷಿಕಾರ್ಯ, ಕಿರಾಣಿ ಅಂಗಡಿ, ನಾಟಕ ರಚನೆ, ಕಂಪನಿಯ ಮ್ಯಾನೇಜರ್, ಮಾಲ್ಕಿ ಎಂದೆಲ್ಲ ಸುತ್ತಾಡಿದ 'ಕವಿಕಲಾಧರ' ಅರಿಷಿಣಗೋಡಿ ನಾಟಕ ಪ್ರಪಂಚದ 'ಆಲ್‌ರೌಂಡರ್'. ಶಿಸ್ತಿನ ಕಲಾತ್ಮಕತೆಯ ನಾಟಕಗಳಿಗೆ ಹೆಸರಾದ ಅವರು ತಮ್ಮ ಸಂಪೂರ್ಣ ಕಲಾಪ್ರತಿಭೆಯನ್ನು, ವೃತ್ತಿ ಜೀವನವನ್ನು ಕರ್ನಾಟಕದೊಳಗೆಯೇ ಪರೀಕ್ಷಿಸಿಕೊಂಡವರು. ಎಲ್ಲವನ್ನೂ ಆಡದೇ ಮಾಡಿ ಜನಪ್ರಿಯರಾದರು. ಪೌರಾಣಿಕ, ಐತಿಹಾಸಿಕಗಳಿಗಿಂತ ಸಾಮಾಜಿಕ ನಾಟಕಗಳನ್ನೇ ಹೆಚ್ಚಾಗಿ ಪ್ರಯೋಗಿಸಿ ಯಶಸ್ವಿಯಾದವರು. ತಮ್ಮ ಬದುಕಿನಲ್ಲಿ ಬಂದ ಅನುಭವಗಳನ್ನೇ ಆಧರಿಸಿ ಅವರು ಬರೆದ ಹಲವಾರು ನಾಟಕಗಳು ಜೀವಂತಿಕೆಯಿಂದ ತುಂಬಿವೆ. ತಮ್ಮ ಸಮಕಾಲೀನ ನಾಟಕಕಾರರಿಂದಲೂ ಬಹಳಷ್ಟು ಕಲಿತಿರುವ ಅರಿಷಿಣಗೋಡಿಯವರು ಬರೆದ 'ಲಂಚ ಸಾಮ್ರಾಜ್ಯ', 'ಬಸ್ ಕಂಡಕ್ಟರ್', 'ಸೈನಿಕನ ಸಹೋದರಿ', 'ಕಣ್ಣಿದ್ದೂ ಕುರುಡ', 'ಸೊಸೆ ಹಾಕಿದ ಸವಾಲು' ಮುಂತಾದ ನಾಟಕಗಳು ವೃತ್ತಿರಂಗದಲ್ಲಿ ಜನಜನಿತವಾದಂಥವು. ಶಿಸ್ತು, ನಿಯತ್ತು, ಪ್ರೀತಿಯಿಂದ ನಡೆದುಕೊಂಡು ಬಂದ ಬಿ.ಆರ್. ಅರಿಷಿಣಗೋಡಿ ಅನೇಕ ಕಂಪನಿಗಳಿಗೆ, ಮಾಲೀಕರಿಗೆ ಈಗಲೂ ಸವಾಲಾಗಿದ್ದಾರೆ.

ಈಗಿನ ಹನ್ನೊಂದು ಪುಸ್ತಕಗಳನ್ನು ಸಕಾಲದಲ್ಲಿ ಬರೆದುಕೊಟ್ಟ ಎಲ್ಲ ಲೇಖಕರಿಗೆ ಹಾಗೂ ನಾಟಕ ಅಕಾಡೆಮಿಯ ಮೂಲಕ ಅವನ್ನು ಪ್ರಕಟಿಸುವಲ್ಲಿ ಎಲ್ಲ ರೀತಿಯಿಂದಲೂ ನೆರವಾದ ಆತ್ಮೀಯರಾದ ಸಿ.ಜಿ.ಕೆ., ಕೆ.ವಿ. ನಾಗರಾಜಮೂರ್ತಿ, ಹೂಲಿ ಶೇಖರ್, ಟಿ. ರಘು ಮತ್ತು ಬಿ.ಟಿ. ಮುನಿರಾಜಯ್ಯ ಹಾಗೂ ಸಿದ್ದೇಶ್ವರ ಮುದ್ರಣಾಲಯದ ಎಸ್. ಶಿವದೇವ್, ರಕ್ಷಾಪುಟದ ವಿನ್ಯಾಸ ಮಾಡಿಕೊಟ್ಟ ಜಿ.ಕೆ. ಶಿವಣ್ಣ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಬೆಂಗಳೂರು
೧೫-೪-೨೦೦೦

**ಸಿದ್ಧಲಿಂಗ ಪಟ್ಟಣಶೆಟ್ಟಿ**
ಸಂಪಾದಕ ಸಮಿತಿಯ ಪರವಾಗಿ

# ಪರಿಷ್ಕೃತ ಮುದ್ರಣ

ಶ್ರೀ ಹುಚ್ಚೇಶ್ವರ ನಾಟ್ಯ ಸಂಘದ ಮಾಲೀಕರಾದ ಬಿ.ಆರ್.ಅರಿಷಿಣಗೋಡಿ ವೃತ್ತಿ ರಂಗಭೂಮಿಯ ಹಿರಿಯ ರಂಗ ಚೇತನ. ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತರು. ಕಂಪನಿಯ ನಾಲ್ಕು ಶಾಖೆಗಳನ್ನು ಏಕಕಾಲಕ್ಕೆ ನಡೆಸಿದ ಧೀಮಂತರು. ಕಲಾವಿದರ ಭವಿಷ್ಯಕ್ಕೆ ದಾರಿ ದೀಪವಾದವರು. ಎಂಬತ್ತು ವರ್ಷ ದಾಟಿದ ಅವರನ್ನು ಪ್ರಸಕ್ತ ವರ್ಷ ವಿಶೇಷವಾಗಿ ಸನ್ಮಾನಿಸಬೇಕು ಎಂದು ಕರ್ನಾಟಕ ನಾಟಕ ಅಕಾಡೆಮಿಯ ಸರ್ವಸದಸ್ಯರ ಸಭೆ ತೀರ್ಮಾನ ಕೈಗೊಂಡಿತ್ತು.

ಜುಲೈ 15 ರಂದು ಜರುಗಿದ ಸ್ಥಾಯಿ ಸಮಿತಿ ಸಭೆ ಕಾರ್ಯಕ್ರಮದ ಅಂತಿಮ ರೂಪುರೇಷೆಯನ್ನು ಸಿದ್ಧಪಡಿಸಿತು. ಇಳಕಲ್‌ನಲ್ಲಿ ಆಗಸ್ಟ್ 9 ರಂದು ಅರಿಷಿಣಗೋಡಿ ಅವರಿಗೆ ವಿಶೇಷ ಗೌರವದ ಜತೆಗೆ ಅವರ ನಾಟಕ ಕಂಪನಿಯಲ್ಲಿ ಹೆಚ್ಚು ಕಾಲ ದುಡಿದ 30 ಹಿರಿಯ ಕಲಾವಿದರನ್ನು ಸನ್ಮಾನಿಸಬೇಕು. ಅರಿಷಿಣಗೋಡಿ ಕೊಡುಗೆ ಕುರಿತ ವಿಚಾರ ಸಂಕಿರಣ ಹಾಗೂ ಪುಸ್ತಕ ಹೊರತರಬೇಕು. ಅವರೇ ಬರೆದ ನಾಟಕ ಪ್ರದರ್ಶನ ಏರ್ಪಡಿಸಬೇಕು ಎಂದು ನಿರ್ಧರಿಸಲಾಯಿತು. ಸ್ಥಾಯಿ ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ಗುಡಿಹಳ್ಳಿ ನಾಗರಾಜ, ಎಸ್.ಕೆ.ಕೊನೆಸಾಗರ ಹಾಗೂ ಅನ್ನಪೂರ್ಣ ಸಾಗರ ಅವರು ಸಭೆಯಲ್ಲಿ ಭಾಗವಹಿಸಿದ್ದರು.

'ರಂಗ ಸಂಪನ್ನರು' ಮಾಲಿಕೆಯಲ್ಲಿ 2000 ಇಸ್ವಿಯಲ್ಲಿ 'ಬಿ.ಆರ್. ಅರಿಷಿಣಗೋಡಿ' ಪುಸ್ತಕ ಹೊರಬಂದಿತ್ತು. ಎಲ್ಲ ಪ್ರತಿಗಳು ಖರ್ಚಾಗಿದ್ದವು. ಪುಸ್ತಕವನ್ನು ಪುನರ್ ಮುದ್ರಿಸಬೇಕಿತ್ತು. ಅಕಾಡೆಮಿಯಲ್ಲಿ ಅರಿಷಿಣಗೋಡಿ ಅವರಿಗೆ ಸಂಬಂಧಿಸಿದ ಚಿತ್ರಗಳು ಇರಲಿಲ್ಲ. ವಿವಿಧ ಮೂಲಗಳಿಂದ ಚಿತ್ರಗಳನ್ನು ಸಂಗ್ರಹಿಸಿ, ರಾಮಕೃಷ್ಣ ಮರಾಠೆ ಅವರಿಂದ ಪರಿಷ್ಕೃತ ಆವೃತ್ತಿ ಸಿದ್ಧಪಡಿಸಿ ಹೊರತರುವ ಜವಾಬ್ದಾರಿಯನ್ನು ಸಭೆಯು ಗುಡಿಹಳ್ಳಿ ನಾಗರಾಜ ಅವರಿಗೆ ವಹಿಸಿತು. ಅದನ್ನವರು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಫಲವಾಗಿ ಬಿ.ಆರ್.ಅರಿಷಿಣಗೋಡಿ ಅವರ ಕುರಿತ ಪರಿಷ್ಕೃತ, ಪುನರ್ ಮುದ್ರಿತ ಪುಸ್ತಕ ನಿಮ್ಮ ಕೈಯಲ್ಲಿದೆ.

31-07-2015

–ಎಲ್.ಬಿ. ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

**ಪ್ರಕಟಣಾ ಸಮಿತಿ ಸದಸ್ಯರು:**

ಕೆ. ಜಗುಚಂದ್ರ, ಉಮೇಶ್ ಸಾಲಿಯಾನ್, ಹಾಲ್ಕುರಿಕೆ ಶಿವಶಂಕರ್

**ಎಲ್.ಬಿ. ಶೇಖ (ಮಾಸ್ತರ)**
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

**, ಸದಸ್ಯರು:**

| | |
|---|---|
| ರಾಜಪ್ಪ ಕಿರಗಸೂರು | ವಿ.ಎನ್.ಅಕ್ಕಿ |
| ಎನ್.ಕೆ.ರಾಮಕೃಷ್ಣ | ಕಲ್ಪನಾ ನಾಗನಾಥ್ |
| ಎಂ.ಎಸ್.ಗುಣಶೀಲನ್ | ಶ್ರೀಪಾದ ಭಟ್ |
| ಎ.ವರಲಕ್ಷ್ಮಿ | ಪಿ.ತಿಪ್ಪೇಸ್ವಾಮಿ |
| ಗುಡಿಹಳ್ಳಿ ನಾಗರಾಜ | ಎಲ್.ಎಚ್.ರಂಗನಾಥಪ್ಪ |
| ಬಿ.ಎಂ.ರಾಮಚಂದ್ರ | ಹಾಲ್ಕುರಿಕೆ ಶಿವಶಂಕರ್ |
| ಉಮೇಶ್ ಸಾಲಿಯಾನ್ | ಕೆ.ಜಗುಚಂದ್ರ |
| ಮುದ್ದಣ್ಣ ರಟ್ಟೆಹಳ್ಳಿ | ಅನ್ನಪೂರ್ಣ ಸಾಗರ |
| ಎಚ್.ಷಡಾಕ್ಷರಪ್ಪ ಹೊಸಮನಿ | ಎಸ್.ಕೆ. ಕೊನೆಸಾಗರ |

**ರಿಜಿಸ್ಟ್ರಾರ್ :** ಸಿದ್ಧರಾಜು
**ಅಧೀಕ್ಷಕರು :** ಎಂ.ರಾಜು
**ಕಚೇರಿ ಸಿಬ್ಬಂದಿ:** ಕೆ.ರೇವಣ್ಣ, ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು: ಕೆ.ಎ. ದಯಾನಂದ, ಜಂಟಿ ನಿರ್ದೇಶಕರು: ಮಲ್ಲಿಕಾರ್ಜುನಸ್ವಾಮಿ, ಬಲವಂತರಾವ್ ಪಾಟೀಲ, ಅಶೋಕ ಚಲವಾದಿ, ಗೆಜೆಟೆಡ್ ಮ್ಯಾನೇಜರ್: ಮಹದೇವಯ್ಯ, ಅರ್ಥ ಸದಸ್ಯರು: ಕೆ. ಹೈದರಾಲಿ ಖಾನ್, ಅಧೀಕ್ಷಕರು: ಡಿ.ಎಂ. ರವಿಕುಮಾರ್

# ಲೇಖಕನ ಮಾತು

ಬಿ.ಆರ್. ಅರಿಷಿಣಗೋಡಿ – ಮೌನ ತಪಸ್ವಿ – ಆಡದೆ ಮಾಡಿ ತೋರಿಸಿದ ರಂಗಸಾಧಕ. ಅವರಲ್ಲಿ ವೃತ್ತಿಮತ್ಸರ ಕಂಡವರಿಲ್ಲ. ಅವರು ವೃತ್ತಿ ಬಾಂಧವರಿಗೆ ಎರಡು ಬಗೆಯಲಿಲ್ಲ. ನೆಲೆ ತಪ್ಪಿ ಬಂದವರಿಗೆ ಅವರು ನಿಲ್ದಾಣ ಕಲ್ಪಿಸಿದರು. ಹಾಗಾಗಿ ವೃತ್ತಿರಂಗಭೂಮಿ ವಲಯದಲ್ಲಿ ಅವರು 'ಅಜಾತಶತ್ರು' ಎಂದೇ ಹೆಸರಾದರು. ತನ್ನ ಕಂಪನಿ, ತನ್ನ ಗುರಿ, ತನ್ನದೇ ದಾರಿಯಲ್ಲಿ ನಡೆದು ಉನ್ನತವನ್ನು ಸಾಧಿಸಿದರು. ಬೇರೊಬ್ಬರಿಗೆ ಮಾದರಿಯಾದರು. ನಲವತ್ತು ವರುಷ ನಾಟಕ ಕಂಪನಿ ನಡೆಸಿದರು. ಕೆಲವು ಕಾಲ ಮೂಲ ಕಂಪನಿಯ ಜೊತೆಗೆ ಮೂರು ಬ್ರಾಂಚ್ ಕಂಪನಿ – ನಾಲ್ಕು ಕಂಪನಿಗಳನ್ನು ನಡೆಸಿದರು. ಇದು ಅವರ ದಕ್ಷತೆಗೆ ನಿದರ್ಶನ. ಕಂಪನಿ ತೇರನ್ನು ಎಳೆದು ಎಳೆದು 2003ಕ್ಕೆ ನಿಲ್ಲಿಸಿದರು. ಅದೇ ವರ್ಷ ಅವರಿಗೆ ಪ್ರತಿಷ್ಠಿತ ಗುಬ್ಬಿ ವೀರಣ್ಣ ಪ್ರಶಸ್ತಿ ಬಂದಿತು. ಅಲ್ಲಿಂದ ಅವರು ಕಮತಗಿಗೆ ಹೋದರು. ವಿಶ್ರಾಂತ ಜೀವನ ಆರಂಭಿಸಿದರು. ಈ ಮಾತಿಗೆ ಈಗ ಹನ್ನೆರಡು ವರ್ಷ. ಅವರಿಗೋ ಎಂಭತ್ತೆರಡರ ಪ್ರಾಯ, ಆರೋಗ್ಯವಾಗಿದ್ದಾರೆ.

ಆಯುಷ್ಯದ ಈ ಇಳಿಹೊತ್ತಿನಲ್ಲಿ ಅವರಿಗೆ ಅವರ ಸಾಧನೆ, ಸಿದ್ಧಿಗಳನ್ನು ಅವರಿಗೇ ನೆನಪಿಸುವ, ಆ ಮೂಲಕ ಇವತ್ತಿನ ರಂಗಕರ್ಮಿಗಳಿಗೆ ಹೊಸ ಹುರುಪು ತಂದುಕೊಳ್ಳುವ ಮತ್ತು 'ನಾವು ನಿಮ್ಮನ್ನು ಮರೆತಿಲ್ಲ' ಎಂದು ತಿಳಿಸಿಕೊಡುವ ಮಹತ್ವದ ಪ್ರಯತ್ನವನ್ನು ಕರ್ನಾಟಕ ನಾಟಕ ಅಕಾಡೆಮಿ ಹಮ್ಮಿಕೊಂಡಿರುವುದು ಸ್ತುತ್ಯಾರ್ಹವಾದ ಕೆಲಸ. ನಮ್ಮ ಹಿರಿಯರಿಗೆ ನಾವು ತೋರಿಸುವ ಗೌರವದ ಪರಿ ಇದು. ಇದೇ ಸಂದರ್ಭದಲ್ಲಿ ಅವರನ್ನು ಕುರಿತು ಹದಿನೈದು ವರುಷಗಳ ಹಿಂದೆ ನಾನು 'ರಂಗಸಂಪನ್ನರು' ಮಾಲಿಕೆಗೆ ಬರೆದ ಪುಸ್ತಕವನ್ನು ಪುನಃ ಮುದ್ರಿಸುತ್ತಿರುವುದು ವೈಯಕ್ತಿಕವಾಗಿ ನನಗೆ ಸಂತೋಷದ ಸಂಗತಿಯೇ. ಆಗ ಬರೆದಾಗ ಕಮತಗಿ ಕಂಪನಿ ಇತ್ತು, ಈಗ ಇಲ್ಲ, ಅಂಥ ಬದಲಾವಣೆಗಳನ್ನು ಸೇರಿಸಿಕೊಂಡ ಈ ಪರಿಷ್ಕೃತ ಆವೃತ್ತಿ ಪ್ರಕಟಿಸುತ್ತಿರುವ ಮಾನ್ಯ ಎಲ್.ಬಿ. ಶೇಖ ಮಾಸ್ತರ ಅವರ ಸಾರಥ್ಯದ ಕರ್ನಾಟಕ ನಾಟಕ ಅಕಾಡೆಮಿಯ ಟೀಮಿಗೆ ನಾನು ಆಭಾರಿಯಾಗಿರುವೆ. ಪರಿಷ್ಕೃತ ರೂಪಕ್ಕೆ ಸಲಹೆ ಸೂಚನೆಗಳನ್ನಿತ್ತ ಗೆಳೆಯ ಗುಡಿಹಳ್ಳಿ ನಾಗರಾಜ ಅವರಿಗೆ, ಅರಿಷಿಣಗೋಡಿಯವರ ಬಗೆಗೆ ಪಿಎಚ್.ಡಿ. ಮಾಡಿದ ನಲವತವಾಡ ಅವರಿಗೆ ಧನ್ಯವಾದಗಳು. ಬಿ.ಆರ್. ಅರಿಷಿಣಗೋಡಿ ಅವರು ನಮ್ಮ ನಡುವೆ ನೂರ್ಕಾಲ ಬಾಳಲಿ ಎಂದು ಹಾರೈಸುವೆ.

**–ಡಾ. ರಾಮಕೃಷ್ಣ ಮರಾಠೆ**

ಬೆಳಗಾವಿ
9–7–2015

# ಪರಿವಿಡಿ


೧. ಪೂರ್ವರಂಗ ೧೧

೨. ಬೆನಕಟ್ಟಿಯಿಂದ ಕಮತಗಿಗೆ ೧೪

೩. ಶ್ರೀ ಹುಚ್ಚೇಶ್ವರ ನಾಟ್ಯಸಂಘ, ಕಮತಗಿ ೨೧

೪. ಕಲಾವಿದರು ೩೨

೫. ಕವಿ, ಕಲಾವಿದ ೪೦

೬. ನಾಟಕ ಸಾಹಿತ್ಯ ೪೨

೭. ದೇಹ ದಣಿಯಿತು ಕಂಪನಿ ಮುಚ್ಚಿತು ೬೪

೮. ಸಮಾರೋಪ ೬೬

೯. ಅನುಬಂಧ ೬೭

೧೦. ಚಿತ್ರಗಳು ೭೫

# ೧. ಪೂರ್ವರಂಗ

ರಂಗಭೂಮಿಯ ಚರಿತ್ರೆಯೇ ಹಾಗೆ. ಬರೆದಷ್ಟೂ ಅದರಿಂದ ಹೊರಗುಳಿಯುವ ವಿಷಯವೇ ಬಹಳ. ಕನ್ನಡ ರಂಗಭೂಮಿಯ ಕುರಿತು ಸಾಕಷ್ಟು ಅಧ್ಯಯನ ನಡೆದಿದೆ. ಅಷ್ಟಿಷ್ಟು ಚರಿತ್ರೆ ಗ್ರಂಥಗಳೂ ಪ್ರಕಟವಾಗಿವೆ. ಅವನ್ನೆಲ್ಲ ನೋಡಿದಾಗ ಅಷ್ಟೇನೂ ತೃಪ್ತಿಯೆನಿಸುವದಿಲ್ಲ. ಇನ್ನೂ ಬರೆಯಬೇಕಾದದ್ದು ಬಹಳವಿದೆ ಎನಿಸುತ್ತದೆ. ಬಹುಶಃ ರಂಗಭೂಮಿಯ ಸ್ವರೂಪವೇ ಅಂಥದ್ದು. ಅದರ ಚರಿತ್ರೆ ಬರೆಯುವುದು ಎಂದರೆ ಬಯಲಿಗೆ ಆಲಯ ಕಟ್ಟಿದಂತೆಯೇ. ಕನ್ನಡ ನಾಡಿನೊಂದರಲ್ಲಿಯೇ ನೋಡಿದರೆ ಸಾಕು, ಎಷ್ಟೊಂದು ಭಾಷಿಕ ವೈವಿಧ್ಯ, ಎಷ್ಟೊಂದು ಪ್ರಾದೇಶಿಕ ವೈವಿಧ್ಯ? ಅವುಗಳಿಗೆ ತಕ್ಕಂತೆಯೆ ರಂಗಭೂಮಿಯ ವೈಶಿಷ್ಟ್ಯ ಕೂಡ. ಕರಾವಳಿಗುಂಟ ಹಬ್ಬಿರುವ ಯಕ್ಷಗಾನ, ಅದರಲ್ಲಿ ತಿಟ್ಟುಗಳು, ಆಧುನಿಕ ಪ್ರಯೋಗಗಳು; ಬಯಲು ಸೀಮೆಯಲ್ಲಿ ಮೂಡಲಪಾಯ ದೊಡ್ಡಾಟಗಳು, ಡಪ್ಪಿನಾಟಗಳು, ಸಂಗ್ಯಾ ಬಾಳ್ಯಾ, ಶ್ರೀಕೃಷ್ಣ ಪಾರಿಜಾತ, ಅರಬರಾಟ... ಹೀಗೆಯೇ ಆಧುನಿಕ ಸಂದರ್ಭದಲ್ಲಿ ತಲೆಯೆತ್ತಿದ ನಾಟಕ ಕಂಪನಿಗಳು, ಅವುಗಳಿಗೆ ಎದುರಾಗಿ ಕ್ರಿಯಾಶೀಲವಾದ ವೈಚಾರಿಕ ನಾಟಕಗಳು... ಇತ್ತೀಚಿನ ರೆಪರ್ಟರಿಗಳು... ಇವನ್ನೆಲ್ಲ ಕಣ್ಮುಂದೆ ತಂದುಕೊಂಡರೆ ಇವೆಲ್ಲವುಗಳ ಕುರಿತು ಆಗಿರುವ ಅಧ್ಯಯನವು ಆಗಬೇಕಾಗಿರುವ ಅಧ್ಯಯನದ ಕಿಂಚಿತ್ ಭಾಗ ಮಾತ್ರ, ಹಾಗಾಗಿ ಸಮಗ್ರ ರಂಗಭೂಮಿಯ ಚರಿತ್ರೆ ಎಂಬುದು ಆದರ್ಶದ ಮಾತು ಅಷ್ಟೇ. ಹಾಗೆಂದು ಅಧ್ಯಯನದ ಬಗ್ಗೆ ಚರಿತ್ರೆಯ ಬಗ್ಗೆ ನಿರಾಶರಾಗಬೇಕಾದುದಿಲ್ಲ. ನಮ್ಮ ನಮ್ಮ ಮಿತಿಯಲ್ಲಿ, ನಮಗೆ ಲಭ್ಯವಾದ ಸಾಮಗ್ರಿಯಲ್ಲಿ ರಂಗಭೂಮಿಯ ಕಥೆಯನ್ನು ದೇಶ ಕಾಲಕ್ಕೆ ಅನುಗುಣವಾಗಿ ಕಟ್ಟುತ್ತಲೇ ಇರಬೇಕು. ಅದು ಭಾಷೆಗೆ ವ್ಯಾಕರಣ ಬರೆಯುವಂಥ ಕೆಲಸ.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಅಸ್ತಿತ್ವಕ್ಕೆ ಬಂದ 'ಕಂಪನಿ ನಾಟಕ' ಅನ್ನುವ ರಂಗಕಲೆ ನಮ್ಮ ಪರಂಪರೆಯ ರಂಗಭೂಮಿಗೆ ಹೊಸದಾಗಿತ್ತು. ಇದು ಕನ್ನಡ ನಾಡು ನುಡಿಯ ಅಭಿಮಾನದಿಂದ ಪ್ರೇರಿತವಾಗಿ ಅಸ್ತಿತ್ವಕ್ಕೆ ಬಂದಿತ್ತು. ಮರಾಠಿ ನಾಟಕಮಯವಾಗಿದ್ದ ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಧಾರವಾಡ ಸೀಮೆಯಲ್ಲಿ , ಶಾಲಾ ಮಾಸ್ತರರಾಗಿದ್ದ ಶಾಂತಕವಿಗಳು, ನುಡಿಗೆ ಒದಗಿದ ದುಃಸ್ಥಿತಿಯನ್ನು, ನಾಟಕ, ನಟನೆಯಿಂದ ಕಳೆಯಬೇಕೆಂದು ಗದುಗಿನಲ್ಲಿ ೧೮೭೦ರ ವೇಳೆಗೆ 'ಶ್ರೀ ವೀರನಾರಾಯಣ ಕೃತಪುರ ನಾಟಕ ಮಂಡಳಿ' ಆರಂಭಿಸಿದರು. ಶಾಂತಕವಿಗಳ ಪ್ರಯತ್ನಕ್ಕೆ ರಸಿಕರಿಂದ ತುಂಬು ಹೃದಯದ ಪ್ರೋತ್ಸಾಹ ಸಿಕ್ಕಿತು. 'ಕನ್ನಡದಲ್ಲಿಯೂ ಚೆಂದ ವೇಷಗಳಿವೆ, ಚೆಲುವ ರೂಪಗಳಿವೆ, ಮಧುರ ಹಾಡುಗಳಿವೆ; ಭಳಿರೆ ಇವರಾಡುವರೆ, ನಾವು ನೋಡುವೆವು' ಎಂದು ಪ್ರೇಕ್ಷಕರು

ಮೆಚ್ಚುಗೆ ವ್ಯಕ್ತಪಡಿಸಿದರು. ಇಲ್ಲಿಂದಲೇ ಕಂಪನಿ ನಾಟಕ ಚಟುವಟಿಕೆಗಳನ್ನು ಗುರುತಿಸಬಹುದು. ಆಮೇಲೆ ಈ ಚಟುವಟಿಕೆಗಳು ಬೆಳಗಾವಿ, ಗೋಕಾಕ, ಬಾಗಲಕೋಟೆ ಪರಿಸರದಲ್ಲಿ ಪ್ರಾರಂಭವಾದವು. ಬಾಗಲಕೋಟೆ ಪ್ರದೇಶದ ಗುಳೇದಗುಡ್ಡ, ಬಾದಾಮಿ, ಹುನುಗುಂದ, ಇಳಕಲ್ಲ, ಕಲಾದಗಿ ಮುಂತಾದ ಊರುಗಳಿಗೂ ಕಂಪನಿ ನಾಟಕಗಳು ವಿಸ್ತಾರಗೊಂಡವು.

'ಕಂಪನಿ' ಎಂಬ ಹೆಸರಿಗೆ ಅನ್ವರ್ಥಕವಾಗಿ ತಲೆಯೆತ್ತಿದ ಮೊದಲ ಶ್ರೀಮಂತ ಕಂಪನಿ 'ಶ್ರೀ ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿ ಕೊಣ್ಣೂರ' (೧೯೦೦) – ಈ ಕಂಪನಿ ಅಸ್ತಿತ್ವಕ್ಕೆ ಬರುವುದಕ್ಕಿಂತ ಮೊದಲೇ ಗುಳೇದಗುಡ್ಡದಲ್ಲಿ 'ಬಾಲ ನಾಟಕ ಮಂಡಳಿ' (೧೮೮೫), 'ಹುಲ್ಲೂರ ಪರಪ್ಪನವರ ನಾಟಕ ಮಂಡಳಿ' (೧೮೯೭) ಹೊಸ ಮಾದರಿಯ ನಾಟಕಗಳನ್ನು ಆಡುತ್ತಿದ್ದವು. ಕೊಣ್ಣೂರ ಶಿವಮೂರ್ತಿ ಸ್ವಾಮಿಗಳು ತಾವು ಕಟ್ಟಲಿರುವ ಕಂಪನಿಗೆ ಇಲ್ಲಿಂದಲೇ ಕಲಾವಿದರನ್ನು ಕರೆದುಕೊಂಡು ಹೋದ ಬಗೆಗೆ ದಾಖಲೆಗಳಿವೆ. ಕಂಪನಿ ನಾಟಕದ 'ಮೊದಲ ಶ್ರೇಷ್ಠ ನಟಿ' ಎಂಬ ಹೆಗ್ಗಳಿಕೆಗೆ ಪಾತ್ರಳಾದ ಯಲ್ಲೂಬಾಯಿ, ಅವಳ ಪತಿ ಗುರುಲಿಂಗಪ್ಪ ಗೊಂಬಿ, ಇವರ ಸಾಕು ಮಗಳು– ಮುಂದೆ 'ಗಾನರತ್ನ' ಬಿರುದಿನಿಂದ ಕನ್ನಡ ರಂಗಭೂಮಿಯಲ್ಲಿ ಮೆರೆದ ಗಂಗೂಬಾಯಿ – ಇವರೆಲ್ಲ ಗುಳೇದಗುಡ್ಡದವರು. ಕೊಣ್ಣೂರ ಕಂಪನಿ ನಿಂತ ಮೇಲೆ ಈ ಮೂವರೂ ವಾಮನರಾವ್ ಮಾಸ್ತರರ 'ವಿಶ್ವಗುಣಾದರ್ಶ ಸಂಗೀತ ನಾಟಕ ಮಂಡಳಿ'(೧೯೧೪)ಯಲ್ಲಿ ಸೇವೆ ಸಲ್ಲಿಸಿ ಆಮೇಲೆ 'ಶ್ರೀ ಕೃಷ್ಣ ನಾಟಕ ಮಂಡಳಿ' (೧೯೨೫) ಹೆಸರಿನ ಸ್ವಂತ ಕಂಪನಿ ಕಟ್ಟಿ ಸಂಗೀತ ನಾಟಕಗಳನ್ನು ಅದ್ಭುತವಾಗಿ ಪ್ರದರ್ಶಿಸಿದರು.

ಬಾಗಲಕೋಟೆ ಪ್ರದೇಶದ ಪ್ರತಿಭಾವಂತ ನಾಟಕಕಾರರಲ್ಲಿ ಕಂದಗಲ್ಲ ಹಣಮಂತರಾಯರು ಅಗ್ರಗಣ್ಯರು. ಭಾಷೆ, ಸಂಭಾಷಣೆಯೇ ಅವರ ನಾಟಕಗಳ ಜೀವಾಳ. ಅವರು ಲಲಿತ ಕಲೋದ್ಧಾರಕ (೧೯೩೩), ಶ್ರೀ ಅರವಿಂದ (೧೯೪೦) ಜಯ ಅರವಿಂದ (೧೯೪೨) ಹೆಸರಿನ ಮೂರು ನಾಟಕ ಮಂಡಳಿಗಳನ್ನು ಹುಟ್ಟು ಹಾಕಿ ನಡೆಸಿದರು. ಅವರ ನಾಟಕ ರಚನೆ, ನಿರ್ದೇಶನದಲ್ಲಿ ಅಭಿಜಾತ ನಟನಟಿಯರ ಪಡೆಯೇ ನಿರ್ಮಾಣವಾಯಿತು. ರಾಯರಿಂದ ಸ್ಫೂರ್ತಿ ಪಡೆದು ಹಲವಾರು ನಾಟಕ ಕಂಪನಿಗಳು ಪ್ರಾರಂಭವಾದವು.

ಚಿತ್ತರಗಿ ಗಂಗಾಧರಸ್ವಾಮಿಗಳ 'ಕುಮಾರ ವಿಜಯ ನಾಟ್ಯ ಸಂಘ' (೧೯೪೨), ಸುಳ್ಳದ ಮಲ್ಲನಗೌಡ ದೇಸಾಯಿಯವರ 'ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ' (೧೯೬೬), ಇಳಕಲ್ಲಿನ ಮೆದಿಕೇರಿ ಯಮನಪ್ಪ, ಗುರಪ್ಪ ಸಹೋದರರ ಕಂಪನಿ, ಇಳಕಲ್ಲಿನವರೇ ಆದ ಗುಡೂಸಾಬರ 'ಸರ್ವೋದಯ ನಾಟ್ಯಸಂಘ' – ಬಾಗಲಕೋಟೆ ಪರಿಸರದ ಈ ಕಂಪನಿಗಳು ನಟ–ನಟಿಯರನ್ನು ಕೂಡಿಸಿ, ನಾಟಕಗಳನ್ನು ಆಡಿ ರಂಗಭೂಮಿಯಲ್ಲಿ ಮಿಂಚಿ ಮರೆಯಾದದ್ದು ಈಗ ಇತಿಹಾಸ.

ಸ್ವತಂತ್ರ ಮತ್ತು ಅನುವಾದಿತ ನಾಟಕಗಳನ್ನು ಬರೆದ ಕೆರೂರು ವಾಸುದೇವಾಚಾರ್ಯ, ಕರ್ನಾಟಕದ ಶೇಕ್ಸಪಿಯರ್ ಕಂದಗಲ್ಲ ಹಣಮಂತರಾಯರು, ಪಠಾಣ ಪಾಶ ನಾಟಕದಿಂದ ಜನಪ್ರಿಯರಾಗಿದ್ದ ಎಲ್. ಎಸ್. ಇನಾಮದಾರ, ನೂರರವತ್ತಕ್ಕೂ ಹೆಚ್ಚು ನಾಟಕಗಳನ್ನು ಬರೆದ ಎಚ್.ಆರ್. ಭಸ್ಮೆ, ಪಿ.ಬಿ. ಧುತ್ತರಗಿ, ಮಾರುತೇಶ ಮಾಂಡ್ರೆ ಮುಂತಾದ ಶ್ರೇಷ್ಠ ನಾಟಕಕಾರರ ಪರಂಪರೆ ಈ ನೆಲದ ವಿಶಿಷ್ಟ ಕೊಡುಗೆಯೆಂದೇ ಹೇಳಬೇಕು.

ರಂಗಭೂಮಿಯ ರಾಣಿ ಮಂಕಣಿ ಮಾನಪ್ಪ, ಕಲಿಯುಗದ ಭೀಮ ಅದೃಶ್ಯಪ್ಪ ಮಾನವಿ, ಕಲಿಯುಗದ ಶಕುನಿ ಲಾಠಿ ಗುಂಡಪ್ಪ, ವೀರಣ್ಣ ಜಾಲಿಹಾಳ, ಮಧ್ವರಾಜ ಉಮರ್ಜಿ, ಅಬ್ಬಾಸ ಅಲಿ, ಗುರುಸಿದ್ದಯ್ಯ ಇದ್ದಿಲಗಿ, ಶಂಕ್ರಯ್ಯ ರಕ್ಕಸಗಿ ಇತ್ಯಾದಿ ನಟರು; ಯಲ್ಲೂಬಾಯಿ ಗುಳೇದಗುಡ್ಡ, ಗಂಗೂಬಾಯಿ ಗುಳೇದಗುಡ್ಡ, ಪ್ರಮೀಳಾ ಗುಡೂರ, ಮಮತಾ ಗುಡೂರ, ಶಾಂತಾಬಾಯಿ ಪತ್ತಾರ ಇತ್ಯಾದಿ ನಟಿಯರು; ಸೀತಾರಾಮ ಕಲಾದಗಿ ಪೇಂಟರ್, ಇಳಕಲ್ಲಿನ ಧೋತ್ರೆ ಪೇಂಟರ್, ಕೆಂಧೂಳಿ ಪೇಂಟರ್ ಇತ್ಯಾದಿ ರಂಗಶಿಲ್ಪಿಗಳು – ಇವರೆಲ್ಲರ ಸಾಧನೆ ಸಿದ್ಧಿಯಿಂದ ರಂಗಭೂಮಿ ಕೆಲವು ಕಾಲ ವೈಭವದಿಂದ ಮೆರೆಯುವಂತಾಯಿತು. ಇದೇ ಪ್ರದೇಶದ ಮತ್ತೊಂದು ಹೆಮ್ಮೆಯ ಕೊಡುಗೆಯೆಂದರೆ ಬಿ.ಆರ್. ಅರಿಷಿಣಗೋಡಿ. 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ' ಇದರ ಮಾಲೀಕರು. ಇವರು ನಮ್ಮ ನಾಡಿನ ರಂಗಸಂಪನ್ನ ವ್ಯಕ್ತಿಗಳಲ್ಲಿ ಒಬ್ಬರು.

ಎಂಭತ್ತರ ಪ್ರಾಯದ ಭೀಮಪ್ಪ ರಂಗಪ್ಪ ಅರಿಷಿಣಗೋಡಿ ಕನ್ನಡ ವೃತ್ತಿರಂಗಭೂಮಿ ಕಂಡ ಅಪರೂಪದ ನಟ, ನಾಟಕಕಾರ, ನಾಟಕ ಕಂಪನಿ ಮಾಲೀಕ. ಅವರು ಮಾತನಾಡಿ ತೋರಿಸಿದ್ದಕ್ಕಿಂತ ಮಾಡಿ ತೋರಿಸಿದ್ದೇ ಹೆಚ್ಚು. 'ಮಾಡಿದೆನೆಂಬ' ಅಹಂಭಾವ ಅವರಲ್ಲಿರಲಿಲ್ಲ. ಬದುಕಿನ ಮಾರ್ಗದಲ್ಲಿ ಅದೆಲ್ಲ ತಾನೇ ತಾನಾಗಿ ಸಂಭವಿಸಿತೆನ್ನುವ ನಿರಾಳಭಾವ ಅವರದು. ಕಟ್ಟಿದ ಒಂದು ಕಂಪನಿ ನಾಲ್ಕಾಗಿ ಬೆಳೆಯಿತು. ನೂರಾರು ಕಲಾವಿದರಿಗೆ ಆಸರೆ ನೀಡಿತು. ಅಸಂಖ್ಯಾತ ರಸಿಕರ ಕಣ್ಮನ ತಣಿಸಿತು. ಹುಚ್ಚೇಶ್ವರ ಶರಣನ ತಪೋಭೂಮಿಯಾದ ಕಮತಗಿಯಲ್ಲಿ ತಮ್ಮ ಸಂಧ್ಯಾಕಾಲ ಕಳೆಯುತ್ತಿರುವ ಬಿ.ಆರ್. ಅರಿಷಿಣಗೋಡಿಯವರ ಸಂಜೆಗಣ್ಣಿನ ಹಿನ್ನೋಟ ನೋಡೋಣ.

# ೨. ಬೆನಕಟ್ಟಿಯಿಂದ ಕಮತಗಿಗೆ

ಬಿ.ಆರ್. ಅರಿಷಿಣಗೋಡಿ ಅವರು ಹುಟ್ಟಿದ್ದು ಬೆನಕಟ್ಟಿ ಎಂಬ ಊರಿನಲ್ಲಿ. ಅದು ಬಾಗಲಕೋಟೆಯಿಂದ ಸಂಗಮಕ್ಕೆ ಹೋಗುವ ಹಾದಿಯಲ್ಲಿ ಹತ್ತು ಕಿ.ಮೀ. ಅಂತರದಲ್ಲಿದೆ. ಬರಗಾಲಕ್ಕೆ ಹೆಸರಾದ ಊರು. ಅರಿಷಿಣಗೋಡಿ ಅವರು ಹೇಳುವಂತೆ ನೀರಿಗಾಗಿ ಊರ ಜನರು ಎರಡು ಕಿ.ಮೀ. ನಡೆದು ಹೋಗುತ್ತಿದ್ದರು. ಒಣ ಬೇಸಾಯವನ್ನೇ ನೆಚ್ಚಿಕೊಂಡಿದ್ದ ಅಲ್ಲಿಯ ರೈತರ ಜೀವನ ಕಷ್ಟಕರವಾಗಿತ್ತು. ಈ ಊರಿನ ಮಧ್ಯಮ ವರ್ಗದ ರೆಡ್ಡಿ ಮನೆತನದ ರಂಗಪ್ಪ, ಕಾಶವ್ವ ದಂಪತಿಗಳಿಗೆ ನಾಲ್ಕು ಜನ ಮಕ್ಕಳು. ಅವರಲ್ಲಿ ನಮ್ಮ ಚರಿತ್ರೆಯ ನಾಯಕ ಭೀಮಪ್ಪ ಸಣ್ಣವರು. ಇವರು ಹುಟ್ಟಿದ್ದು ೨೪, ಮಾರ್ಚ್ ೧೯೩೪ರಲ್ಲಿ. ಪ್ರಾಥಮಿಕ ಶಿಕ್ಷಣ ಬೆನಕಟ್ಟಿಯಲ್ಲಿಯೇ ಆಯಿತು. ಭೀಮಪ್ಪ ಹದಿಮೂರನೆಯ ವಯಸ್ಸಿನಲ್ಲಿ ಬಾಗಲಕೋಟೆಯ ಬಸವೇಶ್ವರ ಹೈಸ್ಕೂಲು ಸೇರಿದರು. ಭೀಮಪ್ಪ ಕ್ಲಾಸಿನಲ್ಲಿ 'ಹುಶಾರ ಹುಡುಗ'. ಮಗ ನಗರದಲ್ಲಿ ಓದುತ್ತಿದ್ದಾನೆಂಬುದು ಆ ತಾಯಿ ತಂದೆಗಳಿಗೆ ಖುಷಿಯೋ ಖುಷಿ. ಮಕ್ಕಳು ಓದಿ ನೌಕರಿ ಹಿಡಿಯಲೆಂದು ತಂದೆಯ ಆಶೆ. ಆದರೆ ಅದು ದೊಡ್ಡ ಮಕ್ಕಳಿಬ್ಬರಿಂದ ನೆರವೇರಿರಲಿಲ್ಲ. ದೊಡ್ಡ ಮಗ ಗಿರಿಯಪ್ಪನಿಗೆ ಓದು ತಲೆಗೆ ಹತ್ತಲಿಲ್ಲ. ಅವನು ಒಕ್ಕಲುತನಕ್ಕೆ ಶರಣಾದ. ರಾಯಪ್ಪ ಮುಲ್ಕೀ ಪರೀಕ್ಷೆಯವರೆಗೆ ಓದಿ ಅಣ್ಣನ ಹಾದಿಯನ್ನೇ ಹಿಡಿದ. ಇಂಥ ಸನ್ನಿವೇಶದಲ್ಲಿ ಭೀಮಪ್ಪ ಬಾಗಲಕೋಟೆಯ ಹೈಸ್ಕೂಲು ಸೇರಿದ್ದು ತಂದೆಯ ಆಶೆಗೆ ಮತ್ತೆ ಚಿಗುರೊಡೆಯಿತು.

ರಂಗಪ್ಪ ಅರಿಷಿಣಗೋಡಿ ಮೂವತ್ತು ಎಕರೆ ಜಮೀನಿನ ಒಡೆಯರಾಗಿದ್ದರು. ಅವರ ಬೇಸಾಯ ಮಳೆಯನ್ನೇ ಅವಲಂಬಿಸಿದ್ದರಿಂದ ಪರಿಸ್ಥಿತಿ ಏರುಪೇರಾಗಿ ತೊಂದರೆಯಾಗುತ್ತಿತ್ತು. ಮಳೆ ಬಂದರೆ ಬೆಳೆ. ಇಲ್ಲವಾದರೆ ಹೊಟ್ಟೆ ಹೊರೆಯುವುದಕ್ಕೂ ಕಷ್ಟ. ಸಕಾಲಕ್ಕೆ ಮಳೆ ಬಂದು ಒಂದು ವರುಷ ಚೆನ್ನಾಗಿ ಬೆಳೆ ಬಂದರೆ, ಅದನ್ನು ಹಿಡಿತದಲ್ಲಿಟ್ಟುಕೊಂಡು ಬಳಸಿ, ಮುಂದಿನ ವರುಷಕ್ಕೊಂದಿಷ್ಟು ಉಳಿಸಬೇಕೆಂಬ ಮಿತವ್ಯಯದ ಬದುಕು ಅವರದು. ಇದ್ದರೂ ಚಿಂತೆ, ಇರದಿದ್ದರೂ ಚಿಂತೆ – ಇದು ಬಯಲು ಸೀಮೆಯ ರೈತರ ಸಾಮಾನ್ಯ ಬವಣೆ. ಇಂಥ ಅನಿಶ್ಚಿತತೆಯ ಆತಂಕದಿಂದಾಗಿಯೇ ಅಲ್ಲಿಯ ಜನರು ನಿಯಮಿತ ಸಂಬಳ ತರುವಂಥ ಸರಕಾರಿ ನೌಕರಿ ಹಿಡಿಯಲು ಹಂಬಲಿಸುವರು. ರಂಗಪ್ಪನಾದರೂ ಮಗನು ಒಳ್ಳೆಯ ನೌಕರಿ ಹಿಡಿಯಬೇಕೆಂಬ ಕನಸು ಹೊತ್ತು ಅವನ ಓದಿಗೆ ಏರ್ಪಾಟು ಮಾಡಿದರು.

ಬಿ.ಆರ್. ಅರಿಷಿಣಗೋಡಿಯವರು ೧೯೫೨ರಲ್ಲಿ ಬಸವೇಶ್ವರ ಹೈಸ್ಕೂಲಿನಿಂದ ಮೆಟ್ರಿಕ್ ಪಾಸಾದರು. ಹೆಚ್ಚು ಅಂಕಗಳನ್ನು ಪಡೆದು ಪಾಸಾದ ಆ ಶಾಲೆಯ ಹದಿಮೂರು ಜನ ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿ ಇವರದು ಏಳನೆಯ ಸ್ಥಾನ.

ಈ ಫಲಿತಾಂಶ ಮುಂದಿನ ಓದಿಗೆ ಸ್ಫೂರ್ತಿಯಾಯಿತು. ವಿದ್ಯಾರ್ಥಿ ದೆಸೆಯಲ್ಲಿ ವ್ಯಕ್ತಿತ್ವ ರೂಪಿಸಿದ ತಂದೆಯ ಬಗ್ಗೆ ಅರಿಷಿಣಗೋಡಿಯವರಿಗೆ ವಿಶೇಷ ಗೌರವ. ಕಷ್ಟಜೀವಿಯಾಗಿದ್ದ ತಂದೆಯವರದು ಸರಳ ಜೀವನ. ಮಕ್ಕಳನ್ನೂ ಹಾಗೆಯೇ ಬೆಳೆಸಿದರು. ಮಕ್ಕಳು ಶಾಲೆಯಲ್ಲಿ ಚೆನ್ನಾಗಿ ಓದಬೇಕು ಇಲ್ಲವಾದರೆ ಹೊಲದಲ್ಲಿ ಕಷ್ಟಪಟ್ಟು ದುಡಿಯಬೇಕು, ರಟ್ಟೆ ಮುರಿದು ದುಡಿದು ತನ್ನ ಪಾಲಿನ ರೊಟ್ಟಿ ಸಂಪಾದಿಸಬೇಕೆಂಬ ಆದರ್ಶ ಅವರದಾಗಿತ್ತು. 'ನಾನು ದನಗಳನ್ನು ಕಾಯ್ದೀನಿ, ಹೊಲದೊಳಗ ಗಳೆ ಹೊಡದೀನಿ' ಎನ್ನುವ ಅರಿಷಿಣಗೋಡಿಯವರು ಶಾಲೆಗೆ ರಜೆ ಇದ್ದಾಗ ಹೊಲದಲ್ಲಿ ಕೆಲಸ ಮಾಡುತ್ತಿದ್ದರು. ಅವರಿವರ ಹೊಲಕ್ಕೆ ನುಗ್ಗದಂತೆ ದನಗಳನ್ನು ಮೇಯಿಸುವುದು ಒಂದು ಕಲೆಯೇ. ಅಂದು ಕಷ್ಟಪಟ್ಟು ಸಂಪಾದಿಸಿದ ಅನುಭವಗಳು ಅವರ ಭವಿಷ್ಯತ್ತಿನ ಬದುಕಿಗೆ ಬುತ್ತಿಗಂಟಾಯಿತು.

ಸಾಹಿತ್ಯದಲ್ಲಿ ವಿಶೇಷ ಒಲವಿದ್ದರೂ ತಂದೆಯ ಆಶೆಯಂತೆ ಭೀಮಪ್ಪ ಇಂಜಿನಿಯರ್ ಇಲ್ಲವೆ ಡಾಕ್ಟರ್ ಆಗುವ ಕನಸು ಹೊತ್ತು ವಿಜ್ಞಾನದ ವಿದ್ಯಾರ್ಥಿಯಾಗಿ ಕಾಲೇಜಿಗೆ ಹೊರಟರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರಿಂದ ಶಿರಸಂಗಿ ಲಿಂಗರಾಜ ಟ್ರಸ್ಟಿನಿಂದ ೫೦ ರೂಪಾಯಿ ಸ್ಕಾಲರ್‌ಶಿಪ್ ದೊರೆಯಿತು. ಮೊದಲ ವರುಷದ ಅಭ್ಯಾಸ ಉತ್ಸಾಹದಿಂದ ಸಾಗಿರುವಾಗಲೇ ಅನಾರೋಗ್ಯದ ಆತಂಕವೊಂದು ಎದುರಾಯಿತು. ಕರುಳಿಗೆ ಹುಣ್ಣಾಗಿದ್ದು ಚಿಕಿತ್ಸೆಗಾಗಿ ಮುಂಬಯಿಗೆ ಹೋಗಲು ವೈದ್ಯರು ಹೇಳಿದರು. ಅವರ ಮಾತಿನಂತೆ ಅಲ್ಲಿಗೆ ಹೋಗಿ ಅಪರೇಶನ್ ಮಾಡಿಸಿಕೊಂಡು ಒಂದು ತಿಂಗಳಿದ್ದು ತಿರುಗಿ ಬರುವಷ್ಟರಲ್ಲಿ ಅರ್ಧವಾರ್ಷಿಕ ಪರೀಕ್ಷೆ ಮುಗಿದಿತ್ತು. ಅದಕ್ಕೆ ಹಾಜರಾಗದ ವಿದ್ಯಾರ್ಥಿ ವಾರ್ಷಿಕ ಪರೀಕ್ಷೆಗೆ ಕೂಡಲು ಅನುಮತಿ ಇರಲಿಲ್ಲ. ಈ ವಿಷಯ ತಿಳಿದು ಭೀಮಪ್ಪನಿಗೆ ಭಾರಿ ನಿರಾಶೆಯಾಯಿತು. ಒಂದು ವರುಷ ವ್ಯರ್ಥವಾಗಿ ಹೋಗುವದಲ್ಲಾ ಎಂಬ ಹಳಹಳಿ ಅವರಿಗೆ. ತಂದೆಯವರು, ಶಿಕ್ಷಕರು ಸಮಾಧಾನ ಹೇಳಿದರು. ಅವರ ಮಾತಿನಂತೆ ಆರು ತಿಂಗಳು ಹೊಲದಲ್ಲಿ ಕೆಲಸ ಮಾಡಿ ಹೊತ್ತು ಕಳೆದರು. ಮರುವರುಷ ಮತ್ತೆ ಮೊದಲ ವರ್ಷದ ವಿದ್ಯಾರ್ಥಿಯಾಗಿ ಕಾಲೇಜಿಗೆ ಹೊರಟರು.

ಈ ಹಿಂದೆ ಅರಿಷಿಣಗೋಡಿಯವರ ಜೊತೆಗೆ ಓದುತ್ತಿದ್ದವರು ಮುಂದೆ ಹೋಗಿದ್ದರು. ಹಿಂದಿನ ಕ್ಲಾಸಿನಲ್ಲಿದ್ದವರು ಇವರ ಸಹಪಾಠಿಗಳಾದರು. ಅವರ ಜೊತೆಗೆ ಕೂತು ಕಲಿಯುವುದಕ್ಕೆ ಇವರಿಗೆ ಸಂಕೋಚವೆನಿಸಿತು. ಮನಸ್ಸು ಗಟ್ಟಿ ಮಾಡಿ ಕ್ಲಾಸಿಗೆ ಹೋದರೆ ಫೇಲಾಗಿರಬಹುದೆಂಬ ಸಹಪಾಠಿಗಳ ಸಂಶಯದ ದೃಷ್ಟಿ, ಕೊಂಕು ಮಾತುಗಳು ಇವರ ಮೃದುಮನಸ್ಸನ್ನು ಗಾಸಿಗೊಳಿಸಿದವು. ಗಾಯದ ಮೇಲೆ ಬರೆ ಎಳೆದಂತೆ ಸ್ಕಾಲರ್‌ಶಿಪ್ ನಿಂತುಹೋಯಿತು ಅನಾರೋಗ್ಯ, ಮುಂಬಯಿ ಉಪಚಾರ ಇದರಿಂದಾಗಿಯೇ ಇಷ್ಟೆಲ್ಲ ಅವಾಂತರವಾಯಿತೆಂದು ಖೇದವಾಯಿತು. ಸಂಕೋಚ ಸ್ವಭಾವದವರಿಗೆ ಜೀವನವು ಮುಳ್ಳಿನ ಹಾಸಿಗೆ ಇದ್ದಂತೆ. ಅರಿಷಿಣಗೋಡಿಯವರ ಸ್ವಭಾವ ಅಂಥಾದ್ದು. ಶಾಲೆಯ ವಾತಾವರಣದಿಂದ ಹೊರಗುಳಿಯುವುದೇ

ಅವರಿಗೆ ಹಿತಕರವೆನಿಸಿತು. ಅದರೇನು ಮನೆಗೆ ಮರಳಿದರೆ ತಂದೆಯವರಿಂದ ಶಿಕ್ಷೆ ಅನುಭವಿಸಬೇಕಾಗುವುದೆಂದು ಮನಸ್ಸು ಹಿಂಜರಿಯಿತು. ಜೊತೆಗೆ 'ಕಲಿಯಲು ಆಗದಿದ್ದರಿಂದ ಹುಡುಗ ಊರಿಗೆ ಬಂದಿರುವ'ನೆಂದು ಆಡಿಕೊಳ್ಳುವ ಜನರು ಬೇರೆ. ಕಲಿತು ಮುಂದಕ್ಕೆ ಹೋದಾಗ ಬೆನ್ನುತಟ್ಟಿ ಪ್ರೋತ್ಸಾಹಿಸುವವರು ಕಡಿಮೆ. ಹಿಂದೆ ಬಿದ್ದಾಗ ಹೀಗೆಳೆದು ಚುಚ್ಚಿ ಮಾತನಾಡುವವರು ಬಹಳ. ಇವನ್ನೆಲ್ಲ ನೆನೆದಾಗ ಊರ ದಾರಿ ಸುರಕ್ಷಿತವೆನಿಸಲಿಲ್ಲ. 'ಎಲ್ಲಿಗೆ ಹೋಗುವುದು?' ಎಂದು ಪೇಚಾಡುತ್ತಿದ್ದಾಗ ಅಕ್ಕನ ಊರು ನೆನಪಾಯಿತು ಅಕ್ಕನ ಊರು ಅಕ್ಕನ. ಮಗಳಿರುವ ಊರು ಕೈ ಮಾಡಿ ಕರೆದಂತಾಯಿತು.

ಅಕ್ಕನ ಊರು ಕಮತಗಿ. ಅಕ್ಕ ಲಕ್ಷ್ಮೀಬಾಯಿಯನ್ನು ಕಮತಗಿಯ ಮಳ್ಳಿ ಮನೆತನದ ಗಿರಿಯಪ್ಪನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಅಕ್ಕನ ಮಗಳ ಹೆಸರು ರೇಣುಕಾ. ಭೀಮಪ್ಪನವರ ಅಣ್ಣ ರಾಯಪ್ಪನ ಮದುವೆ ನಿಶ್ಚಯವಾದಾಗ ಹಿರಿಯರು ಇವರ ಮದುವೆಯನ್ನೂ ನಿಶ್ಚಯಿಸಿಬಿಟ್ಟರು. ನಮ್ಮ ಗ್ರಾಮೀಣ ಭಾಗದಲ್ಲಿ ಒಂದು ನಂಬಿಕೆ ಇದೆ. 'ಕಡೆ ಹುಟ್ಟಿದ ಮಗನ ಮದುವೆ ಕಡೆಗೆ ಅಂದರೆ ಕೊನೆಗೆ ಇಟ್ಟುಕೊಳ್ಳಬಾರದು' ಎಂದು. ಅದರಂತೆಯೇ ಅಣ್ಣನ ಮದುವೆಯ ಸಮಾರಂಭದಲ್ಲಿಯೇ ಅದೇ ಹಂದರದಲ್ಲಿಯೇ ಅಕ್ಕನ ಮಗಳು ರೇಣುಕಾಳೊಂದಿಗೆ ಭೀಮಪ್ಪನ ಮದುವೆ ಮಾಡಿಬಿಟ್ಟರು. ಆಗ ಭೀಮಪ್ಪ ಪ್ರೌಢ ಶಾಲೆಯ ವಿದ್ಯಾರ್ಥಿ.

ಬಾಗಿಲುಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನಲ್ಲಿರುವ ಕಮತಗಿಯು ಬಾಗಿಲುಕೋಟೆಯಿಂದ ಪೂರ್ವಕ್ಕೆ ೨೩ ಕಿ.ಮೀ. ಅಂತರದಲ್ಲಿ ಇಳಕಲ್ಲಿಗೆ ಹೋಗುವ ಹಾದಿಯಲ್ಲಿದೆ. ಮಲಪ್ರಭಾ ನದಿಯ ಪಕ್ಕದಲ್ಲಿ ನೆಲೆಸಿದ ಈ ಊರು ಬೆನಕಟ್ಟಿಗಿಂತ ದೊಡ್ಡದು. ೧೨ನೆಯ ಶತಮಾನದ ಶಿವಶರಣ ಮರುಳಶಂಕರರು ಕಲ್ಯಾಣ ಕ್ರಾಂತಿಯ ನಂತರ ಲೋಕ ಸಂಚರಿಸುತ್ತ ಕಮತಗಿ ಗ್ರಾಮಕ್ಕೆ ಬಂದರೆಂದು, ಅವರು ನದಿಯ ದಡದಲ್ಲಿ ಕುಳಿತು ತಪಸ್ಸು ಮಾಡುತ್ತಿದ್ದಾಗ ಅವರನ್ನು ನೋಡಿದ ಜನರು ಹುಚ್ಚೇಶ್ವರ ಎಂದು ಕರೆದರೆಂದು ಪ್ರತೀತಿ. ಮರುಳಶಂಕರರು ಹುಚ್ಚೇಶ್ವರ ಎಂಬ ಹೆಸರಿನಿಂದ ಈ ಊರಿನ ದೈವವಾಗಿದ್ದಾರೆ. ಊರಲ್ಲಿ ದೊಡ್ಡ ಮಠವಿದೆ. ಪ್ರತಿ ವರ್ಷ ಭಾರತ ಹುಣ್ಣಿಮೆಯ ಐದನೆಯ ದಿನದಿಂದ ಒಂದು ವಾರದವರೆಗೆ ಜಾತ್ರೆ ನೆರವೇರುವುದು. ಅರಿಷಿಣಗೋಡಿಯವರು ವಿದ್ಯಾರ್ಥಿ ಜೀವನಕ್ಕೆ ವಿದಾಯ ಹೇಳಿದ ಮೇಲೆ ಕಮತಗಿ ಊರು ಅವರ ಸಾಧನಾರಂಗವಾಯಿತು.

ಕಮತಗಿಗೆ ಬಂದು ಐದಾರು ತಿಂಗಳಾಯಿತು. ಮಾವನ ಮನೆಯಲ್ಲಿ ಕುಂತು ಉಣ್ಣುವುದು, ಉಂಡು ತಿರುಗುವುದು ಸರಿಯೆನಿಸಲಿಲ್ಲ. ಸ್ವಾಭಿಮಾನಿ ಭೀಮಪ್ಪನಲ್ಲಿ ಏನಾದರೂ ಮಾಡಬೇಕೆಂಬ ವಿಚಾರ ತಲೆಹೊಕ್ಕಿತು. ಮಾವನ ಮುಂದೆ ವಿಷಯ ಪ್ರಸ್ತಾಪಿಸಿದಾಗ ಅವರು ಒಂದು ಕಿರಾಣಿ ಅಂಗಡಿ ತೆರೆಯಲು ಸೂಚಿಸಿದರು. ಅವರ ಮನೆ ರಸ್ತೆಗೆ ಹೊಂದಿಕೊಂಡಿತ್ತು. ಅದರ ಒಂದು ಭಾಗದಲ್ಲಿ ಅರಿಷಿಣಗೋಡಿಯವರ ಅಂಗಡಿ ಆರಂಭವಾಯಿತು. ವ್ಯಾಪಾರ ಚೆನ್ನಾಗಿಯೇ

ನಡೆಯಿತು. ಇಂಥಧದರಲ್ಲಿ ಒಂದು ದಿನ ಊರಗೌಡನ ದ್ವೇಷ ಕಟ್ಟಿಕೊಳ್ಳುವ ಪ್ರಸಂಗ ಎದುರಾಯಿತು. ಹಬ್ಬದ ಸಂದರ್ಭವದು. ಸಾಮಾನು ತರಲೆಂದು ಗೌಡ ಹಳಬನಿಗೆ ಅಂಗಡಿಗೆ ಕಳುಹಿಸಿದ. ಹಳಬನು ಉದ್ರಿಯಾಗಿ ಸಾಮಾನು ಕೊಡಲು ಕೇಳಿದ. ಗೌಡನು ನಿಯತ್ತಿನ ಮನುಷ್ಯನಲ್ಲವೆಂಬುದು ಅರಿಷಿಣಗೋಡಿಯವರಿಗೆ ತಿಳಿದಿತ್ತು. ಕೊಟ್ಟು ಕೋಡಂಗಿಯಾಗವುದಕ್ಕಿಂತ ಕೊಡದಿರುವುದೇ ಲೇಸೆಂದು ಅವರು ಹಳಬನನ್ನು ಬರಿಗೈಯಿಂದ ಕಳಿಸಿದರು. ಈ ಘಟನೆಯಿಂದ ಅವಮಾನಿತನಾದ ಗೌಡ ಸೇಡು ತೀರಿಸಿಕೊಳ್ಳಲು ಕಾಯ್ದು ಕುಳಿತ. ಒಂದು ದಿನ ತೂಕ ಮತ್ತು ಅಳತೆಯ ಅಧಿಕಾರಿಗಳು ಊರಿಗೆ ಬಂದಾಗ ಗೌಡನು ಅವರ ಕಿವಿಯೂದಿದ. ಅರಿಷಿಣಗೋಡಿಯವರ ಅಂಗಡಿಯಲ್ಲಿ ತಕ್ಕಡಿ, ಕಲ್ಲುಗಳು ಸರಿಯಾಗಿದ್ದರೂ ಅವು ಸರಿಯಾಗಿಲ್ಲವೆಂದು ವಸ್ತ್ರದ ಎಂಬ ಅಧಿಕಾರಿಯಿಂದ ಕೇಸು ಹಾಕಲು ಕಾರಣರಾದರು. ಊರ ಹಿರಿಯರ ಮಧ್ಯಸ್ಥಿಕೆಯಿಂದ ಕೇಸು ಹಾಕದಂತೆ ಅರಿಷಿಣಗೋಡಿ ನೋಡಿಕೊಂಡರು. ಗೌಡನ ಕುತಂತ್ರ ಮುಗಿಯಿತೆಂದು ನಿಟ್ಟುಸಿರು ಬಿಡುವಷ್ಟರಲ್ಲಿಯೇ ಹುನುಗುಂದ ಕೋರ್ಟಿನಿಂದ ಸಮನ್ಸ್ ಬಂದಿತು. ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ ಕೇಸು ಮುಂದುವರಿಯುವಂತೆ ನೋಡಿಕೊಂಡಿದ್ದನು ಗೌಡ. ಅದಕ್ಕೆ ಅರಿಷಿಣಗೋಡಿಯವರು ತಕ್ಕ ಸಿದ್ಧತೆ ಮಾಡಿಕೊಂಡು ಕೋರ್ಟಿನಲ್ಲಿ ಸಮರ್ಥವಾಗಿ ವಾದಿಸಿದರು. ಗೌಡನ ಸಾಕ್ಷಿಗಳು ಸುಳ್ಳು ಸಾಕ್ಷಿಗಳು ಎಂದು ಸಾಬೀತು ಮಾಡಿ ಕೋರ್ಟಿನಲ್ಲಿ ಗೆದ್ದರು. ಇಲ್ಲಿಗೆ ಆ ಪ್ರಸಂಗವೇನೋ ಮುಗಿಯಿತು. ಆದರೆ ಗೌಡನ ಕಾರಾಸ್ಥಾನದಿಂದ ಅರಿಷಿಣಗೋಡಿಯವರ ಮನಸ್ಸು ಪೆಟ್ಟು ತಿಂದ ಹಾವಿನಂತಾಯಿತು. ಅದಕ್ಕೆ ಹೇಗೆ ಸೇಡು ತೀರಿಸಿಕೊಳ್ಳಬೇಕೆಂದು ಚಿಂತಾಮಗ್ನವಾಯಿತು.

## ಪ್ರತಿಭಟನೆಯ ರೂಪ ತಾಳಿದ ನಾಟಕ

ಸೇಡಿನ ದಾರಿಗಳು ಸರಳವೆನಿಸಲಿಲ್ಲ. ಗೌಡನ ಜೊತೆಗೆ ನೇರವಾಗಿ ಹೋರಾಡಬೇಕೆಂದರೆ ಶಕ್ತಿ ಸಾಲದು. ಗೌಡನನ್ನು ಎದುರು ಹಾಕಿಕೊಂಡರೆ ಬದುಕುವುದೇ ಕಷ್ಟವೆನಿಸಿ ಹೊಟ್ಟೆಯ ಸಿಟ್ಟು ರಟ್ಟೆಗಿಲ್ಲದಂತಾಯಿತು. ಇಂಥ ಮಾನಸಿಕ ತೊಳಲಾಟದಲ್ಲಿದ್ದಾಗಲೇ ಅದಕ್ಕೊಂದು ಸರಸ ಕೋಲಾಹಲದ ದಾರಿ ತೆರೆದುಕೊಂಡಿತು. ಅನುಭವ ಕಥೆಯನ್ನೇ ನಾಟಕ ಮಾಡಿ, ಜನರ ಎದುರು ಆಡಿದರೆ ಹೇಗೆ? ಎಂಬ ವಿಚಾರ ಹೊಳೆಯಿತು. ನಾಟಕವನ್ನು ನೋಡಿ ಜನರು ಗೌಡನ ದೌರ್ಜನ್ಯಕ್ಕೆ ಹೇಸಿ 'ಛೀ' 'ಥೂ' ಎಂದು ಉಗಿದರೆ ಸಾಕು ಸೇಡು ತೀರಿಸಿ ಕೊಂಡಂತಾಗುವುದೆಂದು ತರುಣ ಅರಿಷಿಣಗೋಡಿ ಮನಸು ಲೆಕ್ಕ ಹಾಕಿತು. ಶೋಷಣೆ, ದೌರ್ಜನ್ಯ ವೈಯಕ್ತಿಕವಾಗಿರಲಿ, ಸಾಮಾಜಿಕವಾಗಿರಲಿ ಅದನ್ನು ಸೃಜನಶೀಲವಾಗಿ ಪ್ರತಿಭಟಿಸುವ ರೀತಿ ಅತ್ಯಂತ ಪರಿಣಾಮಕಾರಿಯಾಗಿರುತ್ತದೆ.

ಸಾಹಿತ್ಯದಲ್ಲಿ ಆಸಕ್ತಿ ಇದ್ದ ಅರಿಷಿಣಗೋಡಿಯವರು ತಮ್ಮ ಅನುಭವಕ್ಕೆ ಕಲಾತ್ಮಕ ರೂಪ ಕೊಟ್ಟು 'ಲಂಚಸಾಮ್ರಾಜ್ಯ' ನಾಟಕ ಬರೆದರು. ತಾನು ನಾಟಕಕಾರನಾಗಿ ರೂಪಗೊಂಡಿರುವ ಹಿನ್ನೆಲೆ ನೆನೆಯುತ್ತಿದ್ದಂತೆ ಅರಿಷಿಣಗೋಡಿಯವರ ಮುಖದ ಮೇಲೆ ಅಭಿಮಾನದ ಮುಗುಳ್ನಗೆ ಮೂಡುತ್ತದೆ 'ಅಂದು ಅನ್ಯಾಯದ ವಿರುದ್ಧ ಲೇಖನಿ ಹಿಡಿದು ಪ್ರತಿಭಟನೆ ತೋರಿಸದೇ ಇದ್ದಿದ್ದರೆ ನಾನು ರಂಗಭೂಮಿಯ ಹಾದಿ ತುಳಿಯುತ್ತಿರಲಿಲ್ಲ' ಎಂದು ಅವರು ಹೇಳುತ್ತಾರೆ.

ನಿಜ ಜೀವನದಲ್ಲಿ ಕಾಡಿದ ಗೌಡನು ನಾಟಕದಲ್ಲಿ ಸಂಪತರಾವ್‌ನಾಗಿ ರೂಪತಾಳಿದ. ಅಸಹಾಯಕ ತರುಣ ಅರಿಷಿಣಗೋಡಿ ಶಿಲಾಧರನ ಪಾತ್ರದಲ್ಲಿ ಕಾಣಿಸಿಕೊಂಡರು. ಸಂಪತರಾವ್ ಹಣ ಮತ್ತು ದರ್ಪದ ಬೆನ್ನು ಹತ್ತಿದ ಊರ ಮುಖಂಡ. ಕಳ್ಳಸಂತೆಯಿಂದ ಹಣ ಗಳಿಸಬೇಕೆನ್ನುವ ಹಪಾಪಿ. ಲಂಚ ಕೊಟ್ಟಾದರೂ ಅಧಿಕಾರದ ಮಂಚವೇರಬೇಕೆನ್ನುವ ಸ್ವಾರ್ಥಿ. ಅದೇ ಊರಿನ ಬಡ ನೇಕಾರನ ಮಗ ಶಿಲಾಧರ ಬಿ.ಎ. ಪದವೀಧರ. ಬಡವನಾದರೂ ನ್ಯಾಯದ ಹಾದಿಯಲ್ಲಿಯೇ ನಡೆಯಬೇಕೆನ್ನುವ ಆದರ್ಶವ್ಯಕ್ತಿ. ಇವನು ಕಷ್ಟ ಪಟ್ಟು ಓದಿ ಅರಣ್ಯ ಇಲಾಖೆಯಲ್ಲಿ ಅಧಿಕಾರಿಯಾಗುತ್ತಾನೆ. ಇದರಿಂದ ಗೌಡನ ಕಟ್ಟಿಗೆಯ ಕಳ್ಳ ವ್ಯವಹಾರಕ್ಕೆ ತೊಂದರೆಯಾಗುತ್ತದೆ. ಕುಪಿತನಾದ ಗೌಡ ಮೇಲಾಧಿಕಾರಿಗಳಿಗೆ ಲಂಚ ಕೊಟ್ಟು ಶಿಲಾಧರನ ನೌಕರಿಗೆ ಕುತ್ತು ತರುತ್ತಾನೆ. ಗೌಡನ ಪ್ರಭಾವದ ಎದುರು ಹೋರಾಡಲು ಆಗದೆ ಶಿಲಾಧರ ಮನೆಗೆ ಮರಳುತ್ತಾನೆ. ಇತ್ತ ಗೌಡನ ಮಗಳು ಮೀನಾಕ್ಷಿ ಶಿಲಾಧರನ ಆದರ್ಶಗುಣ ಮೆಚ್ಚಿ ಪ್ರೀತಿಸುತ್ತಿರುವಳು. ಈ ವಿಷಯ ತಿಳಿಯುತ್ತಿದ್ದಂತೆಯೆ ಗೌಡನು ಮಗಳ ಮದುವೆಯನ್ನು ಅಳಿಯನಾದ ರಮೇಶನ ಜೊತೆಗೆ ಮಾಡಲು ಓಡಾಡುತ್ತಾನೆ. ಮೀನಾಕ್ಷಿ ತಂದೆಯ ಒತ್ತಡಕ್ಕೆ ಮಣಿಯದೆ ಶಿಲಾಧರನ ಮನೆಗೆ ಹೊರಡುವಳು. ರಮೇಶನು ಅವಳಿಗೆ ತಾಳಿ ಕಟ್ಟಲು ಹಿಂಬಾಲಿಸುವನು. ಮಗಳ ವರ್ತನೆಯಿಂದ ಕೋಪೋದ್ರಿಕ್ತನಾದ ಗೌಡನು ಮೀನಾಕ್ಷಿಗೆ ಗುರಿ ಇಟ್ಟು ಗುಂಡು ಹಾರಿಸುವನು. ಮಗಳಿಗೆ ತಗುಲಬೇಕಾಗಿದ್ದ ಗುಂಡು ಅಚಾತುರ್ಯದಿಂದ ಮಧ್ಯೆ ಪ್ರವೇಶಿಸಿದ ಅಳಿಯನ ಎದೆ ಸೇರುವುದು. ಕೊಲೆಯ ಆಪಾದನೆ ಹೊತ್ತು ಗೌಡ ಜೈಲು ಸೇರುವನು. ಶಿಲಾಧರನು ಮೀನಾಕ್ಷಿಯ ಕೈ ಹಿಡಿಯುವನು.

ಅರಿಷಿಣಗೋಡಿಯವರ ಸ್ವಾನುಭವ ಮತ್ತು ಸೃಜನಶೀಲತೆಯ ಫಲವಾಗಿ ಅರಳಿದ್ದ 'ಲಂಚಸಾಮ್ರಾಜ್ಯ' ನಾಟಕ ಕಮತಗಿ ಊರಿನ ಜನರ ಹೃದಯ ಗೆದ್ದಿತು. ಅರಿಷಿಣಗೋಡಿಯವರು ನಟರಾಗಿ, ನಾಟಕಕಾರರಾಗಿ ಜನರ ಪ್ರೀತಿಗೆ ಪಾತ್ರರಾದರು. ಇದು ಅವರ ಬದುಕಿನ ಮಹತ್ವದ ತಿರುವಿಗೆ ಕಾರಣವಾಯಿತು. ಜೀವನದೊಳಗಿನ ಒಂದು ಘಟನೆ ಇಂಥ ತಿರುವಿಗೆ ಕಾರಣವಾಗಬಹುದೆಂದು ಯಾರೂ ಎಣಿಸಿರಲಿಲ್ಲ. ಬೆನಕಟ್ಟಿಯಲ್ಲಿದ್ದ ಸೋದರಮಾವ ಕೃಷ್ಣಪ್ಪ ಹುಡೇದಮನಿ ಶ್ರೇಷ್ಠ ಪಾರಿಜಾತ ಕಲಾವಿದರಾಗಿದ್ದರು. ಅವರ ದೂತಿ ಪಾತ್ರ ಹತ್ತೂರ ಜನರ ಪ್ರಶಂಸೆಗೆ ಪಾತ್ರವಾಗಿತ್ತು. ಪಾರಿಜಾತ ಮ್ಯಾಳ ಕಟ್ಟಿಕೊಂಡು ಮಾವ ಊರೂರು

ತಿರುಗುತ್ತಿದ್ದಾಗ ಬಾಲಕ ಅರಿಷಿಣಗೋಡಿ ಅವರ ಜೊತೆಯಲ್ಲಿರುತ್ತಿದ್ದ. ಅವಕಾಶ ಸಿಕ್ಕಾಗ ಸಣ್ಣ ಪುಟ್ಟ ಪಾತ್ರಗಳನ್ನು ಮಾಡುತ್ತಿದ್ದ. ಬಾಲ್ಯದಲ್ಲಿ ಅಂಟಿಕೊಂಡಿದ್ದ ಪಾರಿಜಾತದ ನಂಟು ಮುಂದೆ ನಾಟಕಗಳ ಕಡೆಗೆ ಹೊರಳಿತು.

ಮಾಸ್ತರ್ ಹಿರಣ್ಣಯ್ಯನವರ ಲಂಚಾವತಾರ, ಗುಬ್ಬಿ ವೀರಣ್ಣನವರ ಲವಕುಶ, ಸುಬ್ಬಯ್ಯ ನಾಯಡು ಅವರ ಭೂ ಕೈಲಾಸ, ಪಡೆಸೂರ ಕಂಪನಿಯ ದಸರಾ, ಕೊಂಡು ತಂದ ಗಂಡ ಮೊದಲಾದ ನಾಟಕಗಳನ್ನು ಅರಿಷಿಣಗೋಡಿಯವರು ಬಾಗಲಕೋಟೆಯಲ್ಲಿದ್ದಾಗ ನೋಡಿದ್ದರು. ಅವರು ಸ್ಮರಿಸುವಂತೆ 'ಗೆಳೆಯರು ಸಿನಿಮಾ ನೋಡುದಕ್ಕೆ ಹೋದರ, ನಾನು ನಾಟಕ ನೋಡಲು ಹೋಗತಿದ್ದೆ' – ಈ ಮಾತು ಅವರ ನಾಟಕ ಕಲೆಯ ಬಗೆಗಿನ ಆಸಕ್ತಿಯನ್ನು ತೋರಿಸುತ್ತದೆ. ಈ ಆಸಕ್ತಿಯೇ ಅವರಲ್ಲೊಬ್ಬ ರಂಗಕಲಾವಿದನನ್ನು ರೂಪಿಸಿತು. 'ಲಂಚ ಸಾಮ್ರಾಜ್ಯ'ದಂಥ ನಾಟಕ ರಚನೆಯಾಗಲು ಕಾರಣವಾಯಿತು.

## ನಾಟಕ ಆಡೋದಕ್ಕೆ ಹುಟ್ಟಿತು ನಾಟ್ಯ ಸಂಘ

ಹಂತಹಂತವಾಗಿ ಅರಿಷಿಣಗೋಡಿಯವರು ಕಿರಾಣಿ ಅಂಗಡಿಯ ವ್ಯಾಪಾರದಿಂದ ನಾಟಕದ ಉದ್ಯೋಗಕ್ಕೆ ಹೇಗೆ ವಾಲಿದರೆಂಬುದು ರೋಚಕವಾದ ಕಥೆ. 'ಲಂಚಸಾಮ್ರಾಜ್ಯ' ಕಮತಗಿಯಲ್ಲಿ ಜನಪ್ರಿಯವಾಯಿತು. ಜನರು ಮತ್ತೆ ಮತ್ತೆ ನೋಡಬೇಕೆಂಬ ಆಶೆ ವ್ಯಕ್ತಪಡಿಸಿದರು. ಊರ ಗೌಡನಿಗೂ ಹಕೀಕತ್ತು ಗೊತ್ತಾಗಿತ್ತು. ಆದರೂ ಅವನು ಏನೂ ಮಾಡುವ ಸ್ಥಿತಿಯಲ್ಲಿರಲಿಲ್ಲ ಹಲ್ಲು ಕಿತ್ತಿದ ಹಾವಿನಂತಾಗಿದ್ದನು. 'ಲಂಚಸಾಮ್ರಾಜ್ಯ' ಎಂಬ ಸರಸ ಕೋಲಾಹಲದಲ್ಲಿ ಅರಿಷಿಣಗೋಡಿ ಗೆದ್ದಿದರು. ಮತ್ತೆ ನಾಟಕದ ಒಪ್ಪಓರಣಕ್ಕೆ ಮುಂದಾದರು. ಚಿತ್ತರಗಿ ಕಂಪನಿಯ ಕಲಾವಿದ ಮಹಮ್ಮದ್ ಎಂಬಾತನನ್ನು ಕರೆದು, ಪ್ರದರ್ಶನ ತಂತ್ರಕ್ಕನುಗುಣವಾಗಿ ಮತ್ತೊಮ್ಮೆ ನಾಟಕ ತಿದ್ದಿದರು. ನಾಟಕದಲ್ಲಿ ಅಭಿನಯಿಸುವವರೆಲ್ಲ ಅರಿಷಿಣಗೋಡಿಯವರ ಗೆಳೆಯರೇ ಆಗಿದ್ದರು. ನಾಯಕನ ಪಾತ್ರದಲ್ಲಿ ಸ್ವತಃ ಅವರು ತಮ್ಮ ಅನುಭವವನ್ನೇ ಅಭಿನಯಿಸುತ್ತಿದ್ದರು. ಮೀನಾಕ್ಷಿಯ ಪಾತ್ರಕ್ಕಾಗಿ ಪ್ರಮೀಳಾ ಎಂಬ ನಟಿಯನ್ನು ಗುಡೂರಿನಿಂದ ಕರೆಸಿದ್ದರು. ಈ ಎಲ್ಲ ನೇರ್ಪಿನಿಂದ ನಾಟ್ಯ ಸಂಘ ಕಂಪನಿಯ ಶಿಸ್ತು ಪಡೆಯತೊಡಗಿತ್ತು. ನಾಟಕದ ಜನಪ್ರಿಯತೆಯು ಶಿವಣ್ಣ ಜವಳಿ ಎಂಬ ನಾಟಕ ಕಂಪನಿಗಳ ಗುತ್ತಿಗೆದಾರನಿಗೆ ತಿಳಿಯಿತು. ಅವನು ಒಂದು ಪ್ರಯೋಗಕ್ಕೆ ಮುನ್ನೂರು ರೂಪಾಯಿಯಂತೆ ಗುತ್ತಿಗೆ ಹಿಡಿದನು. ಕಮತಗಿಯಿಂದ ಹತ್ತು ಕಿ.ಮೀ. ಅಂತರದಲ್ಲಿರುವ ಗುಳೇದಗುಡ್ಡದಲ್ಲಿ ಕ್ಯಾಂಪ್ ಮಾಡಲು ನಿರ್ಧಾರವಾಯಿತು ನಟರ ಸಂಬಳ, ಬೋರ್ಡಿಂಗ್ ವ್ಯವಸ್ಥೆ ಅರಿಷಿಣಗೋಡಿಯವರು ನೋಡಿಕೊಳ್ಳಬೇಕು, ಉಳಿದ ಏರ್ಪಾಟೆಲ್ಲ ಗುತ್ತಿಗೆದಾರನದು.

ಹಗಲು ಅಂಗಡಿಯ ವ್ಯಾಪಾರ, ರಾತ್ರಿ ನಾಟಕದಲ್ಲಿ ಪಾತ್ರ, ಸಂಜೆಯಾಗುತ್ತಿದ್ದಂತೆ

ಬುತ್ತಿಗಂಟು ಹೊತ್ತುಕೊಂಡು ಗುಳೇದಗುಡ್ಡಕ್ಕೆ ಹೋಗಬೇಕು. ಬಣ್ಣ ಹಚ್ಚಿಕೊಂಡು ಅಭಿನಯಿಸಬೇಕು. ಈ ದಿನಚರಿ ಒಂದು ವಾರ ನಡೆಯಿತು. ಅಷ್ಟರಲ್ಲಿ ಗುತ್ತಿಗೆದಾರ ಏನೇನೋ ನೆಪ ಹೇಳಿ ಒಪ್ಪಂದ ಮುರಿದುಕೊಂಡ. ಇದರಿಂದ ಅರಿಷಿಣಗೋಡಿಯವರಿಗೆ ಸಮಸ್ಯೆ ಎದುರಾಯಿತು. ಕಲಾವಿದರಿಗೆ ಒಂದು ತಿಂಗಳು ಸಂಬಳ ಕೊಡುವುದಾಗಿ ಹೇಳಿದ್ದರು. ಕೆಲವರಿಗೆ ಮುಂಗಡವಾಗಿ ಕೊಟ್ಟಿದ್ದರು. ಹೀಗಿದ್ದಾಗ ನಟರನ್ನು ನಡುನೀರಲ್ಲಿ ಕೈ ಬಿಡುವುದು ಸರಿಯೆನಿಸಲಿಲ್ಲ. ಅಷ್ಟೊತ್ತಿಗೆ ನಾಟಕ ಕಂಪನಿಯೊಂದರ ವ್ಯವಹಾರಗಳು ಒಂದಿಷ್ಟು ಪರಿಚಯವಾಗಿದ್ದವು. ನಟರಿಗೆ ಮಾತು ಕೊಟ್ಟಂತೆ ಒಂದು ತಿಂಗಳು ನಾಟಕ ಆಡಿ ತೋರಿಸಲು ನಿರ್ಧರಿಸಿದರು. ಈ ನಿರ್ಧಾರದಿಂದ ಅರಿಷಿಣಗೋಡಿಯವರು ಕಿರಾಣಿ ಅಂಗಡಿ ಬಾಗಿಲು ಮುಚ್ಚಬೇಕಾಯಿತು.

ನಾಟಕ ಕಂಪನಿ ಕಟ್ಟೋದಕ್ಕಿಂತ ಮೊದಲು ಅರಿಷಿಣಗೋಡಿ ಅವರು ನಟ, ನಾಟಕಕಾರ, ಮ್ಯಾನೇಜರ – ಈ ಮೂರೂ ಪಾತ್ರಗಳನ್ನು ಒಬ್ಬರೇ ನಿರ್ವಹಿಸಿದರು. ಈ ಅವಧಿಯು ಸ್ವತಂತ್ರ ನಾಟಕ ಕಂಪನಿ ಕಟ್ಟಲು, ನಡೆಸಲು ಒಂದು ರೀತಿಯಲ್ಲಿ ರಿಹರ್ಸಲ್ ಆಯಿತು.

ಗುಳೇದಗುಡ್ಡದಲ್ಲಿ ಲಾಭವೂ ಆಗಲಿಲ್ಲ. ಹಾನಿಯೂ ಆಗಲಿಲ್ಲ. ಅಲ್ಲಿಂದ ಬಾಗಲಕೋಟೆ ಕ್ಯಾಂಪ್. ಅಲ್ಲಿ ಪರಿಚಯದ ಜನ ಬಹಳಷ್ಟಿದ್ದರು. ನಾಟಕಗಳನ್ನಾಡಲು ಅನುಕೂಲ ಮಾಡಿಕೊಟ್ಟರು. ಪ್ರೇಕ್ಷಕರ ಪ್ರತಿಕ್ರಿಯೆಯೂ ಉತ್ಸಾಹದಾಯಕವಾಗಿತ್ತು. ಅಲ್ಲಿ ಸತತ ಐವತ್ತು ಪ್ರಯೋಗಗಳಾದವು. ಕೈಯಲ್ಲಿ ಕಾಸೂ ಕೂಡಿತು. ಅಣ್ಣ ರಾಯಪ್ಪ – ಆರ್.ಆರ್. ಅರಿಷಿಣಗೋಡಿ ಸಹಾಯಕ್ಕೆ ನಿಲ್ಲುವೆನೆಂದಾಗ ಬಿ.ಆರ್. ಅವರಿಗೆ ಆನೆಬಲ ಬಂದಂತಾಯಿತು. ನಾಟಕ ಕಲೆಯನ್ನೇ ಉದ್ಯೋಗ ಮಾಡಿಕೊಳ್ಳಲು ನಿರ್ಧರಿಸಿದರು. ಹೀಗೆ ಹಂತ ಹಂತವಾಗಿ ಅರಿಷಿಣಗೋಡಿಯವರ ನಾಟಕ ಸಂಸಾರ ಬೆಳೆಯುತ್ತ ನಡೆಯಿತು. ಅವರೇ ಸ್ಮರಿಸಿಕೊಳ್ಳುವಂತೆ – 'ಕಂಪನಿ ಕಟ್ಟುವಾಗ ನಮ್ಮ ಭಾಗದಲ್ಲಿ ಗಂಗಾಧರಶಾಸ್ತ್ರಿಗಳ ಚಿತ್ತರಗಿ ಕಂಪನಿ, ಶಾಂತಪ್ಪನವರ ನ್ಯಾಮತಿ ಕಂಪನಿಗಳು ತುಂಬ ಚಟುವಟಿಕೆಯಿಂದ ಇದ್ದವು. ಆ ಕಂಪನಿಗಳಲ್ಲಿದ್ದ ಕಲಾವಿದರು ಸ್ನೇಹಿತರಾಗಿದ್ದರು. ಅವರಿಂದ ಕಂಪನಿಯ ವ್ಯವಹಾರ, ಅದರ ಅಂತರಂಗ ತಿಳಿದುಕೊಳ್ಳಲು ಸಾಧ್ಯವಾಯಿತು. ಪ್ರೇಕ್ಷಕರಾದರೂ 'ಲಂಚಸಾಮ್ರಾಜ್ಯ' ನೋಡಿ ಮತ್ತೆ ಮತ್ತೆ ನೋಡಲು ಹಂಬಲಿಸಿದರು. ಇದರಿಂದ ಅಂಗಡಿ ಮುಚ್ಚಿ ನಾಟಕ ಕಂಪನಿ ತೆರೆಯಲು ನಿರ್ಧರಿಸಿದೆ. ಬಸವರಾಜ ನ್ಯಾಮತಿ ಎಂಬವರು ನ್ಯಾಮತಿ ಕಂಪನಿಯ ಮ್ಯಾನೇಜರ. 'ನಾನು ನಿಮ್ಮ ಕಂಪನಿಯ ಆಡಳಿತ ನೋಡಿಕೊಳ್ಳುವೆ' ಎಂದರು. ಇದೇ ವೇಳೆ ಅಣ್ಣ ರಾಯಪ್ಪನವರೂ ಬೆಂಬಲಕ್ಕೆ ನಿಂತರು. ಇವರೆಲ್ಲರ ನೆರವಿನಿಂದ ನಾಟಕ ಬರೆಯುತ್ತ, ಪಾತ್ರ ಮಾಡುತ್ತ ರಂಗದ ಮೇಲೆ ಬೆಳೆಯಲು ಸಾಧ್ಯವಾಯಿತು' ಎಂದು ಅರಿಷಿಣಗೋಡಿ ಅವರು ನಾಟಕ ಕಂಪನಿ ಕಟ್ಟಲು ಹಿನ್ನೆಲೆಯಾದ ಕಥೆಯನ್ನು ಹೇಳುತ್ತಾರೆ.

# ೩. ಶ್ರೀ ಹುಚ್ಚೇಶ್ವರ ನಾಟ್ಯಸಂಘ, ಕಮತಗಿ

ಕಮತಗಿಯಲ್ಲಿ ಕಿರಾಣಿ ಅಂಗಡಿಯನ್ನಿಟ್ಟುಕೊಂಡು ತನ್ನ ಪಾಡಿಗೆ ತಾನಿದ್ದ ತರುಣ ಅರಿಷಿಣಗೋಡಿಯವರು ಗೌಡನಿಂದಾದ ಅಪಮಾನದ ವಿರುದ್ಧ ನಾಟಕ ಬರೆದು, ನಾಟಕವನ್ನಾಡಿ, ನಾಟ್ಯ ಸಂಘದ ಒಡೆಯರಾದ ಕಥೆಯನ್ನು ಹಿಂದಿನ ಅಧ್ಯಾಯದಲ್ಲಿ ನೋಡಿದ್ದೇವೆ. ನಾಟ್ಯಸಂಘದ ಒಡೆಯರಾದಾಗ ಅವರಿಗೆ ಇಪ್ಪತ್ತೈದು ವರ್ಷ ವಯಸ್ಸು. ಇವರ ಕಂಪನಿಯು ದಿನಾಂಕ ೩೨-೧೨-೧೯೬೧ರಂದು ಬಾಗಿಲುಕೋಟೆಯಲ್ಲಿ ಅಸ್ತಿತ್ವಕ್ಕೆ ಬಂದಿತು. ಕಮತಗಿಯ ಆರಾಧ್ಯದೈವ ಶ್ರೀ ಹುಚ್ಚೇಶ್ವರನ ಹೆಸರನ್ನಿಟ್ಟುಕೊಂಡ ಕಂಪನಿಯ ಮೊದಲ ನಾಟಕ 'ಲಂಚಸಾಮ್ರಾಜ್ಯ'. ಶಿಲಾಧರನಾಗಿ ಅರಿಷಿಣಗೋಡಿ, ಮೀನಾಕ್ಷಿಯಾಗಿ ಪ್ರಮೀಳಾ ಗುಡೂರ ಅವರ ಅಭಿನಯವು ಆರಂಭದಲ್ಲಿ ಕಂಪನಿಯ ಆಕರ್ಷಣೆಯಾಗಿತ್ತು. ಅಷ್ಟೊಂದು ಸೊಗಸಾದ ಪಾತ್ರ ನಿರ್ವಹಣೆ ಅವರದು. ಅವರಿಗೆ ಸಹಕಾರಿಯಾಗಿ ಶಿವಲಿಂಗಪ್ಪ ಹಳ್ಳದ, ಈಶ್ವರ ಗೋಂದಕರ, ಬಸಯ್ಯ ಪಟ್ಟದಕಲ್ಲ, ಯಲ್ಲಪ್ಪ ರಡ್ಡೇರ ತಿಮ್ಮಾಪುರ, ಗುಡುಸಾಬ ಇಳಕಲ್ಲ, ಅಬ್ಬಾಸ ಅಲಿ ಇಳಕಲ್ಲ, ಶಾಂತಾಬಾಯಿ ಪತ್ತಾರ ಇಳಕಲ್ಲ ಇವರೆಲ್ಲ ನಟವರ್ಗದಲ್ಲಿದ್ದರು. ಮಾತು-ಕಥೆ-ಪಾತ್ರಗಳ ನಡುವೆ ಸಮನ್ವಯ ಸಾಧಿಸಿತ್ತು. ಹಾಗಾಗಿ ಮಾಸ್ಟರ್ ಹಿರಣ್ಣಯ್ಯನವರ ಲಂಚವತಾರದ ನಂತರ ಅದೇ ಹೆಸರನ್ನು ಹೋಲುವ ಕಮತಗಿ ಕಂಪನಿಯ 'ಲಂಚಸಾಮ್ರಾಜ್ಯ'ವು ರಂಗದ ಮೇಲೆ ಹೆಸರು ಗಳಿಸಿತು. ಬಾಗಿಲುಕೋಟೆಯಲ್ಲಿ ಸತತ ಐವತ್ತು ಪ್ರಯೋಗಗಳನ್ನು ಕಂಡಿತು.

ಮೊದಲ ನಾಟಕದ ಗೆಲುವಿನಿಂದ ಮತ್ತೊಂದು ನಾಟಕದ ರಚನೆಗೆ ಸ್ಫೂರ್ತಿ ದೊರೆಯಿತು. ಕಮತಗಿಯಲ್ಲಿಯೇ ಜರುಗಿದ್ದ ಘಟನೆಯೊಂದಕ್ಕೆ ನಾಟಕರೂಪ ಕೊಟ್ಟು 'ಹೆಣ್ಣು ಮಗಳು' ಎಂದು ಹೆಸರಿಟ್ಟರು. ಕೊಟ್ಟಮನೆಗೆ ಹೆಮ್ಮಾರಿಯಾದ ಹೆಣ್ಣಿನ ಸುತ್ತ ಚಲಿಸುವ ಇಲ್ಲಿಯ ಕಥೆ ಪ್ರೇಕ್ಷಕರನ್ನು ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಯಿತು. ಕಾಮಾಕ್ಷಿ ನಾಟಕದ ಖಳನಾಯಕಿ. ಕೈಹಿಡಿದ ಗಂಡನ ಆರೋಗ್ಯ, ಮಗನ ಭವಿಷ್ಯ ಎರಡನ್ನೂ ಲೆಕ್ಕಿಸದೇ ಪ್ರೇಮಿಯೊಬ್ಬನ ಬಲೆಗೆ ಬಿದ್ದು ತವರುಮನೆ ಸೇರುವಳು. ತಂದೆಯನ್ನು ಕೈಗೊಂಬೆ ಮಾಡಿಕೊಂಡು ಅಣ್ಣ - ಅತ್ತಿಗೆಯರನ್ನು ಬೇರೆ ಬೇರೆ ಮಾಡುವಳು. ಕೊನೆಗೆ ನಂಬಿಸಿದ ಪ್ರೇಮಿಯ ಸ್ವಾರ್ಥಕ್ಕೆ ಬಲಿಯಾಗಿ ದುರಂತವನ್ನಪ್ಪುವಳು. ಬಾಗಿಲುಕೋಟೆ ಕ್ಯಾಂಪಿನಲ್ಲಿಯೇ ಎರಡನೆಯ ನಾಟಕವೂ ಯಶಸ್ಸನ್ನು ಕಂಡಿತು. ಅಲ್ಲಿಂದ ಕಂಪನಿಯು ಹುನಗುಂದ, ಇಳಕಲ್ಲ, ವಿಜಯಪುರ, ಮುಧೋಳ, ಗೊಡಚಿ ಮುಂತಾದ ಊರುಗಳಲ್ಲಿ ಮೊಕ್ಕಾಂ ಮಾಡಿ ಕಲಾಯಾತ್ರೆಯನ್ನು ಮುಂದುವರಿಸಿತು.

ಮೂರು ವರ್ಷಗಳ ಕಾಲ ಎರಡೇ ನಾಟಕಗಳನ್ನಾಡುತ್ತ ಕಂಪನಿ ಸಂಚರಿಸಿತು. ೧೯೬೫ರಲ್ಲಿ ಗದಗ ಕ್ಯಾಂಪ್ ಕಂಪನಿಯ ಇತಿಹಾಸದಲ್ಲಿಯೇ ಸ್ಮರಣೀಯವಾದುದು. ಕರ್ನಾಟಕದಾದ್ಯಂತ ಜಯಭೇರಿ ಬಾರಿಸಿದ ಮತ್ತು ಇಂದಿಗೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿರುವ 'ಬಸ್ ಕಂಡಕ್ಟರ್' ನಾಟಕ ರಚನೆಯಾದದ್ದು ಗದಗ ಕ್ಯಾಂಪಿನಲ್ಲಿಯೇ. ಮಲ್ಲಮ್ಮನ ಥೇಟರಿನಲ್ಲಿ ಈ ನಾಟಕವು ೧೧೧ ಪ್ರಯೋಗಗಳನ್ನು ಕಂಡಿತು. ನೆಲ: ೧. ರೂ., ಚಾಪೆ: ೨ ರೂ., ಕುರ್ಚಿ: ೫ ರೂ. ಇದ್ದಾಗ ಒಂದೊಂದು ಪ್ರಯೋಗಕ್ಕೆ ಎರಡರಿಂದ ಎರಡೂವರೆ ಸಾವಿರ ಉತ್ಪನ್ನವಾಗುತ್ತಿತ್ತು. ಇದೇ ಅವಧಿಯಲ್ಲಿ ಎಚ್.ಟಿ. ಮಹಾಂತೇಶಶಾಸ್ತ್ರಿಗಳ ಪರಿಚಯವಾಯಿತು. 'ಪಾತ್ರ, ಸನ್ನಿವೇಶ ಮತ್ತು ಸಂಭಾಷಣೆ ಈ ಮೂರು ಗುಣಗಳು 'ಬಸ್ ಕಂಡಕ್ಟರ್' ನಾಟಕದಲ್ಲಿ ಸೊಗಸಾಗಿ ಸಮ್ಮಿಳಿತವಾಗಿವೆ' ಎಂದು ಶಾಸ್ತ್ರಿಗಳು ಮೆಚ್ಚಿ ನುಡಿದರು. ಶಾಸ್ತ್ರಿಗಳ ಸೌಜನ್ಯಕ್ಕೆ ತಲೆಬಾಗಿದ ನಾಟಕಕಾರ 'ಕಮತಗಿ ಕಂಪನಿ ಬೆಳೆಯುತ್ತಿರುವ ಕಂಪನಿ. ಅದಕ್ಕೆ ತಾವೂ ನಾಟಕ ಬರೆದು ಕೊಡಬೇಕು' ಎಂದು ಕೇಳಿಕೊಂಡರು. ಪ್ರಸಿದ್ಧ ಸಾಮಾಜಿಕ ನಾಟಕಕಾರರೆಂದು ಹೆಸರಾಗಿದ್ದ ಶಾಸ್ತ್ರಿಗಳು ಮುಂದೆ ಈ ಕಂಪನಿಗಾಗಿಯೇ ಹಲವಾರು ನಾಟಕಗಳನ್ನು ಬರೆದುಕೊಟ್ಟರು.

ಗದಗ ಕ್ಯಾಂಪಿನಲ್ಲಿಯೇ 'ಸೈನಿಕನ ಸಹೋದರಿ' ಎಂಬ ಮತ್ತೊಂದು ನಾಟಕ ಸಿದ್ಧವಾಯಿತು. ೧೯೬೨ರಲ್ಲಿ ನಡೆದ ಭಾರತ-ಚೀನಾ ಯುದ್ಧವೇ ಈ ಕೃತಿಗೆ ಹಿನ್ನೆಲೆಯಾಗಿತ್ತು. ದೇಶವನ್ನು ರಕ್ಷಿಸುವ ಸೈನಿಕನ ಕುಟುಂಬವನ್ನು ಯಾರು ರಕ್ಷಿಸಬೇಕು? ಎಂಬ ಪ್ರಶ್ನೆಯನ್ನು ಮುಂದಿಡುವ ಈ ನಾಟಕವೂ ಕಂಪನಿಯ ಬತ್ತಳಿಕೆಯೊಳಗಿನ ಯಶಸ್ವಿ ಕೃತಿಯೆನಿಸಿತು. ಸಮಕಾಲೀನ ಸಂದರ್ಭದಲ್ಲಿಯ ಕೌಟುಂಬಿಕ, ಸಾಮಾಜಿಕ, ರಾಷ್ಟ್ರೀಯ ಸಮಸ್ಯೆಗಳನ್ನು ಕಲಾತ್ಮಕವಾಗಿ ಬಿಂಬಿಸುವ ಅರಿಷಿಣಗೋಡಿಯವರ ನಾಟಕಗಳು ಕಂಪನಿಗೆ ಕೀರ್ತಿ ಮತ್ತು ಸಂಪತ್ತುಗಳೆರಡನ್ನೂ ಧಾರಾಳವಾಗಿ ತಂದುಕೊಟ್ಟವು. 'ಬಸ್ ಕಂಡಕ್ಟರ್' ನಾಟಕವಂತೂ 'ಮಾಸ್ಟರ್ ಪೀಸ್' ಆಗಿ ಮೆರೆಯಿತು. ಯಶಸ್ಸಿನ ಮೇಲೆ ಯಶಸ್ಸನ್ನು ಸಾಧಿಸುತ್ತ ನಡೆದ ಅರಿಷಿಣಗೋಡಿಯವರಿಗೆ ಮತ್ತೊಂದು ಕಂಪನಿ ಆರಂಭಿಸುವ ಯೋಚನೆ ಹೊಳೆಯಿತು. ನಟನೆಯಲ್ಲಿ ಆಡಳಿತದಲ್ಲಿ ಅಣ್ಣ ರಾಯಪ್ಪ ಪಳಗಿದವರಾಗಿದ್ದರು. ಅವರ ಮೇಲ್ವಿಚಾರಣೆಯಲ್ಲಿಯೇ ಮೊದಲ ಬ್ರ್ಯಾಂಚ್ ಕಂಪನಿಯನ್ನು ರಬಕವಿ ಕ್ಯಾಂಪಿನಲ್ಲಿ ಆರಂಭಿಸಿದರು (೧೯೬೭).

ಕಂಪನಿಯ ವ್ಯವಸಾಯ ಮುಂದುವರಿಯಿತು. ೧೯೭೦ರ ಬಿಜಾಪುರ ಕ್ಯಾಂಪಿನಲ್ಲಿ ಎಸ್.ಎಂ. ಖೇಡಗಿಯವರಿಂದ ಹೊಸ ಹೊಸ ನಾಟಕಗಳನ್ನು ಬರೆಸಿದರು. 'ರೀತಿ ತಪ್ಪಿದರೂ ನೀತಿ ತಪ್ಪಿಲ್ಲ', 'ಪಾಪದ ದೇಹ ಪುಣ್ಯದ ಜೀವ', 'ನನ್ನ ಗಂಡನ ಹೆಂಡತಿ', 'ಗೌರಿ ಹೋದಳು ಗಂಗೆ ಬಂದಳು' – ಈ ನಾಲ್ಕೂ ನಾಟಕಗಳು ಬಿಜಾಪುರ ಕ್ಯಾಂಪಿನಲ್ಲಿಯೇ ಒಂದಾದ ಮೇಲೆ ಒಂದರಂತೆ ಪ್ರಯೋಗಕ್ಕೆ

ಬಂದವು. ೧೯೭೦, ೮೦ರ ದಶಕದಲ್ಲಿ ಅರಿಷಿಣಗೋಡಿಯವರು ಕೈಗೆತ್ತಿಕೊಂಡ ಯಾವ ನಾಟಕಗಳೂ ಗಲ್ಲಾಪೆಟ್ಟಿಗೆಗೆ ಮೋಸ ಮಾಡಲಿಲ್ಲ. ಒಳ್ಳೆಯ ಫಲವನ್ನೇ ಕೊಟ್ಟವು. ಇದೇ ಅವಧಿಯಲ್ಲಿ ಬ್ರ್ಯಾಂಚ್ ಕಂಪನಿಗಳು ಎನ್.ಎಸ್. ಜೋಶಿಯವರ 'ಚನ್ನಪ್ಪ ಚನಗೌಡ', 'ಸಮಾಜಕ್ಕೆ ಸವಾಲ್', 'ಹುಚ್ಚಿ ಹಚ್ಚಿದ ದೀಪ', 'ರೌಡಿ ರಾಮಾಚಾರಿ', ಧುತ್ತರಗಿಯವರ 'ಮುದುಕನ ಮದುವೆ', ಅರಿಷಿಣಗೋಡಿಯವರೇ ಬರೆದ 'ನಕಲಿ ಸಂಪನ್ನರು', 'ಬಡವರೂ ನಗಬೇಕು', 'ಗಂಡೆದೆಯ ಗೌರಿ' ನಾಟಕಗಳನ್ನಾಡುತ್ತಿದ್ದವು.

೧೯೮೮ರಲ್ಲಿ ಅರಿಣಿಷಿಣಗೋಡಿಯವರು ಒಂದು ಹೊಸ ಪ್ರಯೋಗವೆಂಬಂತೆ 'ಸಂಗ್ಯಾ – ಬಾಳ್ಯಾ' ಬಯಲಾಟವನ್ನು ಕಂಪನಿ ನಾಟಕವನ್ನಾಗಿ ರೂಪಿಸಿದರು. ಬಯಲಾಟದೊಳಗಿನ ಕುಣಿತ ತೆಗೆದು ಹಾಕಿ ಹಾಡುಗಳನ್ನು ಕಂಪನಿ ಶೈಲಿಗೆ ಹೊರಳಿಸಿದ್ದರು. ಸಂಗ್ಯಾನ ಪಾತ್ರದಲ್ಲಿ ವಿಜಯಶೇಖರ, ಗಂಗಿ ಪಾತ್ರದಲ್ಲಿ ಮಾಲತಿಶ್ರೀ ಮೈಸೂರ ಇವರ ಅಭಿನಯ, ಅರಿಷಿಣಗೋಡಿಯವರ ಸಾಹಿತ್ಯದ ಸೊಗಸಿನಿಂದ ನಾಟಕ ಜನಮನವನ್ನು ರಂಜಿಸಿತು. ಗೋಕಾಕ, ಮೂಡಲಗಿ, ಮುಧೋಳ ಕ್ಯಾಂಪುಗಳಲ್ಲಿ ಈ ನಾಟಕದ ಕಲೆಕ್ಷನ್ ಉತ್ಸಾಹದಾಯಕವಾಗಿತ್ತು. ಇದೇ ಅವಧಿಯಲ್ಲಿ ಮೂಡಿಗೆರೆಯಲ್ಲಿ ಮೂರನೆಯ ಬ್ರ್ಯಾಂಚ್ ಕಂಪನಿಯು ಆರಂಭವಾಯಿತು. ಇಪ್ಪತ್ತೂರು ವರ್ಷಗಳಲ್ಲಿ ಒಂದಿದ್ದ ಕಂಪನಿಯು ನಾಲ್ಕಾಗಿ ಬೆಳೆಯಿತು. ವೃತ್ತಿರಂಗಭೂಮಿಯ ಚರಿತ್ರೆಯ ಸಂದಭರ್ದಲ್ಲಿ ಕಮತಗಿ ಕಂಪನಿಯ ಈ ಸಾಧನೆಯು ಸಣ್ಣ ಸಂಗತಿಯಲ್ಲ. ವರಕವಿ ಬೇಂದ್ರೆ, ಸಿಂಪಿ ಲಿಂಗಣ್ಣ, ಸದಾಶಿವ ಒಡೆಯರ, ದು.ನಿಂ. ಬೆಳಗಲಿ, ಏಣಗಿ ಬಾಳಪ್ಪ ಮುಂತಾದ ಹಿರಿಯರು ಈ ಕಂಪನಿಯ ನಾಟಕಗಳನ್ನು ನೋಡಿದ್ದಾರೆ. ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಕಂಪನಿ ನಾಟಕಗಳು ಅತಿರೇಕಗಳಿಂದ ಜಡಗಟ್ಟಿಗೊಳ್ಳುತ್ತಿವೆ ಎಂಬ ಅಪವಾದ ಎಲ್ಲೆಡೆಗೆ ಕೇಳಿಬರುತ್ತಿರುವಾಗ ಕಮತಗಿ ಕಂಪನಿಯ ನಾಟಕಗಳು ಒಂದು ಮಿತಿಯಲ್ಲಿ ಶಿಸ್ತನ್ನು, ಕಲಾತ್ಮಕತೆಯನ್ನು ಕಾಯ್ದುಕೊಂಡಿವೆ ಎಂಬ ಮಾತನ್ನು ಬಹಳಷ್ಟು ಜನ ಒಪ್ಪಿಕೊಂಡಿದ್ದಾರೆ.

೧೯೮೭ರಿಂದ ನಿಷ್ಠೆ ಇಲ್ಲದ ನಟರಿಂದ, ಸಾಹಿತ್ಯದ ಸೊಗಸಿಲ್ಲದ ನಾಟಕಗಳಿಂದ ಮೊದಲಿನ ಆಕರ್ಷಣೆ ಉಳಿದಿಲ್ಲ. ಒಳ್ಳೆಯ ಹೊಸ ನಾಟಕಗಳು ಸಿಗುತ್ತಿಲ್ಲ. ನಟ–ನಟಿಯರು ವರ್ಷಪರ್ಯಂತ ಕಂಪನಿಯಲ್ಲಿ ನಿಲ್ಲುತ್ತಿಲ್ಲ. ಈ ತಲೆನೋವಿನಿಂದ ಕಂಪನಿ ನಿಲ್ಲಿಸುವುದೇ ಲೇಸೆಂದು ಸಾಕಷ್ಟು ಸಲ ಅರಿಷಿಣಗೋಡಿಯವರಿಗೆ ಅನಿಸಿದೆ. ಆದರೆ ಕಲೆಯನ್ನೇ ಕಾಯಕವನ್ನಾಗಿ ಸ್ವೀಕರಿಸಿದ ಅವರಿಗೆ ಅದನ್ನು ಬಿಟ್ಟು ಮತ್ತೊಂದಕ್ಕೆ ಮನಸ್ಸಾಗಲಿಲ್ಲ. 'ಶಕ್ತಿ ಇರುವವರೆಗೆ ನಾಟಕಸಂಸಾರದ ಹೊಣೆ ಹೊರುವೆ' ಎಂಬ ನಿಲುವು ಅವರದಾಗಿತ್ತು.ಅಣ್ಣ–ತಮ್ಮ ಬೇರೆ ಬೇರೆ ಆದಾಗ ಒಬ್ಬೊಬ್ಬರಿಗೆ ಎರಡೆರಡು ಕಂಪನಿಗಳು ಪಾಲಿಗೆ ಬಂದಿದ್ದವು. ಅಣ್ಣನವರು

ಅನಾರೋಗ್ಯದಿಂದ ಒಂದು ಕಂಪನಿಯನ್ನು ೧೯೮೪ರಲ್ಲಿ ನಿಲ್ಲಿಸಿದರು. ಮತ್ತೊಂದನ್ನು ೧೯೯೦ರಲ್ಲಿ ನಿಲ್ಲಿಸಿದರು.

೧೯೯೮ರಲ್ಲಿ ಕಂಪನಿಯು ಬೆಂಗಳೂರಿನ 'ಗುಬ್ಬಿ ವೀರಣ್ಣ ರಂಗಮಂದಿರ'ದಲ್ಲಿ ಕ್ಯಾಂಪ್ ಮಾಡಿತ್ತು. ನಾ.ದೆ. ನರಸಿಂಹಮೂರ್ತಿ ಬರೆದ 'ಎಚ್ಚರ ತಂಗಿ ಎಚ್ಚರ' ನಾಟಕವನ್ನು ಅದ್ದೂರಿಯಾಗಿ ಪ್ರದರ್ಶಿಸಿತು. ಜನದಟ್ಟಣೆಯಲ್ಲಿ ಐದುನೂರು ಪ್ರಯೋಗಗಳಾದವು. ರಾಜಧಾನಿಯಲ್ಲಿಯ ಈ ಸಾಧನೆ ಸರಕಾರದ ಗಮನ ಸೆಳೆಯಿತು. ಅದೇ ವರ್ಷ ಅರಿಷಿಣಗೋಡಿಯವರಿಗೆ ರಾಜ್ಯೋತ್ಸವ ಪ್ರಶಸ್ತಿ ದೊರೆಯಿತು. ಕಾನೂನನ್ನು ರಕ್ಷಿಸುವವರೇ ಅನೀತಿಯ ಕೆಲಸಕ್ಕಿಳಿದರೆ, ಅಪರಾಧಿಗಳಾದರೆ ಅವರನ್ನು ಶಿಕ್ಷಿಸುವವರು ಯಾರು? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ರೀತಿಯಲ್ಲಿ ಚಲಿಸುವ ಪತ್ತೇದಾರಿ ಕಥೆಯೇ 'ಎಚ್ಚರ ತಂಗಿ ಎಚ್ಚರ' ನಾಟಕದ ವಸ್ತು. ಸತ್ಯಮೂರ್ತಿ ಪಿ.ಎಸ್.ಐ. ಮತ್ತು ಗೋದಾವರಿ ಇವರ ಸರಸ, ಗೋದಾವರಿಯ ಗಂಡನ ಕೊಲೆ, ಎಸ್ಪಿ ಅಶೋಕನ ಪ್ರವೇಶ, ಪಿ.ಎಸ್.ಐ.ನ ಕೊಲೆ, ಅಪರಾಧಿಯ ಪತ್ತೆ, ಗೋದಾವರಿಯ ಪಶ್ಚಾತ್ತಾಪ ಈ ಘಟನೆಗಳ ಸುತ್ತ ನಾಟಕದ ಅಂತರಂಗ ತೆರೆದುಕೊಳ್ಳುತ್ತದೆ. ಡಾಕ್ಟರನಾಗಿ ವಿಜಯ ತಾಳಿಕೋಟೆ, ಗೋದಾವರಿಯಾಗಿ ಶೈಲಜಾ ತಾಳಿಕೋಟೆ, ಸತ್ಯಮೂರ್ತಿ ಪಿ.ಎಸ್.ಐ. ಆಗಿ ಬಾಬು ಮೈಸೂರ, ಕಾಮಿಡಿ ಜೋಡಿಯಾಗಿ ವೆಂಕಟೇಶ ಹೆಗಡೆ, ಮಾಲತಿಶ್ರೀ ಮೈಸೂರ – ಇವರೆಲ್ಲರ ಉತ್ತಮ ಅಭಿನಯ, ಚುರುಕಿನ ಸಂಭಾಷಣೆ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದ್ದವು. ಚಲನಚಿತ್ರರಂಗದ ಕಲಾವಿದರು, ಹವ್ಯಾಸಿ ರಂಗದ ಕಲಾವಿದರೂ ಈ ನಾಟಕವನ್ನು ನೋಡಿ ಪ್ರಶಂಸಿಸಿದರೆಂದು ಅರಿಷಿಣಗೋಡಿಯವರ ವಿವರಣೆ. ಬೆಂಗಳೂರಿನ ಹನ್ನೊಂದು ತಿಂಗಳ ವಾಸ್ತವ್ಯದಲ್ಲಿ 'ಎಚ್ಚರ ತಂಗಿ ಎಚ್ಚರ' ಕಂಪನಿಗೆ ಕೀರ್ತಿ ಮತ್ತು ಸಂಪಾದನೆ ತಂದುಕೊಟ್ಟಿತು.

ಈ ಕಂಪನಿಗೆ ಮೂರು ಸಲ ಸರಕಾರದಿಂದ ನೆರವು ದೊರೆತಿದೆ. ಚಿಂದೋಡಿ ಲೀಲಮ್ಮ ನಾಟಕ ಅಕಾಡೆಮಿಯ ಅಧ್ಯಕ್ಷೆಯಾಗಿದ್ದಾಗ ಎರಡು ಸಲ (೧೯೯೩–೯೪, ೧೯೯೪–೯೫) ೮೦,೦೦೦ ರೂಪಾಯಿಗಳು; ಕೆ. ಮರುಳಸಿದ್ದಪ್ಪನವರು ಅಧ್ಯಕ್ಷರಾಗಿದ್ದಾಗ (೧೯೯೭–೯೮) ಒಂದು ಸಲ ೮೦,೦೦೦ ರೂಪಾಯಿಗಳು ಅನುದಾನ ರೂಪದಲ್ಲಿ ದೊರೆತಿವೆ. ತೆಗೆದುಕೊಂಡ ಹಣವನ್ನು ಅರಿಷಿಣಗೋಡಿಯವರು ಕಂಪನಿಯ ಬದುಕಿಗೇ ವಿನಿಯೋಗಿಸಿದ್ದಾರೆ. '೧೯೯೩ರಿಂದ ಪ್ರೇಕ್ಷಕರ ಪ್ರೋತ್ಸಾಹ ಚೆನ್ನಾಗಿಲ್ಲ. ಹತ್ತು ಕ್ಯಾಂಪಿನಲ್ಲಿ ಒಂದು ಕ್ಯಾಂಪು ಕೈಹಿಡಿಯುತ್ತದೆ. ಕೈಯಿಂದ ಹಾಕುವುದೇ ಹೆಚ್ಚುತ್ತ ನಡೆದಿದೆ. ಸರಕಾರವು ನಿಯಮಿತವಾಗಿ ಆರ್ಥಿಕ ನೆರವನ್ನು ನೀಡಿದರೆ ಕಂಪನಿಗಳನ್ನು ಉಳಿಸಿಕೊಂಡು ಹೋಗಲು ಅನುಕೂಲವಾಗುತ್ತದೆ' ಎನ್ನುತ್ತಾರೆ ಅರಿಷಿಣಗೋಡಿ.

ಕಡಪಟ್ಟಿ ಪ್ರಕಾಶರ 'ಗುರುಪ್ರಸಾದ ನಾಟ್ಯ ಸಂಘ' ನಿಂತ ಮೇಲೆ ಅಲ್ಲಿದ್ದ ಪ್ರಮುಖ ಕಲಾವಿದರು ಕಮತಗಿ ಕಂಪನಿಗೆ ಬಂದರು. ಅವರಿಗೆ ಇರಲು ಅನುಕೂಲ

ಮಾಡಿಕೊಟ್ಟ ಅರಿಷಿಣಗೋಡಿಯವರು ಕಡಪಟ್ಟಿ ಪ್ರಕಾಶರೇ ಬರೆದಂತಹ 'ಭೂಮಿ ತೂಕದ ಹೆಣ್ಣು', 'ತವರು ಬಿಟ್ಟ ತಂಗಿ' ನಾಟಕಗಳನ್ನು ಪ್ರದರ್ಶನಕ್ಕೆತ್ತಿಕೊಂಡರು. ಅಣ್ಣ ಆರ್.ಆರ್. ಅರಿಷಿಣಗೋಡಿಯವರ ಒಂದು ಬ್ರಾಂಚ್ ಕಂಪನಿಯಲ್ಲಿ ಕಡಪಟ್ಟಿ ಕಲಾವಿದರ ರಂಗಸೇವೆ ಮುಂದುವರಿಯಿತು. ಹೀಗೆ ಕಲಾವಿದರನ್ನು ಸಿದ್ಧಗೊಳಿಸುತ್ತ, ನೆಲೆ ಕಳೆದುಕೊಂಡ ಕಲಾವಿದರಿಗೆ ಆಸರೆಯಾಗುತ್ತ, ನಾಟಕಗಳನ್ನು ಬರೆಸುತ್ತ ಕಮತಗಿ ಕಂಪನಿಯು ನಿರಂತರ ರಂಗಸೇವೆಯ ಆರು ದಶಕಗಳನ್ನು ಪೂರೈಸಿದ್ದು ದಾಖಲೆ.

## ನಿಲ್ಲದ ಕಂಪನಿ – ನಿರಂತರ ಪ್ರಯೋಗಗಳು

ಕಮತಗಿ ಕಂಪನಿಯು ಆರಂಭವಾದಂದಿನಿಂದ (೧೯೩೧) ಎರಡು ಸಾವಿರದ ಮೂರರವರೆಗೆ (೨೦೦೩) ನಿರಂತರವಾಗಿ ನಡೆಯಿತು. ನಟರ ಪಲಾಯನದಿಂದ, ಆರ್ಥಿಕ ಮುಗ್ಗಟ್ಟಿನಿಂದ, ಯಾವುದೇ ಕಾರಣದಿಂದ ನಿಂತೇ ಇಲ್ಲವೆಂದರೆ ಆಶ್ಚರ್ಯವಲ್ಲವೆ? ೧೯೩೦–೪೦ರ ದಶಕದ ಮತ್ತು ಅನಂತರದ ಕಂಪನಿಗಳಿಗೆ ಹೋಲಿಸಿದರೆ ಈ ಕಂಪನಿಯ ನಿಲ್ಲದ ನಡೆಯು ಅಪರೂಪವಾದದ್ದೇ. ಒಂದು ಹೊತ್ತು ಉಂಡು ಮತ್ತೊಂದು ಹೊತ್ತು ಉಪವಾಸ ಬೀಳುವ, ಒಂದು ವರುಷ ನಡೆದು ಮರುವರುಷ ಮುಗ್ಗರಿಸಿದಂಥ ಕಂಪನಿಗಳೇ ಹೆಚ್ಚಿವೆ. ಕಮತಗಿ ಕಂಪನಿ ಮಾತ್ರ ಸೋಲಿಲ್ಲದ ಸರದಾರನಂತೆ ನಡೆಯಿತು. ಈ ಸಾಧನೆಗೆ ಅರಿಷಿಣಗೋಡಿಯವರಿಗಿದ್ದ ವೃತ್ತಿಪರತೆ, ವ್ಯವಹಾರ ಕೌಶಲ್ಯಗಳೇ ಕಾರಣವೆನ್ನಬೇಕು.

ನಾಟಕ ಕಂಪನಿಗಳಿಗೆ ನಟ – ನಟಿಯರೇ ಆಸ್ತಿ. ಅವರ ನಿರ್ಗಮನದಿಂದ ಕಂಪನಿಗಳು ನಿಲ್ಲುವ ಸಂಭವ ಹೆಚ್ಚು. ಅದಕ್ಕಾಗಿ ಮಾಲೀಕರು ವಿಶೇಷ ಏರ್ಪಾಡು ಮಾಡಿಕೊಳ್ಳಬೇಕೆನ್ನುವುದು ಅರಿಷಿಣಗೋಡಿ ಅವರ ವಾದ. ಕೆಲವು ಮಾಲೀಕರು ಸಿದ್ಧ ನಟರನ್ನು ಹುಡುಕಿಕೊಂಡು ಒಳ್ಳೆಯ ಸ್ಥಿತಿಯಲ್ಲಿರುವ ಕಂಪನಿಗೆ ಹೋಗುವರು. ಪ್ರಸಿದ್ಧ ನಟ–ನಟಿಯರಿಗೆ ಆಸೆ–ಆಮಿಷ ತೋರಿಸಿ ತಮ್ಮ ಕಡೆಗೆ ಸೆಳೆದುಕೊಂಡು ಹೋಗುವರು. ಇಂಥ ಪರಾವಲಂಬಿ ಮಾಲೀಕರಿಂದ ಎಷ್ಟೋ ಕಂಪನಿಗಳು ನಮ್ಮಲ್ಲಿ ನೆಲ ಕಚ್ಚಿವೆ. ಇಂಥ ಪದ್ಧತಿ ನಿಲ್ಲದ ಹೊರತು ಕಂಪನಿಗಳಿಗೆ ಉದ್ಧಾರವಿಲ್ಲವೆನ್ನುವರು ಅರಿಷಿಣಗೋಡಿ. ಕಂಪನಿ ಸ್ವಾವಲಂಬಿಯಾಗಿ, ಸುಭದ್ರವಾಗಿ ನಿಲ್ಲಬೇಕೆಂದರೆ ನಟರನ್ನು ರೂಪಿಸುವ ಉಪಕ್ರಮವನ್ನು ಕಂಪನಿಯ ಅಂತರ್‌ಶಿಸ್ತಾಗಿ ರೂಢಿಸಬೇಕೆಂದು ಹೇಳುತ್ತ ಗೋಕಾಕ ಕಂಪನಿಯ ಬಸವರಾಜ ಹೊಸಮನಿಯವರ ಸಾಧನೆಯನ್ನು ಉಲ್ಲೇಖಿಸುವರು. ಬಸವಣ್ಣೆಪ್ಪನವರ ಗೋಕಾಕ ಕಂಪನಿ ನಟ–ನಟಿಯರನ್ನು ನಿರ್ಮಿಸುವ ಕಾರ್ಖಾನೆಯಾಗಿತ್ತು. ಒಬ್ಬ ನಟ ಹಲವು ಪಾತ್ರಗಳನ್ನು ನಿರ್ವಹಿಸುವ ನೈಪುಣ್ಯ ಅವರಿಂದ ಕಲಿಯುವಂತಿತ್ತು. ಪಾತ್ರಗಳು ನಟನ ಗುತ್ತಿಗೆಯಾಗಬಾರದು. ಕೊಟ್ಟ ಪಾತ್ರಗಳನ್ನು ಅಭಿನಯಿಸುವ

ಕೌಶಲ್ಯ ಅವನಿಗಿರಬೇಕೆಂದು ಅವರು ಸಾಧಿಸಿ ತೋರಿಸಿದರು. ಅವರೇ ನನ್ನ ಮಾರ್ಗದರ್ಶಕರು ಎಂದು ಹೇಳುವರು. ಅವರಂತೆ ನಟರಿಗೆ ತರಬೇತಿ ಕೊಡುವ ಏರ್ಪಾಟನ್ನು ತಮ್ಮ ಕಂಪನಿಯಲ್ಲಿ ಮಾಡಿಕೊಂಡಿದ್ದರು. ಹಾಗೆಯೇ ನಾಯಕ ಪಾತ್ರ, ಖಳನಾಯಕ ಪಾತ್ರಗಳಿಗೆ 'ಇಂತಿಂಥವರು' ಎಂದು ಕೆಲವರನ್ನೇ ನಿಗದಿಗೊಳಿಸಿ ನಿರ್ಬಂಧಿಸುವುದನ್ನು ಕೈಬಿಟ್ಟರು. ಒಂದು ನಾಟಕದಲ್ಲಿ ನಾಯಕನಾಗಿದ್ದವನು ಮತ್ತೊಂದು ನಾಟಕದಲ್ಲಿ ಪೋಷಕ ನಟನಾಗಿ ಅಭಿನಯಿಸುವಂತಿರಬೇಕು. ಇದರಿಂದ ಒಬ್ಬ ನಟ ಇತರ ಪಾತ್ರಗಳನ್ನು ನಿರ್ವಹಿಸಲು ಸಮರ್ಥನಾಗುತ್ತಾನೆ. ಅಲ್ಲದೆ ನಟರಾಗುವವರಿಗೆ ಸಮಾನ ಅವಕಾಶವೂ ದೊರೆಯುತ್ತದೆ. ಮುಖ್ಯ ನಟನೆನಿಸಿಕೊಳ್ಳುವವ ಕಂಪನಿಯಿಂದ ನಿರ್ಗಮಿಸಿದರೆ ನಾಟಕ ನಿಲ್ಲಬಾರದು. ಮತ್ತೊಬ್ಬನು ಆ ಪಾತ್ರವನ್ನು ನಿರ್ವಹಿಸಿ ನಾಟಕ ಪ್ರದರ್ಶಿಸುವಂತಾಗಬೇಕು. ಕಮತಗಿ ಕಂಪನಿಯು ೧೯೯೦ರವರೆಗೆ ಇಂಥ ಶಿಸ್ತನ್ನೇ ಅಳವಡಿಸಿಕೊಂಡಿತ್ತು. ಆಮೇಲೆ ಆ ಶಿಸ್ತು ಸಡಿಲುಗೊಳ್ಳುತ್ತ ಹೋಯಿತು. ನಟನಾಗಬೇಕೆಂದು ಬರುವವರೂ ಕಡಿಮೆ. ಕಲಿತು ಕಲಾವಿದರಾಗಬೇಕೆನ್ನುವವರೂ ಕಡಿಮೆ. ಹೀಗಾಗಿ ತರಬೇತಿ ಕೊಡುವ ವ್ಯವಸ್ಥೆ ನಿಯಮಿತವಾಗಿ ಮುಂದುವರಿಯುತ್ತಿಲ್ಲ ಎಂಬ ಕೊರಗು ಅರಿಷಿಣಗೋಡಿಯವರದು.

ಕಾರಣಾಂತರದಿಂದ ಕಲೆಕ್ಷನ್ ಆಗದೆ ಇದ್ದಾಗ ಕಂಪನಿ ಸಾಲ-ಸೋಲದ ನೋವನ್ನುಂಡಿರಬೇಕಲ್ಲವೆ? ಎಂದು ಕೇಳಿದರೆ ಅಂಥ ಪ್ರಸಂಗಗಳು ಆಗಾಗ ಎದುರಾಗುವುದು ಸಹಜ. ಆದರೆ ಅದನ್ನು ಹೇಗೆ ನಿಭಾಯಿಸಬೇಕೆನ್ನುವದು ಮಾಲೀಕರ ವ್ಯವಹಾರ ಕೌಶಲ್ಯವನ್ನು ಅವಲಂಬಿಸಿದೆ ಎಂದು ತಾವು ಅನುಸರಿಸಿದ ತಂತ್ರವನ್ನು ವಿವರಿಸುವರು. "ಒಂದು ಕ್ಯಾಂಪಿಗೆ ಎಷ್ಟು ಖರ್ಚಾಗಬಹುದು ಅನ್ನೋದರ ಬಗ್ಗೆ ಒಂದು ಅಂದಾಜಿರುತ್ತದೆ. ಅಷ್ಟು ಹಣವನ್ನು ಇಡುಗಂಟಾಗಿ ಠೇವಣಿಯ ರೂಪದಲ್ಲಿ ಇಟ್ಟುಕೊಂಡಿರುತ್ತೇವೆ. ಆದಾಯವಿಲ್ಲದ ದಿನಗಳಲ್ಲಿ ಆ ಗಂಟನಿಂದ ತೆಗೆದುಕೊಂಡು ಬಳಸುತ್ತೇವೆ. ಇದರಿಂದ ಕಲೆಕ್ಷನ್ ಕುಸಿದರೂ ಕಂಪನಿಯ ಭವಿಷ್ಯದ ಮೇಲೆ ಅಂಥ ಆಘಾತದ ಪರಿಣಾಮವೇನೂ ಬೀರುವುದಿಲ್ಲ. ಆಮೇಲೆ ನಾಟಕಗಳು ಸರಿಯಾಗಿ ನಡೆದು ಆದಾಯವಾದರೆ ಮತ್ತೆ ಇಡುಗಂಟಿಗೆ ಹಣ ಸೇರಿಸುತ್ತ ಹೋಗಬೇಕು" ಎನ್ನುವರು. ಇದು ಕಮತಗಿ ಕಂಪನಿಯ ಆಡಳಿತದ ಸೂತ್ರವಾಗಿತ್ತು.

ಆವೇಶದ ನಿರ್ಣಯ, ನಾಟಕಗಳಲ್ಲಿ ಅತಿರೇಕತೆ ಮತ್ತು ಪ್ರಯೋಗಶೀಲತೆಯ ರಿಸ್ಕನ್ನು ಅವರು ತೆಗೆದುಕೊಂಡದ್ದು ಕಡಿಮೆ. ನಾಟಕದ ಪ್ರಯೋಗದಲ್ಲಿ 'ಹಿತ-ಮಿತ' ಸೂತ್ರವನ್ನು ಅವರು ಪಾಲಿಸಿದ್ದಾರೆ. ಇದೂ ಕೂಡ ಕಂಪನಿಯ ಗೆಲುವಿನ ಗುಟ್ಟೇ. ಕಂಪನಿಯ ಬದುಕು ಕಲಾವಿದರ ಬದುಕಿಗಾಗಿ ಬೇಕಾಗುವಷ್ಟು ಸಂಪಾದನೆ ನಾಟಕಗಳಿಂದಾಗಬೇಕು. ಅಂಥ ಕನಿಷ್ಠ ಮಾನದಂಡವಿಟ್ಟುಕೊಂಡು ಕಂಪನಿಯನ್ನು ಮುನ್ನಡೆಸಿದ ಸಾಹಸ ಅವರದು. ಮೇಲಿಂದ ಮೇಲೆ ಕ್ಯಾಂಪ್ ಬದಲಿಸುವುದರಿಂದ

ವಿಪರೀತ ಹಣ ವೆಚ್ಚವಾಗುವುದು. ಒಂದೆಡೆಯಿಂದ ಮತ್ತೊಂದೆಡೆಗೆ ಹೋಗಿ ನಿಂತುಕೊಳ್ಳಲು ೩೦ರಿಂದ ೫೦ ಸಾವಿರ ರೂಪಾಯಿ ಖರ್ಚಾಗುತ್ತವೆ. ಇಂಥದರಲ್ಲಿ ತಿಂಗಳೊಪ್ಪತ್ತಿನಲ್ಲಿ ಮತ್ತೆ ಕ್ಯಾಂಪ್ ಬದಲಿಸುವಂತಾದರೆ ಖರ್ಚು ನಿಭಾಯಿಸುವುದು ಕಷ್ಟವಾಗುತ್ತದೆ. ವ್ಯವಹಾರ ಮೈಮೇಲೆ ಬರುತ್ತದೆ. ಹಾಗಾಗಿ ಅವರು ಒಂದೆಡೆಗೆ ಕ್ಯಾಂಪ್ ಮಾಡಿದರೆ ಕನಿಷ್ಠ ಮೂರು ತಿಂಗಳಾದರೂ ಕ್ಯಾಂಪ್ ಬದಲಿಸುವ ಪ್ರಯತ್ನ ಮಾಡಲಿಲ್ಲ.

ಕಂಪನಿಯ ತಿರುಗಾಟದಲ್ಲಿಯೂ ಅರಿಷಿಣಗೋಡಿಯವರ ವಿಶೇಷತೆ ಎದ್ದುಕಾಣುವುದು. ನಾಲ್ಕು ದಶಕಗಳ ಅವಧಿಯಲ್ಲಿ ಒಂದು ಸಲ ಮಾತ್ರ ಕಾಗವಾಡ ಕ್ಯಾಂಪ್ ಮುಗಿಸಿಕೊಂಡು ಸಾಂಗಲಿಗೆ ಹೋಗಿದ್ದರು. ದೀನಾನಾಥ ಮಂಗೇಶಕರ ರಂಗಮಂದಿರದಲ್ಲಿ 'ಗರೀಬಿ ಹಟಾವೋ' ನಾಟಕವನ್ನಾಡಿದರು. ಅದೊಂದು ಕ್ಯಾಂಪ್ ಬಿಟ್ಟರೆ ನಾಡಿನ ಹೊರಗಡೆ ಕ್ಯಾಂಪು ಮಾಡಿಲ್ಲ. ನಾಡಿನ ಜಾತ್ರಾಸ್ಥಳಗಳು, ನಗರ, ತಾಲ್ಲೂಕು, ಹೋಬಳಿ, ಹಳ್ಳಿ ಒಟ್ಟಾರೆ ಹಳ್ಳಿಯಿಂದ ರಾಜಧಾನಿಯವರೆಗೆ ಈ ಕಂಪನಿಯ ತಿರುಗಾಟದ ವ್ಯಾಪ್ತಿ ಇದೆ. 'ನಾಡಿನ ಅಂಗಳವೇ ರಂಗಸ್ಥಳವಾಗಿ, ಅನ್ನದಾತರ ಅಂಗಳವಾಗಿರುವಾಗ ಹೊರಗಡೆ ಹೋಗಿ ಅದೃಷ್ಟವನ್ನೇಕೆ ಪರೀಕ್ಷಿಸಿಕೊಳ್ಳಬೇಕು?' ಎಂದು ಅರಿಷಿಣಗೋಡಿಯವರು ಕೇಳುವುದರಲ್ಲಿ ಅರ್ಥವಿದೆ. ನಾಲ್ಕು ಕಂಪನಿಗಳನ್ನು ನಾಡಿನೊಳಗೇ ಬದುಕಿಸಿದ ಹಿರಿಮೆ ಅವರದು. ಪರಪ್ರಾಂತದ ಪ್ರವಾಸ ಕಂಪನಿಯ ಜನಪ್ರಿಯತೆಗೆ ನಿದರ್ಶನವಾಗುವುದಾದರೆ; ನಲವತ್ತು ವರುಷಗಳಿಂದ ನಾಡಿನೊಳಗಡೆಯೇ ತಿರುಗಾಡಿ ನಾಟಕಗಳನ್ನಾಡಿದ್ದೂ ಕಂಪನಿಯ ಜನಪ್ರಿಯತೆಗೆ, ಯಶಸ್ಸಿಗೆ ನಿದರ್ಶನವಾಗಬಹುದಲ್ಲವೆ?

೧೯೬೧ರಿಂದ ಕಂಪನಿ ನಿರಂತರವಾಗಿ ನಾಟಕಗಳನ್ನಾಡುತ್ತ ಬಂದಿತು. ಅದರ ಒಟ್ಟು ಪ್ರಯೋಗಗಳ ಸಂಖ್ಯೆ ಎಷ್ಟು? ಎಂದು ಕೇಳಿದರೆ ಅರಿಷಿಣಗೋಡಿಯವರ ಬಳಿ ಉತ್ತರವಿಲ್ಲ. ಕೇಳಿದವರಿಗೇ ಲೆಕ್ಕ ಮಾಡಲು ಹೇಳುವರು. ಕ್ಯಾಂಪು ಬದಲಿಸುವಾಗ ಐದು ದಿನಗಳು ನಾಟಕಗಳಿಲ್ಲ. ಸಾಮಾನ್ಯವಾಗಿ ವರುಷದಲ್ಲಿ ಮೂರು ಕ್ಯಾಂಪುಗಳು; ಅಂದರೆ ಹದಿನೈದು ದಿನಗಳು ನಾಟಕಗಳಿಲ್ಲ. ಉಳಿದ ಮುನ್ನೂರೈವತ್ತು ದಿನಗಳೂ ನಾಟಕಗಳು. ದಿನಕ್ಕೊಂದು ಪ್ರಯೋಗವಂತೂ ಇದ್ದೇ ಇರುವುದು. ರವಿವಾರ, ಸಂತೆಯ ದಿನಗಳಲ್ಲಿ ಎರಡು ಮೂರು ಪ್ರಯೋಗಗಳನ್ನು ಗಣಿಸಿ – ಗುಣಿಸಿದರೆ ಕೆಲವು ಕಾಲ ಎರಡು ಬ್ರ್ಯಾಂಚ್ ಕಂಪನಿಗಳು, ಮತ್ತೆ ಕೆಲವು ಕಾಲ ಮೂರು ಬ್ರ್ಯಾಂಚ್ ಕಂಪನಿಗಳು ನಾಟಕಗಳನ್ನಾಡುತ್ತ ಬಂದಿವೆ. ಅವುಗಳನ್ನೂ ಕೂಡಿಸಿ ಹೇಳುವುದಾದರೆ ಅಸಂಖ್ಯಾತ ಪ್ರಯೋಗಗಳ ಸಂಖ್ಯೆ ಎದುರು ನಿಲ್ಲುವುದು. ತಮ್ಮ ಸಾಧನೆಯ ಬಗ್ಗೆ ಏನನ್ನೂ ಹೇಳಿಕೊಳ್ಳದ ಅರಿಷಿಣಗೋಡಿಯವರು ಅಪರೂಪದ ಮಾಲಿಕರೆನಿಸುತ್ತಾರೆ. ಆಡದೆ ಮಾಡುವ ರೂಢಿ ಅವರದು. ಅವರು ಒಬ್ಬ ಉತ್ತಮ ಮಾಲಿಕರಾಗಿದ್ದರು.

# ಕಂಪನಿಯ ಆಡಳಿತ

ನಾಟಕ ಕಂಪನಿ ಅನ್ನೋದು ಒಂದು ಉದ್ದಿಮೆ. ಆದರೆ ಅದೊಂದು ಉದ್ದಿಮೆಯಾಗಿ ಕರ್ನಾಟಕದಲ್ಲಿ ಬೆಳೆದು ಬರಲೇ ಇಲ್ಲ ಎಂಬುದು ವ್ಯಥೆಯ ಸಂಗತಿ. ಉದ್ದಿಮೆಗೆ ಶಿಸ್ತಿನ ಆಡಳಿತವಿರಬೇಕು. ಅದನ್ನು ನೋಡಿಕೊಳ್ಳಲು ಸಮರ್ಥ ಮ್ಯಾನೇಜರನಿರಬೇಕು. ನಮ್ಮ ಕಂಪನಿಗಳಲ್ಲಿ ದಕ್ಷ ಮ್ಯಾನೇಜರರಿಲ್ಲದಿರುವುದು ವೃತ್ತಿರಂಗಭೂಮಿಯ ಏಳುಬೀಳಿನ ಕಾರಣಗಳಲ್ಲಿ ಒಂದಾಗಿದೆ. ನಮ್ಮಲ್ಲಿ ಬಂಡವಾಳ ತೊಡಗಿಸುವ ಮಾಲೀಕರೇ ಮ್ಯಾನೇಜರರು. ಹೆಸರಿಗೊಬ್ಬ ಮ್ಯಾನೇಜರರು ಇದ್ದರೂ ಅವರು ಮಾಲೀಕರು ಹೇಳಿದಂತೆ ಕೇಳುವ ಕರಣಿಕ ಮಾತ್ರ. ಹೀಗಾಗಿ ನಮ್ಮ ಕಂಪನಿಗಳಲ್ಲಿ 'ಮ್ಯಾನೇಜ್‌ಮೆಂಟ್'ಗೆ ಮಹತ್ವದ ಸ್ಥಾನ ಆಗಲಿಲ್ಲ. ಶಿವಮೂರ್ತಿಸ್ವಾಮಿ ಕಣಬರಗಿಮಠ, ಶಿರಹಟ್ಟಿ ವೆಂಕೋಬರಾಯ, ಗುಬ್ಬಿ ವೀರಣ್ಣ ಮುಂತಾದ ಬೆರಳೆಣಿಕೆಯ ಮಾಲೀಕರು ಮಾತ್ರ ಮ್ಯಾನೇಜ್‌ಮೆಂಟಿನ ಬಗ್ಗೆ ಒತ್ತು ಕೊಟ್ಟಿದ್ದರು. ಅದರಿಂದ ಅವರ ಕಂಪನಿಗಳು ಬಹುಕಾಲ ಬಾಳಿ ರಂಗಕಲೆಯನ್ನು ಬೆಳಗಿದವು. ಬಹುತೇಕ ಮಾಲಿಕರಿಗೆ ಕಂಪನಿ ಕಟ್ಟುವ ಹುಚ್ಚಿದ್ದಂತೆ ಅದನ್ನು ಮುನ್ನಡೆಸುವ ಹೊಣೆಗಾರಿಕೆ, ದೂರದೃಷ್ಟಿ ಇದ್ದದ್ದು ಕಡಿಮೆ. ಈ ಕೊರತೆಯಿಂದಾಗಿಯೇ ೬೦-೭೦ರ ಕಾಲಾವಧಿಯಲ್ಲಿ ಹುಟ್ಟಿಕೊಂಡಿದ್ದ ನೂರಾರು ಕಂಪನಿಗಳಲ್ಲಿ ೨೦೦೦ದ ಹೊತ್ತಿನಲ್ಲಿ ಎಂಟತ್ತು ಕಂಪನಿಗಳು ಮಾತ್ರ ಉಳಿದುಕೊಂಡವು. ಅವುಗಳಲ್ಲಿ ಕಮತಗಿ ಕಂಪನಿಯೂ ಒಂದು. ಐವತ್ತು ವರುಷ ರಂಗಸೇವೆಗೈದ ಈ ಕಂಪನಿಯ ಯಶಸ್ಸಿಗೆ ಅರಿಷಿಣಗೋಡಿಯವರು ರೂಪಿಸಿಕೊಂಡು ಬಂದ ವ್ಯವಸ್ಥೆಯೇ ಕಾರಣ. ಅವರ ವ್ಯವಸ್ಥೆಯ ಮುಖ್ಯ ರೂಪ-ರೇಷೆಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು:

೧. ಒಂದು ಕ್ಯಾಂಪಿನ ಕನಿಷ್ಠ ಅವಧಿ ಮೂರು ತಿಂಗಳು.

೨. ಒಂದು ತಿಂಗಳು ನಾಟಕಗಳ ಆದಾಯವಿಲ್ಲದೆ ಕಂಪನಿ ಬದುಕಬೇಕು. ಅದಕ್ಕಾಗಿ ತಗಲುವ ಅಂದಾಜು ಹಣವನ್ನು ಠೇವಣಿ ರೂಪದಲ್ಲಿ ಇಡುವ ಏರ್ಪಾಟು ಮಾಡಬೇಕು.

೩. ಆಯಾ ಊರಲ್ಲಿಯ ಜನರ ಜೀವನಮಟ್ಟ, ಆದಾಯಕ್ಕೆ ಅನುಗುಣವಾಗಿ ಟಿಕೆಟ್ ದರವನ್ನು ಪರಿಷ್ಕರಿಸಬೇಕು.

೪. ತಿಂಗಳ ಸಂಬಳವನ್ನು ಕಲಾವಿದರಿಗೆ ನಾಲ್ಕು ಕಂತಿನಲ್ಲಿ ಅಂದರೆ ವಾರಕ್ಕೊಮ್ಮೆ ಕೊಡುವುದು ಸೂಕ್ತ.

೫. ವರುಷಕ್ಕೊಮ್ಮೆ ಕಲಾವಿದರ ಸಂಬಳ ಹೆಚ್ಚಿಸಬೇಕು.

೬. ನಿತ್ಯದ ಪ್ರಯೋಗವಲ್ಲದೆ ಹೆಚ್ಚುವರಿ ಪ್ರಯೋಗಗಳಾದಲ್ಲಿ ಕಲಾವಿದರಿಗೆ ವಿಶೇಷ ಭತ್ಯ ದೊರೆಯುವಂತಿರಬೇಕು.

೭. ಕಂಪನಿಯ ಬೋರ್ಡಿಂಗ್ ವ್ಯವಸ್ಥೆಗೆ ಹೊಂದಿಕೊಳ್ಳದವರಿಗೆ ಬೋರ್ಡಿಂಗ್ ವೆಚ್ಚವೆಂದು, ಬಾಡಿಗೆ ಮನೆಗಳಲ್ಲಿದ್ದರೆ ವಸತಿ ವೆಚ್ಚವೆಂದು ಪ್ರತ್ಯೇಕವಾಗಿ ಕೊಡುವ ಏರ್ಪಾಟಿರಬೇಕು.

೮. ಸಂಬಳದ ಹಣದಲ್ಲಿ 'ಭದ್ರತಾನಿಧಿ' ಎಂದು ಕೆಲವಷ್ಟು ಹಣ ಕಡಿತ ಮಾಡಿಕೊಂಡು ಕಲಾವಿದರ ಕಷ್ಟ ಕಾಲದಲ್ಲಿ ಅದನ್ನು ವಿತರಿಸುವ ಏರ್ಪಾಟು ಇರಬೇಕು. ಕಮತಗಿ ಕಂಪನಿಯ ಹಲವಾರು ಜನ ಕಲಾವಿದರು ಇದರ ಲಾಭ ಪಡೆದಿದ್ದಾರೆ.

೯. ನೂರು ಅಥವಾ ಇನ್ನೂರನೆಯ ಪ್ರಯೋಗವೆಂದರೆ ಕಂಪನಿಗೆ ಹಬ್ಬವಿದ್ದಂತೆ. ಅಂಥ ಸಂದರ್ಭಗಳಲ್ಲಿ ನಟ-ನಟಿಯರಿಗೆ, ರಂಗಕರ್ಮಿಗಳಿಗೆ ಉಡುಗೊರೆ, ಕಾಣಿಕೆಗಳನ್ನು ಕೊಟ್ಟು ಪ್ರೋತ್ಸಾಹಿಸುವ ಪದ್ಧತಿ ಇರಬೇಕು.

೧೦. ಕನಿಷ್ಠ ೨-೩ ವರ್ಷ ಸೇವೆ ಸಲ್ಲಿಸಿದ ಕಲಾವಿದರಿಗೆ, ಕ್ಯಾಂಪಿಗೆ ಒಬ್ಬೊಬ್ಬರಂತೆ ಬೆನಿಫಿಟ್ ಶೋ ಕೊಡುತ್ತಿದ್ದರು. ಕಲಾವಿದರು ಎರಡು ವರುಷಕ್ಕೊಮ್ಮೆ ಅಂಥ ಅನುಕೂಲ ಪಡೆಯುತ್ತಿದ್ದರು. ಇತರ ರಂಗಕರ್ಮಿಗಳಿಗೂ ಈ ಅವಕಾಶ ಅದ್ಯತೆ ಮೇರೆಗೆ ಇತ್ತು.

೧೧. ಮನೆಗೆಲಸ, ಕಚೇರಿ ಕೆಲಸವೆಂದು ಹೋಗುವ ಕಲಾವಿದರಿಗೆ ರಜೆಯ ಅವಕಾಶವಿತ್ತು. ತಿಂಗಳುಗಟ್ಟಲೆ ಹೋದರೆ ಸಂಬಳದಲ್ಲಿ ಕಡಿತ ಮಾಡಲಾಗುತ್ತಿತ್ತು.

೧೨. ಕ್ಯಾಂಪ್ ಬದಲಿಸುವಾಗ ಕಲಾವಿದರಿಗೆ ೨-೩ ದಿನ ರಜೆ ಹಾಗೂ ಮುಂಗಡ ಸಂಬಳ ಕೊಡುವ ಏರ್ಪಾಟು ಇತ್ತು.

ನಾಟಕಗಳ ಪ್ರಚಾರಕ್ಕಾಗಿ ಪ್ರತಿ ಕಂಪನಿಯಲ್ಲಿ ಒಂದೊಂದು ಆಟೋರಿಕ್ಷಾಗಳಿದ್ದವು. ದಿನದಲ್ಲಿ ಎರಡು ಸುತ್ತು ಹಾಕಿ ನಾಟಕದ ಪ್ರಚಾರ ಮಾಡುತ್ತಿದ್ದರು. ಕ್ಯಾಂಪ್ ಮಾಡಿದ ಊರಿನ ಸಾರ್ವಜನಿಕ ಬದುಕಿನೊಂದಿಗೆ ಕಂಪನಿ ಸ್ಪಂದಿಸುತ್ತಿತ್ತು. ಗುಡಿ – ಗುಂಡಾರಗಳ ನಿರ್ಮಾಣ, ಶಾಲೆ – ಕಾಲೇಜುಗಳ ಕಟ್ಟಡಗಳಿಗಾಗಿ ಕಮತಗಿ ಕಂಪನಿಯಿಂದ ಉದಾರ ದೇಣಿಗೆ ಸಂದಿದೆ.

ಅರಿಷಿಣಗೋಡಿಯವರು ತಮ್ಮ ಕಂಪನಿಗೆ ಮಾತ್ರವಲ್ಲ ಇಡೀ ರಂಗಭೂಮಿಯ ಏಳಿಗೆಗಾಗಿಯೂ ಚಿಂತಿಸಿದ್ದಾರೆ. ಕೈಲಾದಷ್ಟು ಸೇವೆ ಸಲ್ಲಿಸಲು ಪ್ರಯತ್ನಿಸುತ್ತಿದ್ದಾರೆ. ಡಾ॥ ಚಂದ್ರಶೇಖರ ಕಂಬಾರರು ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಇವರು ಸದಸ್ಯರಾಗಿದ್ದರು. ಒಂದು ಸಭೆಗೆ ಹಾಜರಾಗಿ ವೃತ್ತಿ ರಂಗಭೂಮಿ ಎದುರಿಸುತ್ತಿರುವ ಸಮಸ್ಯೆಗಳ ಕಡೆಗೆ ಅಧ್ಯಕ್ಷರ ಗಮನ ಸೆಳೆದರು. ಅದರ ಪುನರುಜ್ಜೀವನಕ್ಕಾಗಿ ಮಹತ್ವದ ಯೋಜನೆಗಳನ್ನು ರೂಪಿಸಿ ಜಾರಿಗೆ ತರಬೇಕೆಂದು ಕೇಳಿಕೊಂಡರು. ಅದರಿಂದೇನೂ ಪ್ರಯೋಜನವಾಗಲಿಲ್ಲ. ಅಷ್ಟೇ ಅಲ್ಲ ಮತ್ತೊಂದು ಸಭೆಗೆ ಇವರನ್ನು ಕರೆಯಲೂ ಇಲ್ಲ. ಹುಬ್ಬಳ್ಳಿಯಲ್ಲಿ ವೃತ್ತಿರಂಗಭೂಮಿ ಮಾಲೀಕರ ಸಂಘ ಅಸ್ತಿತ್ವಕ್ಕೆ ಬಂದಾಗ ಇವರು ಖಜಾಂಚಿಯಾಗಿದ್ದರು. ಎರಡು ಸಲ ಸಭೆ ಜರುಗಿತು. ಕಂಪನಿ,

ಕಂಪನಿಗಳ ನಡುವಿನ ಸ್ನೇಹ ಸಹಕಾರಕ್ಕಾಗಿ ಹಲವಾರು ನೀತಿ, ನಿಯಮಗಳನ್ನು ರೂಪಿಸಲಾಗಿತ್ತು. ಎರಡು ಕಂಪನಿಗಳ ಕ್ಯಾಂಪಿನ ನಡುವೆ ಇರಬೇಕಾದ ಕನಿಷ್ಠ ಅಂತರ, ಸೂಚನೆ ಇಲ್ಲದೆ ಕಂಪನಿ ಬಿಟ್ಟು ಹೋಗುವ ಕಲಾವಿದರ ಬಗ್ಗೆ ಶಿಸ್ತಿನ ಕ್ರಮ, ಹಣಕಾಸಿನ ನೆರವಿಗಾಗಿ 'ಸಹಕಾರಿ ಸಂಸ್ಥೆ'ಯೊಂದನ್ನು ಹುಟ್ಟು ಹಾಕುವುದು ಹೀಗೆ ಹಲವಾರು ಯೋಜನೆಗಳು ಸಂಘದ ಮುಂದಿದ್ದವು. ಆದರೆ ಮಾಲೀಕರು ಸಭೆಗೆ ಸರಿಯಾಗಿ ಹಾಜರಾಗದೆ ಇರುವುದರಿಂದ ಮತ್ತು ಸಹಕಾರಕ್ಕೆ ಮುಂದಾಗದಿರುವುದರಿಂದ 'ಮಾಲೀಕರ ಸಂಘ'ದಿಂದಲೂ ಏನೂ ಪ್ರಯೋಜನವಾಗಲಿಲ್ಲ, ಕಂಪನಿಗಳಿಂದಾಗಲಿ ಅಂಥ ಯಾವುದೇ ಪ್ರಾಮಾಣಿಕ ಪ್ರಯತ್ನ ನಡೆದಿಲ್ಲವೆಂದು ಅರಿಷಿಣಗೋಡಿಯವರು ನೊಂದು ನುಡಿಯುತ್ತಾರೆ.

ನಾಟಕ ಕಂಪನಿ, ನಟ–ನಟಿಯರು, ಪ್ರೇಕ್ಷಕರು ಈ ಮೂರು ಮುಖ್ಯ ವಿಷಯಗಳ ಕುರಿತು ಅರಿಷಿಣಗೋಡಿಯವರು ಹೇಳುವ ಅನುಭವದ ಮಾತುಗಳನ್ನು ಹೀಗೆ ಸಂಗ್ರಹಿಸಬಹುದು.

ಸಾಮಾಜಿಕ ಸಂದರ್ಭ, ಸನ್ನಿವೇಶಕ್ಕೆ ತಕ್ಕಂಥ ನಾಟಕಗಳನ್ನು ಬರೆಯಿಸಿ ಆಡುವ ಜರೂರಿ ಇದೆ. 'ಲಂಚಸಾಮ್ರಾಜ್ಯ', 'ಹೆಣ್ಣು ಮಗಳು', 'ಬಸ್ ಕಂಡಕ್ಟರ್', 'ಸೈನಿಕನ ಸಹೋದರಿ', 'ಗರೀಬಿ ಹಟಾವೋ' – ನಾಟಕಗಳಿಗೆ ಬದಲಾದ ಸಾಮಾಜಿಕ ಸಂದರ್ಭಗಳೇ ಕಾರಣ. ಸ್ತ್ರೀಯರ ತ್ಯಾಗ, ಸಹನೆ, ಪಾತಿವ್ರತ್ಯ ತೋರಿಸುವಂಥ ನಾಟಕಗಳು ನಮ್ಮಲ್ಲಿ ಸಾಕಷ್ಟು ಬಂದಿವೆ. ಕಾಲ ಬಲಾಗಿದೆ. ಮಹಿಳೆಯರ ಸಮಸ್ಯೆಗಳೂ ಬೇರೆಯಾಗಿವೆ. ಅವರು ಸ್ವತಂತ್ರವಾಗಿ, ಸ್ವಾವಲಂಬಿಯಾಗಿ ಬದುಕುತ್ತಿದ್ದಾರೆ. ಅಂಥ ಬದುಕಿನ ಸುತ್ತ ರಚನೆಯಾದ ನಾಟಕಗಳನ್ನು ಬರೆಯಿಸಿ ಆಡುವ ಅಗತ್ಯ ನಾಟಕ ಕಂಪನಿಗಳ ಎದುರಿಗಿದೆ.

ಆಡುವ ನಾಟಕಗಳು ನೋಡುವವರಿಗೆ ನೋವು ಕೊಡುವಂಥವು ಆಗಿರಬಾರದು; ವೈಯಕ್ತಿಕ ಟೀಕೆಗಳಿರಬಾರದು.

ಮನಸ್ಸಿಗೆ ಬಂದಂತೆ ಮಾತಾಡಿ ನಾಟಕದ ಕಥೆಯನ್ನು ಹದಗೆಡಿಸುವ ನಟರನ್ನು ನಿಯಂತ್ರಿಸಬೇಕು.

ಪ್ರೇಕ್ಷಕರ ಅಭಿರುಚಿ ಎಂದು ಕಲೆಯ ರುಚಿ ಕೆಡಿಸಬಾರದು.

ರಂಗದ ಮೇಲೆ ನೀತಿ ಹೇಳಿ ಬದುಕಿನಲ್ಲಿ ನೀತಿ ಬಿಟ್ಟು ನಡೆದರೆ ಕಲಾವಿದನು ಜನರ ಕಣ್ಣಲ್ಲಿ ಸಣ್ಣವನಾಗಿ ಕಾಣುವನು. ಕಲಾವಿದರು ಚಾರಿತ್ರ್ಯವಂತರಾದರೆ ಕಂಪನಿಯ ಗೌರವ ಹೆಚ್ಚುವುದು.

ಕಲಾವಿದರು ಕ್ಯಾಂಪು ಮಾಡಿದ ಊರಿನ ಪರಿಸರಕ್ಕೆ ಹೊಂದಿಕೊಂಡು ಹೋಗಬೇಕು.

ಕಲಾವಿದರು ಕಂಪನಿಗೆ ದ್ರೋಹ ಬಗೆಯಬಾರದು, ಮಾಲೀಕರು ಕಲಾವಿದರ ಕಷ್ಟ ಸುಖಗಳಿಗೆ ಸ್ಪಂದಿಸುವವರಾಗಬೇಕು.

ಕಂಪನಿಗಳು ನಟ–ನಟಿಯರನ್ನು ರೂಪಿಸಬೇಕು. ಸಿದ್ಧ ನಟರನ್ನು ಹುಡುಕಿಕೊಂಡು ಹೋಗಬಾರದು.

ಕಂಪನಿ – ಕಂಪನಿಗಳ ನಡುವೆ ಮತ್ಸರವಿರದೆ ಆರೋಗ್ಯಪೂರ್ಣ ಸ್ಪರ್ಧೆ ಇರಬೇಕು.

## ಸಾಮಾಜಿಕ ನಾಟಕಗಳದ್ದೇ ಸಂಭ್ರಮ

ಕಮತಗಿ ಕಂಪನಿಯು ಅರವತ್ತಕ್ಕೂ ಹೆಚ್ಚು ನಾಟಕಗಳನ್ನು ಆಡಿದೆ. ಅವುಗಳಲ್ಲಿ ಎರಡು ಮಾತ್ರ ಐತಿಹಾಸಿಕ ('ಸಿಂಧೂರ ಲಕ್ಷ್ಮಣ', 'ಕಿತ್ತೂರ ಚೆನ್ನಮ್ಮ'). ಇನ್ನೆರಡು ಭಕ್ತಿ ಪ್ರಧಾನ ('ಹುಚ್ಚೇಶ್ವರ ಮಹಾತ್ಮೆ', 'ಗರಗದ ಮಡಿವಾಳೇಶ್ವರ ಮಹಾತ್ಮೆ'). ಉಳಿದವೆಲ್ಲವು ಸಾಮಾಜಿಕ ನಾಟಕಗಳೇ. ಈ ಕಂಪನಿಯ ಸಮಕಾಲೀನ ನಾಟ್ಯ ಸಂಘಗಳು ಪೌರಾಣಿಕ ನಾಟಕಗಳನ್ನಾಡುವ ಸಾಹಸ ತೋರಿದರೂ ಅರಿಷಿಣಗೋಡಿಯವರು ಆ ಕಡೆಗೆ ಲಕ್ಷ್ಯ ಹರಿಸಲಿಲ್ಲ. ಅದಕ್ಕೆ ಅವರು ಕೊಡುವ ಕಾರಣವೆಂದರೆ, ಪೌರಾಣಿಕ ನಾಟಕಗಳ ಸಿದ್ಧತೆಗಾಗಿ ಹೆಚ್ಚು ಬಂಡವಾಳ ತೊಡಗಿಸಬೇಕು. ಶ್ರದ್ಧೆಯಿಂದ ಕಲಿತು ಆಡುವ ಉತ್ಸಾಹಿ ಕಲಾವಿದರಿರಬೇಕು. ಜೊತೆಗೆ ಕಲಿತು ಆಡಲು ಹೆಚ್ಚು ಸಮಯ ಬೇಕು. ಇಷ್ಟಾಗಿ ಆಡಿದ ನಾಟಕವು ಯಶಸ್ವಿಯಾಗದಿದ್ದರೆ ಕಂಪನಿ ಸುಧಾರಿಸಿಕೊಳ್ಳುವುದು ಕಷ್ಟ; ಹಾಕಿದ ದುಡ್ಡು ತಿರುಗಿ ಬರದಿದ್ದರೆ ಕಂಪನಿ ಮುಂದುವರಿಯುವುದು ಹೇಗೆ? ಎಂದು ಕೇಳುವ ಅರಿಸಿಣಗೋಡಿಯವರು ಪೌರಾಣಿಕ ನಾಟಕಗಳನ್ನಾಡುವ ರಿಸ್ಕನ್ನು ತೆಗೆದುಕೊಂಡಿಲ್ಲ. ಇವರ ಕಂಪನಿ ಪ್ರಯೋಗಿಸಿದ ಐತಿಹಾಸಿಕ, ಭಕ್ತಿ ಪ್ರಧಾನ ಕೃತಿಗಳು ಯಶಸ್ವಿಯಾಗದಿರುವುದೂ ಇಂಥ ತೀರ್ಮಾನಕ್ಕೆ ಮತ್ತೊಂದು ಕಾರಣವಾಗಿದೆ. ಹೀಗಾಗಿ ಸರಳ, ಸುಂದರ ಸಾಮಾಜಿಕ ನಾಟಕಗಳನ್ನಾಡುತ್ತ ಕಂಪನಿ ದೀರ್ಘ ಕಾಲ ಬಾಳಿದೆ.

ಸಾಮಾಜಿಕ ನಾಟಕಗಳಿಗೆ ತಕ್ಕಂಥ ಉತ್ತಮವಾದ ರಂಗಪರಿಸರವನ್ನು ನಿರ್ಮಿಸಲು ಬೇಕಾದ ಪರಿಕರಗಳು, ದೃಶ್ಯಾವಳಿಗಳು ಕಂಪನಿಯಲ್ಲಿದ್ದುವು. ನಟ–ನಟಿಯರ ಸಂಪತ್ತು ಇತ್ತು. ಒಂದು ಸಾಮಾಜಿಕ ನಾಟಕವನ್ನು ಹದಿನೈದು ದಿನಗಳಲ್ಲಿ ನಿರ್ದೇಶಿಸಿ ರಂಗಕ್ಕೆ ತರಬಲ್ಲೆ ಎಂಬ ಧೈರ್ಯದ ಮಾಲೀಕರಿದ್ದರು. ಈ ಅನುಕೂಲಗಳಿಂದಾಗಿ ಕಮತಗಿ ಕಂಪನಿಯ ರಂಗದ ಮೇಲೆ ಹೆಚ್ಚಾಗಿ ಸಾಮಾಜಿಕ ನಾಟಕಗಳೇ ಸಂಭ್ರಮಿಸಿದವು. ೧೯೬೧ರಿಂದ ೬೫ರವರೆಗೆ 'ಲಂಚಸಾಮ್ರಾಜ್ಯ', 'ಹೆಣ್ಣು ಮಗಳು' ನಾಟಕಗಳು ಜನಪ್ರಿಯ ನಾಟಕಗಳೆನಿದ್ದವು. ೧೯೬೫ರಿಂದ 'ಬಸ್ ಕಂಡಕ್ಟರ್', 'ಸೈನಿಕರ ಸಹೋದರಿ' ನಾಟಕಗಳು, ೧೯೭೨ರಿಂದ 'ಗರೀಬಿ ಹಟಾವ್ಫೋ', ೧೯೬೫ ರಿಂದ ೬೮ರವರೆಗೆ 'ಸೊಸೆ ಹಾಕಿದ ಸವಾಲ್', ೧೯೬೮ ರಿಂದ 'ಹಸಿರು ಬಳೆ', 'ಎಚ್ಚರ ತಂಗಿ ಎಚ್ಚರ', 'ಕಿವುಡ ಮಾಡಿದ ಕಿತಾಪತಿ' ಮುಂತಾದವು ಸಾಮಾಜಿಕ ನಾಟಕಗಳು ಕಮತಗಿ ಕಂಪನಿಯ ಜನಪ್ರಿಯ ಕೃತಿಗಳು.

# ೪. ಕಲಾವಿದರು

ಕಮತಗಿಯ ಹುಚ್ಚೇಶ್ವರ ನಾಟ್ಯಸಂಘವೆಂದರೆ, ಅದು ಸಾಮಾಜಿಕ ನಾಟಕಗಳನ್ನಾಡುವ ಕಂಪನಿಯೆಂದೇ ಪ್ರಸಿದ್ಧಿ ಇತ್ತು. ಎಪ್ಪತ್ತಕ್ಕೂ ಹೆಚ್ಚು ಸಾಮಾಜಿಕ ನಾಟಕಗಳು ಈ ಕಂಪನಿಯಿಂದ ಪ್ರಯೋಗಗೊಂಡಿವೆಯೆಂದರೆ ದೊಡ್ಡ ದಾಖಲೆಯೇ! ಸಾಮಾನ್ಯವಾಗಿ ಒಂದು ನಾಟಕ ಕಂಪನಿಯ ಚರಿತ್ರೆ ಬರೆಯುವಾಗ ಅಲ್ಲಿ ಜಯಭೇರಿ ಭಾರಿಸಿದ ಕೆಲವು ನಾಟಕಗಳನ್ನು ಮಾತ್ರ ಉಲ್ಲೇಖಿಸಿ ಬಿಡುತ್ತೇವೆ. ಆದರೆ ಹಣ ಕೊಡದ, ನೂರಾರು ಪ್ರಯೋಗಗಳನ್ನು ಕಾಣದ ನಾಟಕಗಳ ಕುರಿತು ಮಾತನಾಡುವುದೇ ಇಲ್ಲ. ಹಾಗೆ ನೋಡಿದರೆ ಅಂಥ ನಾಟಕಗಳ ಪ್ರಯೋಗಕ್ಕೆ ಕಂಪನಿಯವರು ವ್ಯಯಿಸಿದ ಸಂಪತ್ತು, ಶ್ರಮ ದೊಡ್ಡ ಪ್ರಮಾಣದ್ದಿರುತ್ತದೆ. ಹಾಗಾಗಿ ಒಂದು ನಾಟಕ ಕಂಪನಿಯ ಒಟ್ಟು ಸಾಧನೆ ನೋಡುವಾಗ ಅದು ಆಡಿದ ಎಲ್ಲ ನಾಟಕಗಳನ್ನು ಪರಿಗಣಿಸಬೇಕು. ಈ ದೃಷ್ಟಿಯಿಂದ ಕಮತಗಿ ಕಂಪನಿಯ ನಾಟಕಗಳ ಮೊತ್ತ ಅಚ್ಚರಿಯುಂಟು ಮಾಡುತ್ತದೆ.

ಸಾಮಾಜಿಕ ನಾಟಕಗಳ ಅಭಿನಯ ವಿಶೇಷತೆಯೆಂದರೆ ಅದು ಸಹಜವಾಗಿದ್ದಷ್ಟೂ ಸೊಗಸು. ಅದರಲ್ಲಿಯೂ ವಾಚಿಕ ಅಭಿನಯಕ್ಕೆ ಒಂದು ಗುಂಜಿ ತೂಕ ಹೆಚ್ಚು. ಇಂಥ ವಾಸ್ತವ ನೆಲೆಯ ಅಭಿನಯದಲ್ಲಿ ಸಾಧನೆ ಮಾಡಿದ ದೊಡ್ಡ ನಟ-ನಟಿಯರ ಬಳಗ ಕಂಪನಿಯಲ್ಲಿತ್ತು. ನೂರಕ್ಕೂ ಹೆಚ್ಚು ನಟರು, ಐವತ್ತಕ್ಕೂ ಹೆಚ್ಚು ನಟಿಯರು. ನಾಟಕಕಾರರು, ನಿರ್ದೇಶಕರು, ಸಂಗೀತ ಸಂಯೋಜಕರು, ವಾದ್ಯವೃಂದದವರು, ಆಡಳಿತ ನೋಡಿಕೊಳ್ಳುವವರು, ಜಾಹಿರಾತಿನವರು. ಒಟ್ಟಾಗಿ ಹೇಳುವುದಾದರೆ ಕಮತಗಿ ಕಂಪನಿಯ ರಂಗ ಪರಿವಾರವು ಮುನ್ನೂರಕ್ಕೂ ಹೆಚ್ಚು ಕಲಾವಿದರ ಸಂಸಾರ ಒಳಗೊಂಡಿತ್ತು.

ಬಸಯ್ಯ ಪಟ್ಟದಕಲ್ಲ, ಮಹಮ್ಮದ ಕೋಳಿ, ಗುಡೂಸಾಬ ಇಳಕಲ್ಲ, ಶಂಕ್ರಯ್ಯ ರಕ್ಕಸಗಿ, ಗುರುಸಿದ್ದಯ್ಯ ಇದ್ದಿಲಗಿ, ಅಬ್ಬಾಸ ಅಲಿ, ಕೀರ್ತಪ್ಪ ಇಳಕಲ್ಲ, ಮರಿಯಣ್ಣ ಹೊಸಪೇಟೆ, ವಿಜಯಶೇಖರ, ಆನೆಗುಂದಿ, ಯಮನಪ್ಪ ಸಾಸನೂರ, ಈಶ್ವರ ಶಿಗ್ಗಲಿ, ರಾಮಗೋಪಾಲ, ಬಿ.ಕೆ. ಶಂಕರ, ನಿಂಗನಗೌಡ ಅಂಬಲಿ, ಪ್ರಕಾಶ ಕಡಪಟ್ಟಿ, ವಿಜಯ ತಾಳಿಕೋಟೆ, ರಾಜು ತಾಳಿಕೋಟೆ, ಬಾಬು ಕುಕನೂರ, ಉಮೇಶ ಕುಕನೂರ ಇವರು ಕಮತಗಿ ಕಂಪನಿಯ ನಟಶ್ರೇಷ್ಠರಲ್ಲಿ ಕೆಲವರು ಮಾತ್ರ. ಸುಲೋಚನಾ ಇಳಕಲ್ಲ, ಲೋಲಾ ಬೆಂಗಳೂರ, ಜಯಾ ರಿತ್ತಿ, ಸುಮಿತ್ರಾ ಕುಂದಾಪುರ, ಸುಶೀಲಾ ಕುಂದಾಪುರ, ಲಲಿತಾ ದಾವಣಗೆರೆ, ಲೋಲಾಕ್ಷಿ ಮದ್ದೂರ, ಪ್ರೇಮಾ ಹೊಸಮನಿ, ಮೆಹಬೂಬಬಿ ನೂರಜಾನ್ ಇತ್ಯಾದಿ ಶ್ರೇಷ್ಠ ನಟಿಯರ ಬಳಗವಿತ್ತು. ಈ ಕಂಪನಿಯಲ್ಲಿ ಬಹಳವರ್ಷ ಸೇವೆ ಸಲ್ಲಿಸಿ, ಕಂಪನಿಯ ಶ್ರೇಯೋಭಿವದ್ಧಿಯಲ್ಲಿ ತಮ್ಮದೇ ಕಾಣಿಕೆ ಸಲ್ಲಿಸಿದ ನಟಿಯರಲ್ಲಿ ಪ್ರಮೀಳಾ

ಗುಡೂರ, ಮಮತಾ ಗುಡೂರ ಸಹೋದರಿಯರು ಮತ್ತು ಮಾಲತಿಶ್ರೀ ಮೈಸೂರ ಇವರ ಸೇವೆ ಸ್ಮರಣೀಯವಾದುದು.

ಕಂಪನಿ ಆರಂಭವಾದ ಹೊಸತರಲ್ಲಿ ಗುಳೇದಗುಡ್ಡದಿಂದ ಬಾಗಲಕೋಟಕ್ಕೆ ಬರುತ್ತಿದ್ದಂತೆ ಪ್ರಮೀಳಾ ಗುಡೂರ ಅವರ ಪ್ರವೇಶವಾಯಿತು. ಇವರಾದರೂ ಹುನಗುಂದ ತಾಲೂಕಿನವರೇ. ಗುಡೂರ ಎಂಬ ಊರಿನವರು. ಅಲ್ಲಿಯ ಫಕ್ರುಸಾಬ ಇಮಾಂಬಿ ದಂಪತಿಗಳ ಮಗಳು ಫಾತಿಮಾ ರಂಗಭೂಮಿಯಲ್ಲಿ ಪ್ರಮೀಳಾ ಹೆಸರಿನಿಂದ ಪ್ರಸಿದ್ಧರಾದರು. ಇವರ ರೂಪ ಲಾವಣ್ಯಕ್ಕೆ ಅಭಿನಯಕೌಶಲ್ಯ ಕುಂದಣವಿಟ್ಟಂತೆ ಇತ್ತು. ಫಾತೀಮಾ ಶಾಲಾಬಾಲಕಿಯಾಗಿದ್ದಾಗ ನೃತ್ಯಕಲೆಯತ್ತ ಆಕರ್ಷಿತಳಾದಳು. ಅವರಿವರ ಕಲೆಯನ್ನು ನೋಡಿ, ತನ್ನದೇ ಶೈಲಿಯಲ್ಲಿ ಅನುಕರಿಸಿ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನರ್ತಿಸಿ ಬಹುಮಾನ ತರುತ್ತಿದ್ದಳು. ಮಗಳ ಕಲೆ ತಾಯಿ ತಂದೆಗಳಿಗೆ ಹೆಮ್ಮೆ ತಂದಿತು. ಇದೇ ಗೀಳು ಫಾತೀಮಾಳನ್ನು ನಾಟಕದ ಕಡೆಗೆ ಎಳೆದು ತಂದಿತು. ಒಂದು ಮಾತಿನ ಸಣ್ಣ ಪಾತ್ರದಿಂದ ಅವರ ರಂಗ ಪ್ರವಾಸವು ವಸಂತಕಾಲ ನಾಟ್ಯಸಂಘ, ಹುಬ್ಬಳ್ಳಿಯಿಂದ ಪ್ರಾರಂಭವಾಯಿತು. ಇದು ವಸಂತಸಾ ನಾಕೋಡ ಅವರ ಸೋದರ ಅರ್ಜುನಸಾ ನಾಕೋಡರ ಕಂಪನಿ. ಕೆಲವು ತಿಂಗಳಲ್ಲಿ ಫಾತೀಮಾ ಬಾಲಕಿ ಪಾತ್ರಗಳಿಂದ ನಾಯಕಿ ಪಾತ್ರದವರೆಗೆ ಬೆಳೆದಳು. ಪ್ರೇಕ್ಷಕರ ಅಭಿಮಾನಕ್ಕೂ ಪಾತ್ರಳಾದಳು ಪ್ರಮೀಳಾ ಹೆಸರು ಪಡೆದಳು.

ಸೌಭಾಗ್ಯಲಕ್ಷ್ಮಿಯಲ್ಲಿ ಗುಣವಂತ ವೇಶ್ಯೆ, ನಾರೀ ಸಾಹಸದಲ್ಲಿ ದೇವಿ, ಏರಿದ ನಂಜು ನಾಟಕದಲ್ಲಿ ಊರ್ಮಿಳಾ, ಸತಿ ಪತಿಯಲ್ಲಿ ಸುಶೀಲಾ, ನಿರ್ಮಲಾದಲ್ಲಿ ನಿರ್ಮಲಾ ಇತ್ಯಾದಿ ನಾಯಕಿ ಪಾತ್ರಗಳು ಪ್ರಮೀಳಮ್ಮನವರನ್ನು ರಂಗಭೂಮಿ ಮೇಲೆ ಗಟ್ಟಿಯಾಗಿ ನಿಲ್ಲಿಸಿದವು. ನಾಕೋಡರ ಕಂಪನಿ ನಂತರ ಪಡೆಸೂರ ಕಂಪನಿ, ಮೈಂದರ್ಗಿ ಕಂಪನಿಗಳಲ್ಲಿ ಕೆಲವು ಕಾಲ ಅಭಿನಯಿಸಿ ಜನಪ್ರೀತಿ ಬೆನ್ನಿಗಿಟ್ಟುಕೊಂಡು ಕಮತಗಿ ಕಂಪನಿ ಪ್ರವೇಶಿಸಿದರು. ಇವರ ಆಗಮನದಿಂದ ಅದೇ ತಾನೇ ತಲೆಯೆತ್ತಿದ್ದ ಕಂಪನಿಗೆ ಆನೆಬಲ ಬಂದಂತಾಯಿತು. ಒಂದು ಸಾಮಾಜಿಕ ನಾಟಕಕ್ಕೆ ಒಬ್ಬ ಒಳ್ಳೆಯ ನಾಯಕನಟ, ಓರ್ವ ನಾಯಕಿ ನಟಿ, ಒಬ್ಬ ವಿಲನ್, ಒಬ್ಬ ಹಾಸ್ಯ ಪಾತ್ರಧಾರಿ ಇದ್ದರೆ ಸಾಕು ಆ ನಾಟಕ ಆಡಿ ಗೆಲ್ಲಬಹುದು ಎಂಬ ಧೈರ್ಯ ಕಂಪನಿ ಮಾಲೀಕರಲ್ಲಿದ್ದ ದಿನಗಳವು. ಕಮತಗಿ ಕಂಪನಿಯಲ್ಲಿ ಮಾಲೀಕರೇ ನಾಟಕಕಾರರು, ಮುಖ್ಯ ನಟರು, ಅವರ ಸ್ನೇಹಿತರೇ ನಟರು. ಇಂಥ ಪರಿವಾರಕ್ಕೆ ಪ್ರಮೀಳಾ ಅವರ ಪ್ರವೇಶವು ವಿಶೇಷ ಆಕರ್ಷಣೆ ತಂದಿತು. ಅರಿಷಿಣಗೋಡಿಯವರ ಆರಂಭದ ನಾಟಕಗಳಲ್ಲಿ ಪ್ರಮೀಳಾ ಗುಡೂರ ನಾಯಕಿ ಸೈನಿಕನ ಸಹೋದರಿಯಲ್ಲಿ ಸಾವಿತ್ರಿ, ಕಣ್ಣಿದ್ದೂ ಕುರುಡ ನಾಟಕದಲ್ಲಿ ಗೌರಿ, ಗರೀಬಿ ಹಟಾವೋದಲ್ಲಿ ಸರೋಜಾ – ಶೋಭಾ, ಮಹಾಂತೇಶಶಾಸ್ತ್ರಿಗಳ ದೇವರಿಲ್ಲದ ಗುಡಿಯಲ್ಲಿ ಸುಜಾತಾ ಇತ್ಯಾದಿ ಪಾತ್ರಗಳಿಂದ ಅವರು ಜನಮೆಚ್ಚುಗೆ ಗಳಿಸಿದರು. ಗೆದ್ದ ಸೊಸೆ ಬಿದ್ದ ಮಾವ ನಾಟಕದಲ್ಲಿಯ ಇವರ ಎಂ.ಎಲ್.ಎ. ಪಾತ್ರವು ಅವರ ಮನೋಜ್ಞ ಅಭಿನಯಕ್ಕೆ ಸಾಕ್ಷಿ ಎಂದು ಪ್ರೇಕ್ಷಕರು ನೆನಪಿಸಿಕೊಳ್ಳುತ್ತಾರೆ. ನಿರಂತರ ಇಪ್ಪತ್ತೈದು ವರ್ಷ ಪ್ರಮೀಳಮ್ಮ ಕಮತಗಿ

ಕಂಪನಿಯ ಮುಖ್ಯ ನಟಿಯಾಗಿ ಅಭಿನಯಿಸಿದರು. ಕಂಪನಿ ಬಿಟ್ಟ ಮೇಲೆ ಹಳ್ಳಿಯ ನಾಟಕಗಳಲ್ಲಿ ಅಭಿನಯಿಸಿದರು. ಟಿ.ವಿ. ಧಾರಾವಾಹಿಗಳಲ್ಲಿಯೂ ಅಭಿನಯಿಸಿದರು. ರೇಣುಕಾ ಯಲ್ಲಮ್ಮದಲ್ಲಿ ಪರಶುರಾಮ, ಮಲಮಗಳು ನಾಟಕದಲ್ಲಿ ಸಾವುಕಾರ ರಂಗಣ್ಣ, ಗೌಡ್ರಗದ್ದಲದಲ್ಲಿ ಗೌಡ ಅಲ್ಲದೆ ದುರ್ಯೋಧನ, ಅಶ್ವತ್ಥಾಮನಂತಹ ಪುರುಷ ಪಾತ್ರಗಳನ್ನು ಅಭಿನಯಿಸಿ ಪ್ರೇಕ್ಷಕರಿಂದ 'ವಾಹ್ವಾ' ಎನಿಸಿಕೊಂಡಿದ್ದಾರೆ. ಇವರ ರಂಗಸೇವೆಗೆ ಕರ್ನಾಟಕದ ಪ್ರತಿಷ್ಠಿತ 'ಗುಬ್ಬಿ ವೀರಣ್ಣ' ಪ್ರಶಸ್ತಿ ದೊರೆತಿದೆ. ಇವರ ಸಹೋದರಿ ಮಮತಾಜಾನ್ ಗುಡೂರ ಇವರ ಸೇವೆಯೂ ಗಣ್ಯವಾದುದು. ಕಮತಗಿ ಕಂಪನಿಯ ಬದುಕಿನಲ್ಲಿಯ ಇವರ ಸಾಧನೆಯನ್ನು ಕಂಪನಿ ಮಾಲೀಕರು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಕಮತಗಿ ಕಂಪನಿಯಲ್ಲಿ ಧೀರ್ಘಕಾಲ ಸೇವೆ ಸಲ್ಲಿಸಿದ ಇನ್ನೋರ್ವ ಕಲಾವಿದೆಯೆಂದರೆ ಮಾಲತಿಶ್ರೀ ಮೈಸೂರು. ಬಡತನದಿಂದಾಗಿ ಓದು ನಿಲ್ಲಿಸಿ ರಂಗಭೂಮಿಯತ್ತ ಹೆಜ್ಜೆ ಹಾಕಿದವರು ಮಾಲತಿಶ್ರೀ. ಸಂಗೀತ, ನೃತ್ಯದಲ್ಲಿರುವ ಆಸಕ್ತಿಯೂ ಇದಕ್ಕೆ ಪ್ರೇರಕವಾಯಿತು. ಬಾಲ್ಯದಲ್ಲಿಯೇ ಶ್ರೀಕಂಠಮೂರ್ತಿಯವರ ಕಂಪನಿ, ಸ್ತ್ರೀ ನಾಟಕ ಮಂಡಳಿಯಲ್ಲಿ ಬಣ್ಣ ಹಚ್ಚಿಕೊಂಡು, ಗೋಕಾಕ ಕಂಪನಿಯಲ್ಲಿ ಅಭಿನಯಿಸಿ – ಇದಿಷ್ಟು ಅನುಭವಬುತ್ತಿ ಬೆನ್ನಿಗೆ ಕಟ್ಟಿಕೊಂಡು ಕಮತಗಿ ಕಂಪನಿಗೆ ಬಂದರು. ರಂಗಭೂಮಿಗೆ ಬೇಕಾಗುವ ಗುಣಗಳೆಲ್ಲ ದೇವರಿಂದ ಪಡೆದುಕೊಂಡು ಬಂದಂತಿದ್ದ ಇವರ ನಾಯಕಿ ಪಾತ್ರಗಳು, ಹಾಸ್ಯಪಾತ್ರಗಳು ಕಮತಗಿ ಕಂಪನಿಗೆ ಮೆರಗು ತಂದವು.

1977ರಲ್ಲಿ ಕಂಪನಿ ಪ್ರವೇಶಿಸಿದರು. ಗರೀಬಿ ಹಟಾವೋ ನಾಟಕದಲ್ಲಿ ಕಾರ್ಮಿಕನ ತಂಗಿಯ ಪಾತ್ರ ಮತ್ತು ನರ್ಸ್ ಹಾಸ್ಯಪಾತ್ರ, ಬಡವರೂ ನಗಬೇಕುದಲ್ಲಿ ಲಕ್ಷ್ಮಿ, ಚಂದ್ರಿ ಚೆಲ್ಲಾಟದಲ್ಲಿ ಚಂದ್ರಿ ಬಸ್ ಕಂಡಕ್ಟರ್‌ದಲ್ಲಿ ಚನ್ನವ್ವ ಪಾತ್ರಗಳು ಮಾಲತಿಶ್ರೀ ಅವರ ಅಭಿನಯ ಪ್ರತಿಭೆಯನ್ನು ಬೆಳಗಿದವು. ಪಾತ್ರಗಳಿಗೆ ಸಂಗೀತ, ಡಾನ್ಸ್ ಅವಶ್ಯವೆನಿಸಿದಾಗ ಅಂಥ ಕಲೆಗಳನ್ನು ಮಾಲತಿಶ್ರೀ ಕಲಿತು ಪಾತ್ರಗಳು ಮೈದುಂಬಿಕೊಳ್ಳುವಂತೆ ಮಾಡಿದರು. ಒಂದು ಕಾಲದಲ್ಲಿ ಬಸ್‌ಕಂಡಕ್ಟರ್ – ಕಮತಗಿ ಕಂಪನಿಯ ಸುಪರ್‌ಹಿಟ್ ನಾಟಕ. ಅದರಲ್ಲಿ ಅಬ್ಬಾಸ್ ಅಲಿ ಕಂಡಕ್ಟರ್, ಕೀರ್ತೆಪ್ಪ, ಕೊಪ್ಪರದ ಖಾನಾವಳಿ ಮಾಲೀಕ, ಮಾಲತಿಶ್ರೀ ಚೆನ್ನಿ – ಈ ಪಾತ್ರಗಳಿಂದ ಈ ನಟವರ್ಗ ಅಪಾರ ಜನಮೆಚ್ಚುಗೆ ಗಳಿಸಿತು. ಗರೀಬಿ ಹಟಾವೋ ನಾಟಕದಲ್ಲಿ ಅಬ್ಬಾಸ್‌ಅಲಿ – ಅಡಿಗೆ ಆಳು, ಕೀರ್ತೆಪ್ಪ – ಶೆಟ್ಟಿ, ಮಾಲತಿಶ್ರೀ – ಕಮಲಾ ಬೇಕರಿ ಪಾತ್ರಗಳೂ ಅಪಾರ ಕೀರ್ತಿ ತಂದವು. ಇಂತಿಂಥ ಪಾತ್ರಗಳಿಗೆ ಇಂತಿಂಥ ನಟ ನಟಿಯರೇ ಬೇಕು, ಇರಬೇಕು ಎಂದು ಜನರ ಒತ್ತಾಸೆ ಇತ್ತು. ಇಂಥ ಅಪರೂಪದ ಕಲಾವಿದರ ಜೋಡಿಯಿಂದಾಗಿಯೇ ಕಮತಗಿ ಕಂಪನಿ ಕಲಬುರ್ಗಿಯಲ್ಲಿ ನಿರಂತರ ಎರಡು ವರ್ಷ ಕ್ಯಾಂಪ್ ಮಾಡಲು ಸಾಧ್ಯವಾಯಿತು.

ಕಲಬುರ್ಗಿಯಲ್ಲಿದ್ದಾಗಲೇ ಎಸ್.ಎಂ. ಖೇಡಗಿ ಕವಿಗಳ ರೀತಿ ತಪ್ಪಿದರೂ ನೀತಿ ಬಿಟ್ಟಿಲ್ಲ, ಗೌರಿ ಹೋದಳು – ಗಂಗೆ ಬಂದಳು, ಪಾಪದ ದೇಹ ಪುಣ್ಯದ

ಜೀವ, ನನ್ನ ಗಂಡನ ಹೆಂಡತಿ ನಾಟಕಗಳು ಅವರ ನಿರ್ದೇಶನದಲ್ಲಿಯೇ ರಂಗಕ್ಕೆ ಬಂದವು. ಇದೇ ಕಲಾವಿದರ ನಾಯಕ ನಾಯಕಿ ಪಾತ್ರಗಳು, ಅರಿಷಿಣಗೋಡಿಯವರ ಮಾರ್ಗದರ್ಶನದಲ್ಲಿ ಯಶಸ್ಸು ಪಡೆದವು. ರೀತಿ ತಪ್ಪಿದರೂ ನೀತಿ ತಪ್ಪಿಲ್ಲ ನಾಟಕದಲ್ಲಿ ಮಾಲತಿಶ್ರೀ ಅವರದು ಶಾಂತಾ ಎಂಬ ನಾಯಕಿ ಪಾತ್ರ. ಈ ನಾಟಕ 600ಕ್ಕಿಂತ ಹೆಚ್ಚು ಪ್ರಯೋಗಗಳನ್ನು ಕಂಡಿತು.

ಎನ್.ಎಸ್. ಜೋಶಿ ಅವರ ಸಿಂಧೂರ ಲಕ್ಷ್ಮಣದಲ್ಲಿ ವಿಯೋಲ, ಮಹಾಂತೇಶಶಾಸ್ತ್ರಿಗಳ ದೇವರಿಲ್ಲದ ಗುಡಿಯಲ್ಲಿ ಸುಜಾತ, ಎಚ್.ಎನ್. ಹೂಗಾರ ಅವರ ಗೆದ್ದವರು ಯಾರು? ನಾಟಕದಲ್ಲಿ ಪುಟ್ಟಿ ಹಾಸ್ಯಪಾತ್ರ ಅಭಿನಯಿಸಿ ಮಲತಿಶ್ರೀ ಮೈಸೂರು ಕಮತಗಿ ಕಂಪನಿಯ ಮುಖ್ಯ ಆಕರ್ಷಣೆಯಾದರು. ಕಮತಗಿ ಕಂಪನಿಯ ಮೂರು ಬ್ರಾಂಚ್‌ಗಳಿದ್ದಾಗ ಮಾಲೀಕರು ಕಂಪನಿಯಿಂದ ಕಂಪನಿಗೆ ಸಂಚರಿಸುತ್ತಿದ್ದರು. ಅಂಥ ಸಂದರ್ಭದಲ್ಲಿ ಮಾಲತಿಶ್ರೀ ಮೂಲ ಕಂಪನಿಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಮಳೆ ಗಾಳಿಯಿಂದ ತೊಂದರೆಗಳೆದುರಾದರೂ ನಾಟಕಗಳು ನಿಲ್ಲದಂತೆ ನೋಡಿಕೊಳ್ಳುತ್ತಿದ್ದರು. ಕಂಪನಿಯ ಹಿತೈಷಿಯಾಗಿ ಬೆಳೆದರು. ಕ್ರಿ.ಶ. 2001ರವರೆಗೆ ಕಂಪನಿಯ ಕಷ್ಟ ಸುಖಗಳಲ್ಲಿ ಭಾಗವಹಿಸಿ ಆಮೇಲೆ ಮಗಳ ವಿದ್ಯಾಭ್ಯಾಸಕ್ಕಾಗಿ ಮೈಸೂರಿನಲ್ಲಿ ನೆಲೆ ನಿಂತರು. ಕಂಪನಿಯಿಂದ ಕರೆ ಬಂದಾಗ ಹೋಗಿ ಅಭಿನಯಿಸಿ ಬರುತ್ತಿದ್ದರು. 2003ರಲ್ಲಿ ಕಮತಗಿ ಕಂಪನಿ ನಿಂತಿತು. ಅಲ್ಲಿಂದ ಮಾಲತಿಶ್ರೀ ಬೆಂಗಳೂರಿಗೆ ಹೋಗಿ ಟಿ.ವಿ. ಧಾರಾವಾಹಿಯಲ್ಲಿ ತೊಡಗಿಸಿಕೊಂಡರು. ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಪ್ರಶಸ್ತಿಗೆ ಪಾತ್ರರಾದ ಮಾಲತಿಶ್ರೀ ಇವತ್ತಿಗೂ ರಂಗಭೂಮಿಯ ನಂಟನ್ನು ಬಿಟ್ಟಿಲ್ಲ. ಅವರ ಅನುಭವ ಕಥನ 'ತೆರೆ ಸರಿದಾಗ' ಎಂಬ ಕೃತಿ ಗುಡಿಹಳ್ಳಿ ನಾಗರಾಜ ಅವರ ನಿರೂಪಣೆಯಲ್ಲಿ 'ಸುಧಾ' ವಾರಪತ್ರಿಕೆಯಲ್ಲಿ ಧಾರವಾಹಿಯಾಗಿ ಹರಿದು ಬಂದಿತು. ಅನಂತರ ಪುಸ್ತಕರೂಪದಲ್ಲಿ ಪ್ರಕಟವಾಯಿತು. ಅದಕ್ಕೆ ಕರ್ನಾಟಕ ವಾಟಕ ಅಕಾಡೆಮಿ ಪ್ರಶಸ್ತಿಯೂ ಲಭಿಸಿತು. ಅದರಲ್ಲಿಯ ಅರ್ಧಕ್ಕಿಂತ ಹೆಚ್ಚು ಭಾಗ ಕಮತಗಿ ಕಂಪನಿಯ ಕಥೆಯನ್ನೇ ಹೇಳುತ್ತದೆ.

ಗವೀಶ ಹಿರೇಮಠರ ಸಂಪಾದಕತ್ವದಲ್ಲಿ ಮಾಲತಿಶ್ರೀ ಮೈಸೂರು ಅವರ 'ಸಿರಿಗಂಧ' ಅಭಿನಂದನಾ ಗ್ರಂಥ ಹೊರಬಂದಿದೆ. 300ಕ್ಕಿಂತ ಅಧಿಕ ಪುಟದ ಈ ಗ್ರಂಥದಲ್ಲಿಯೂ ಕಮತಗಿ ಕಂಪನಿ ಬಗ್ಗೆ ಸಾಕಷ್ಟು ವಿವರಗಳಿವೆ.

## ಅಣ್ಣ ಆರ್.ಆರ್. ಅರಿಷಿಣಗೋಡಿ

ಕಮತಗಿ ಕಂಪನಿಯ ಸಾಧನೆಯ ಹಿಂದೆ ಇನ್ನೊಬ್ಬ ಅರಿಷಿಣಗೋಡಿಯವರ ಕೊಡುಗೆಯೂ ಇದೆ. ಅವರು ಬಿ.ಆರ್. ಅರಿಷಿಣಗೋಡಿಯವರ ಅಣ್ಣ ಆರ್. ಆರ್. ಅರಿಷಿಣಗೋಡಿ. ಮ್ಯಾನೇಜರ್ ಆಗಿ, ಮಾಲೀಕರಾಗಿ, ನಟರಾಗಿ ಕಮತಗಿ

ಕಂಪನಿಯ ಬೆಳವಣಿಗೆಗಾಗಿ ಶ್ರಮಿಸಿದರು. ಹೆಸರು ರಾಯಪ್ಪ, ೧೯೩೦ರಲ್ಲಿ ಬೆನಕನಕಟ್ಟಿಯಲ್ಲಿಯೇ ಹುಟ್ಟಿದರು. ಮುಲ್ಕೀ ಪರೀಕ್ಷೆಯವರಗೆ ಓದಿ ತಂದೆಯ ಮಾರ್ಗದರ್ಶನದಂತೆ ಕೃಷಿ ಕಾಯಕದಲ್ಲಿ ತೊಡಗಿಕೊಂಡರು. ೧೯೬೧ರಲ್ಲಿ ತಮ್ಮನು ಕಂಪನಿಯೊಂದನ್ನು ಕಟ್ಟಿ, ನಾಟಕ ವ್ಯವಸಾಯವನ್ನು ಶುರು ಮಾಡಲು ಅವರು ನೆರವಿಗೆ ಧಾವಿಸಿದರು. ತಮ್ಮನು ನಾಟಕ ಬರೆಯುತ್ತ, ಪಾತ್ರ ಮಾಡುತ್ತ ರಂಗದ ಜೊತೆಗೇ ಇರುವಾಗ ರಾಯಪ್ಪನವರು ಕಂಪನಿಯ ಆಡಳಿತ ವಹಿಸಿಕೊಂಡರು. ಅಲ್ಲಿಂದ ಅವರು ಹಿಂದಿರುಗಿ ನೋಡಲೇ ಇಲ್ಲ. ನಾಟಕ ಕಲೆಯೇ ಅವರ ಕಾಯಕವಾಯಿತು. ೧೯೬೭ರಲ್ಲಿ ಕಂಪನಿಯ ಮೊದಲ ಶಾಖೆ ಆರಂಭವಾಗಲು ಅದರ ಒಡೆಯರಾಗಿ ಕಾರ್ಯ ನಿರ್ವಹಿಸಿದರು. ೧೯೭೭ರಲ್ಲಿ ಈ ಶಾಖೆಗೆ 'ಶ್ರೀ ಹೊಳೆಹುಚ್ಚೇಶ್ವರ ನಾಟ್ಯ ಸಂಘ' ಎಂದು ಹೆಸರಿಟ್ಟರು.

ಆರ್. ಆರ್. ಅರಿಷಿಣಗೋಡಿಯವರು ಉತ್ತಮ ಹಿನ್ನೆಲೆ ಗಾಯಕರಾಗಿದ್ದರು. ಉತ್ತಮ ನಟರೂ ಆಗಿದ್ದರು. ಹಾಸ್ಯ ಪಾತ್ರಗಳಲ್ಲಿ ಅವರದು ಎತ್ತಿದ ಕೈ. 'ಲಂಚಸಾಮ್ರಾಜ್ಯ'ದಲ್ಲಿ ಸಿದ್ಧ, 'ಹೆಣ್ಣು ಮಗಳು' ನಾಟಕದಲ್ಲಿ ಗುರಣ್ಣ, 'ಇಲ್ಲಿಗೆ ಬಂತೋ ಸಂಗಯ್ಯ'ದಲ್ಲಿ ಆರೆಂಪಿ ಡಾಕ್ಟರ್, 'ಹರಿಭಕ್ತ ಪುರಂದರದಾಸ'ದಲ್ಲಿ ಪುರಂದರದಾಸ ಇವರ ಅಚ್ಚುಮೆಚ್ಚಿನ ಪಾತ್ರಗಳು. ವಾಚಿಕ ಮತ್ತು ಅಂಗಿಕ ಅಭಿನಯದಲ್ಲಿ ರಾಯಪ್ಪನವರಿಗೆ ಹಿಡಿತವಿತ್ತು. ಅದರಿಂದಾಗಿಯೇ ಅವರ ಪಾತ್ರಗಳು ರಂಗದ ಮೇಲೆ ರಂಜಿಸುತ್ತಿದ್ದವೆಂದು ಪ್ರೇಕ್ಷಕರ ಅಂಬೋಣ.

ಭೀಮಪ್ಪ – ರಾಯಪ್ಪ ಈ ಅಣ್ಣ ತಮ್ಮಂದಿರಿಬ್ಬರೂ ಮಾಡಿದ ಪ್ರಯತ್ನ ಪರಿಶ್ರಮದ ಫಲವಾಗಿ ಮೂಲ ಕಂಪನಿಯ ಜೊತೆಗೆ ಮೂರು ಬ್ರಾಂಚ್ ಕಂಪನಿಗಳು ರಂಗಸೇವೆಯಲ್ಲಿ ತೊಡಗಿದವು. ೧೯೮೧ರಲ್ಲಿ ಅಣ್ಣ–ತಮ್ಮ ಬೇರೆ ಬೇರೆ ಆದರು. ಒಬ್ಬೊಬ್ಬರಿಗೆ ಎರಡೆರಡು ಕಂಪನಿಗಳು ಪಾಲಿಗೆ ಬಂದವು. ರಾಯಪ್ಪನವರು ಎರಡೂ ಕಂಪನಿಗಳನ್ನು ಎರಡು ವರುಷ ಚೆನ್ನಾಗಿಯೇ ನಡೆಸಿದರು. ಆಮೇಲೆ ವಯೋಮಾನದ ಕಾರಣದಿಂದ ಆಡಳಿತದ ಮೇಲೆ ನಿಯಂತ್ರಣ ತಪ್ಪಿ ೧೯೮೩–೮೪ರಲ್ಲಿ ಒಂದು ಕಂಪನಿಯನ್ನು ನಿಲ್ಲಿಸಿದರು. ಮುಂದೆ ೧೯೯೪ರಿಂದ ಆರೋಗ್ಯ ಚೆನ್ನಾಗಿ ಉಳಿಯಲಿಲ್ಲ. ಮೇಲಿಂದ ಮೇಲೆ ಆಸ್ಪತ್ರೆಗೆ ದಾಖಲಾಗುತ್ತಿದ್ದರು. ಅವರ ಅನುಪಸ್ಥಿತಿಯಿಂದ ಉಳಿದೊಂದು ಕಂಪನಿಯ ವ್ಯವಹಾರವೂ ಅಸ್ತವ್ಯಸ್ತಗೊಂಡಿತು. ೧೯೯೭ರಲ್ಲಿ ಅದೂ ಪೂರ್ತಿ ನಿಂತುಹೋಯಿತು. ಆಮೇಲೆ ಅನಾರೋಗ್ಯದಿಂದ ಹುಟ್ಟಿದೂರಿಗೆ ಮರಳಿದರು. ಆರೋಗ್ಯದಲ್ಲಿ ಸುಧಾರಣೆಯಾಗದೆ ೧೯೯೯ ಫೆಬ್ರವರಿ ೮ ರಂದು ರಾಯಪ್ಪನವರು ಬೆನಕಟ್ಟಿಯಲ್ಲಿ ಸ್ವರ್ಗಸ್ಥರಾದರು.

## ಮನೆ – ಮಡದಿ – ಮಕ್ಕಳು

ಮನೆಯನ್ನು ಉಪೇಕ್ಷಿಸಿ ನಾಟಕದಲ್ಲಿ ಬಿದ್ದವರು ಬಹಳ; ಬಿದ್ದು ಗೆದ್ದವರು

ವಿರಳ; ಮನೆಯನ್ನೂ ಗೆದ್ದು, ನಾಟಕದಲ್ಲಿಯೂ ಗೆದ್ದವರು ಇನ್ನೂ ವಿರಳ. ಇಂಥ ವಿರಳರಲ್ಲಿ ಅರಿಷಿಣಗೋಡಿಯವರೂ ಒಬ್ಬರು. ನಾಟಕದವರ ಚಟಗಳು ಮಗನಿಗೂ ಅಂಟಿಕೊಳ್ಳುವವೆಂದು ಆರಂಭದಲ್ಲಿ ತಂದೆ–ತಾಯಿಗಳು ತಡೆ ಒಡ್ಡಿದ್ದುಂಟು. ಅವರಿವರ ಮಧ್ಯಸ್ಥಿಕೆಯಿಂದ ನಾಟಕದ ಸಂಬಂಧ ಕಡಿದುಹಾಕಲು ನೋಡಿದರು. ಆಗ ಇವರು ಶಾಂತಚಿತ್ತದಿಂದ 'ಒಂದೆರಡು ವರುಷ ನಾಟಕರಂಗದಲ್ಲಿರುವೆ. ನನ್ನ ವ್ಯವಹಾರ, ವರ್ತನೆ ನಿಮಗೆ ಸರಿ ಕಂಡರೆ ಮುಂದುವರಿಯುವೆ. ಇಲ್ಲವಾದಲ್ಲಿ ಮನೆಗೆ ಹಿಂದಿರುಗುವೆ' ಎಂದು ಉತ್ತರಿಸಿದರು. ಅಲ್ಲದೆ ಕಂಪನಿ ಕಟ್ಟಲು ಹಣಕ್ಕಾಗಿ ಮನೆಯವರನ್ನು ಅವಲಂಬಿಸಲಿಲ್ಲ. ಕಿರಾಣಿ ಅಂಗಡಿಯಿಂದ ಗಳಿಸಿದ್ದನ್ನು ಕಂಪನಿಗಾಗಿ ತೊಡಗಿಸಿದರು. ಮೊದಲ ನಾಟಕದಿಂದ ಕಮತಗಿಯ ಜನರ ಮನ ಗೆದ್ದುದರಿಂದ ಮಾವನಾದರೂ ಅಪಸ್ವರ ಎತ್ತಲಿಲ್ಲ. ಮನೆಯೊಳಗಿನ ಹಿರಿಯರನ್ನು ಒಲಿಸಿಕೊಂಡು ನಾಟಕ ಕಂಪನಿಯ ಹೊಣೆ ಹೊತ್ತರು.

ಎರಡು ವರುಷಗಳ ಅವಧಿಯಲ್ಲಿ ಹಿರಿಯರು ಮೆಚ್ಚಿಕೊಳ್ಳುವಂತೆ ನಾಟಕ ಕಂಪನಿ ಕಟ್ಟಿ ತೋರಿಸಿದರು. ನಾಟಕ ವ್ಯವಸಾಯದಿಂದಲೂ ಚೆನ್ನಾಗಿ ಬದುಕಬಹುದೆಂದು ತೋರಿಸಿದರು. ಅಣ್ಣ ರಾಯಪ್ಪನು ಮೊದಲ ವರುಷವೇ ಕಂಪನಿ ಸೇರಿ ಆಡಳಿತ ನೋಡಿಕೊಳ್ಳಲು ಮುಂದಾಗಿದ್ದರು. ಅಣ್ಣ – ತಮ್ಮರ ಶ್ರದ್ಧೆ – ಶ್ರಮ ಹಾಗೂ ವ್ಯವಹಾರ ಕೌಶಲ್ಯದ ಫಲವಾಗಿ ಕಂಪನಿಯು ಉತ್ತರೋತ್ತರ ಬೆಳವಣಿಗೆ ಸಾಧಿಸಿತು. ನಾಟಕ ಕಂಪನಿಯಿಂದ ಕೌಟುಂಬಿಕ ಸಂಬಂಧಗಳು ಕೆಡಲಿಲ್ಲ. ಅಷ್ಟೇ ಅಲ್ಲ, ಒಂದರಿಂದ ಇನ್ನೊಂದು ಬೆಳೆಯಲು ಅನುಕೂಲವಾಯಿತು. ಕಂಪನಿಯಿಂದ ಗಳಿಸಿದ್ದನ್ನು ಬಳಸಿ ಊರಲ್ಲಿ ಹೊಲ ಖರೀದಿಸಿದರು. ಮನೆ ಕಟ್ಟಿಸಿದರು. ಕಂಪನಿಯು ತೊಂದರೆಯಲ್ಲಿದ್ದಾಗ ಮನೆಯಿಂದ ತಂದು ಪರಿಸ್ಥಿತಿ ನಿಭಾಯಿಸಿದರು. ನಾಟಕ ಕಂಪನಿ ಮತ್ತು ಮನೆಯ ನಡುವಿನ ಇಂಥ ಸಾಮರಸ್ಯದಿಂದಾಗಿಯೇ ಕಂಪನಿಯು ಎಂಥ ಸಮಸ್ಯೆಗಳೇ ಇರಲಿ, ಎದುರಿಸಿ ಮುಂದುವರಿಯಲು ಸಾಧ್ಯವಾಯಿತು.

೧೯೬೩ರಲ್ಲಿ ಕುಟುಂಬ ಜೀವನ, ಕಂಪನಿ ಜೀವನದಲ್ಲಿ ಒಮ್ಮೆಲೇ ಬಿರುಗಾಳಿಯೊಂದು ಬೀಸಿತು. ಆಗ ಕಂಪನಿ ಸಂಕೇಶ್ವರದಲ್ಲಿತ್ತು. 'ಸೈನಿಕನ ಸಹೋದರಿ' ನಾಟಕ ಭರಾಟೆಯಿಂದ ನಡೆದಿತ್ತು. ಇದೇ ಅವಧಿಯಲ್ಲಿ ಚಿತ್ತರಗಿ ಕಂಪನಿಯು ನಿಪ್ಪಾಣಿಯಲ್ಲಿತ್ತು. ಒಂದು ದಿನ ಇದ್ದಕ್ಕಿದ್ದಂತೆ ಒಂಬತ್ತು ಜನ ಕಲಾವಿದರು ಓಡಿಹೋದರು. ವಿಷಯ ತಿಳಿಯುತ್ತಲೇ ಅರಿಷಿಣಗೋಡಿಯವರು ಕೆರೂರಿನಲ್ಲಿದ್ದ ಬ್ರಾಂಚ್ ಕಂಪನಿಯ ಪ್ರಯೋಗ ನಿಲ್ಲಿಸಿ ನಟರನ್ನು ಕರೆತಂದು ಯಥಾರೀತಿ ನಾಟಕವನ್ನಾಡಿ ತೋರಿಸಿದರು. ಅಂದಿನ ನಾಟಕದಲ್ಲಿ ಅರಿಷಿಣಗೋಡಿಯವರು ಸಂಜೀವನ ಪಾತ್ರ ಮಾಡಿ ಸ್ಪರ್ಧೆಗಿಳಿದ ಕಂಪನಿಗೆ ಉತ್ತರ ಕೊಟ್ಟರು.

ಸಂಕೇಶ್ವರ ಕ್ಯಾಂಪ್ ಮುಗಿಸಿಕೊಂಡು ಕಂಪನಿ ಚಡಚಣ ಜಾತ್ರೆಗೆ ಹೋಯಿತು. ಅಲ್ಲಿಂದ ಕಂಪನಿ ತಾಳಿಕೋಟೆ ಕ್ಯಾಂಪಿಗೆ ಸಜ್ಜಾಯಿತು. ಅಷ್ಟರಲ್ಲಿ

ಮತ್ತೊಂದು ದಾರುಣ ಘಟನೆ ಘಟಿಸಿತು. ಹೆಂಡತಿ ಮತ್ತು ಚೊಚ್ಚಲ ಮಗ ಮೂರು ವರ್ಷದ ಹುಚ್ಚೇಶ್ವರ ಕಮತಗಿಯಲ್ಲಿರುತ್ತಿದ್ದರು. ತಾಯಿ ಕಂಪನಿಯ ಜೊತೆಗೇ ಇದ್ದರು. ಕಂಪನಿಯ ಸಾಮಾನುಗಳೆಲ್ಲ ತಾಳಿಕೋಟೆ ತಲುಪಿದ್ದವು. ಅರಿಷಿಣಗೋಡಿಯವರು ತಾಯಿಯನ್ನು ಕರೆದುಕೊಂಡು ಕಾರಿನಲ್ಲಿ ತಾಳಿಕೋಟೆಗೆ ಹೊರಟಿದ್ದರು. ಮಧ್ಯಾಹ್ನ ಮೂರು ಗಂಟೆಯ ವೇಳೆಗೆ ಕಾರಿನ ಟೈರ್‌ಗಳೆರಡೂ ಬರ್ಸ್ಟ್ ಆಗಿ, ನಡುದಾರಿಯಲ್ಲಿಯೇ ನಿಂತಿತು. ಕಾಕತಾಳೀಯ ಎನ್ನುವಂತೆ ಅದೇ ವೇಳೆಗೆ ಮನೆಯಲ್ಲಿ ಅಗ್ನಿದುರಂತ ಸಂಭವಿಸಿತ್ತು. ಕಾರು ರಿಪೇರಿ ಮಾಡಿಕೊಂಡು ತಾಳಿಕೋಟೆ ತಲುಪುತ್ತಿದ್ದಂತೆಯೇ ದುರಂತದ ಸುದ್ದಿ ಕಿವಿಗೆ ಅಪ್ಪಳಿಸಿತು. ಮನೆಯಲ್ಲಿ ಸಂಗ್ರಹಿಸಿಟ್ಟ ಹತ್ತಿಗೆ ಬೆಂಕಿ ಹತ್ತಿ ಕೊಂಡಿತೆಂದು, ಮಗ ಹುಚ್ಚೇಶ್ವರನು ಆಡುತ್ತ ಹೋಗಿ ಆ ಬೆಂಕಿಗೆ ಸಿಕ್ಕಿಕೊಂಡನೆಂದು ತಂತಿ ಮೂಲಕ ಸುದ್ದಿ ಗೊತ್ತಾಯಿತು. ಅರಿಷಿಣಗೋಡಿಯವರಿಗೆ ಮುಗಿಲು ಹರಿದು ಮೈಮೇಲೆ ಬಿದ್ದ ಅನುಭವ. ಕೂಡಲೇ ತಾಯಿಯನ್ನು ಕರೆದುಕೊಂಡು ಕಮತಗಿಗೆ ಧಾವಿಸಿದರು. ಎಳೆಯ ದೇಹ ಸುಟ್ಟು ಕರಕಲಾಗಿತ್ತು. ಕಣ್ಣಿಂದ ನೋಡಲಾಗಲಿಲ್ಲ. ನೆರೆದ ಜನ ಸಂಸ್ಕಾರಕ್ಕೆ ಮುಂದಾದರು. ಹುಚ್ಚೇಶ್ವರನೆಂದು ಹೆಸರಿಟ್ಟ ಮಗನ ಸಂಸ್ಕಾರವು ಹುಚ್ಚೇಶ್ವರನ ಮಠದ ಹತ್ತಿರವೇ ಆಗಬೇಕೆಂದು ಹಠ ಹಿಡಿದರು. ಮಠದ ಸ್ವಾಮಿಗಳು ಒಪ್ಪಿದರು. ದುಃಖದ ಮಡುವಿನಲ್ಲಿ ಸಂಸ್ಕಾರ ಕಾರ್ಯ ನೆರವೇರಿತು. ಇಡೀ ರಾತ್ರಿ ಹೆಂಡತಿಗೆ, ತಾಯಿಗೆ ಸಮಾಧಾನ ಹೇಳಿದರು. ಮುಂಜಾನೆ ಎದ್ದವರೇ ತಾಳಿಕೋಟೆಗೆ ಹೊರಟರು. ಅಂದು 'ಬಸ್ ಕಂಡಕ್ಟರ್' ನಾಟಕ ಆಡುವುದಾಗಿ ಪ್ರಚಾರ ಮಾಡಿತ್ತು. ಅಂದಿನ ಪ್ರಯೋಗದಲ್ಲಿ ಇವರು ಜಗದೀಶನ ತಂದೆಯ ಪಾತ್ರವನ್ನು ಮನಕರಗಿಸುವಂತೆ ಅಭಿನಯಿಸಿದರಂತೆ.

ಆಕಸ್ಮಿಕವಾಗಿ ಎರಗಿದ ಎಂಥ ಕಠಿಣ ಪ್ರಸಂಗದಲ್ಲಿಯೂ ಅರಿಷಿಣಗೋಡಿ ಅವರು ಧೈರ್ಯಗೆಡುತ್ತಿರಲಿಲ್ಲ. ಸಮಚಿತ್ತದಿಂದ ಸಮಸ್ಯೆಗಳನ್ನು ಎದುರಿಸಿ ಮುಂದಿರುವ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಅದು ಅವರ ದೊಡ್ಡ ಗುಣವಾಗಿತ್ತು. ಕಂಪನಿಗೆ ದೊಡ್ಡ ಬಲವಾಗಿತ್ತು. ನಾಟಕದ ಬೆನ್ನುಹತ್ತಿ ಅವರು ಮಕ್ಕಳ ಶಿಕ್ಷಣ ಉಪೇಕ್ಷಿಸಲಿಲ್ಲ. ತಂದೆ ತಮಗಾಗಿ ಮಾಡಿದ್ದನ್ನು ತಾವು ಮಕ್ಕಳಿಗಾಗಿ ಮಾಡದೆ ಹೋದರೆ ಪಿತೃದ್ರೋಹವಾಗುವುದೆಂದು ಅವರ ನಂಬಿಕೆ. ಮಕ್ಕಳ ಉನ್ನತ ಶಿಕ್ಷಣಕ್ಕಾಗಿಯೇ ಬಾಗಲುಕೋಟೆಯಲ್ಲಿ ಮನೆಯೊಂದನ್ನು ಖರೀದಿಸಿದರು. ತಮ್ಮದಂತೂ ಅಲೆಮಾರಿ ಜೀವನ, ಹೆಂಡತಿ ರೇಣುಕಾಳಿಗೆ ಮಕ್ಕಳ ವ್ಯವಸ್ಥೆ ಒಪ್ಪಿಸಿದರು. ಇದರಿಂದ ಅವರೆಲ್ಲ ಕಲಿತು ಮುಂದೆ ಬರಲು ಸಾಧ್ಯವಾಯಿತು. ಅಣ್ಣನ (ಆರ್.ಆರ್. ಅರಿಷಿಣಗೋಡಿ) ಮೂರನೇ ಮಗ ರವಿ ಸಿವಿಲ್ ಇಂಜಿನಿಯರಾಗಿದ್ದಾನೆ. ನಾಲ್ಕನೆಯ ಮಗ ಅಶೋಕ ಟೆಕ್ಸ್‌ಟೈಲ್ ವಿಭಾಗದಲ್ಲಿ ಡಿಪ್ಲೋಮಾ ಮಾಡಿ ನೆಲಮಂಗಲದ ಸಿಲ್ಕ್ ಫ್ಯಾಕ್ಟರಿಯಲ್ಲಿ ಸೇವೆಯಲ್ಲಿದ್ದಾನೆ. ಇವರ ಹಿರಿಯ ಮಗ ವೆಂಕಟೇಶ ಬಿ.ಎಸ್‌ಸಿ. ಪದವೀಧರ ಸಣ್ಣವನು ಶ್ರೀಧರ,

ಎಂ.ಬಿ.ಬಿ.ಎಸ್. ಡಾಕ್ಟರ್‌ನಾಗಿದ್ದಾನೆ. ಎರಡನೆಯವನು ಶಶಿಧರ ಒಕ್ಕಲುತನ ನೋಡಿಕೊಳ್ಳುತ್ತಾನೆ. ನೀನಾಸಂನಲ್ಲಿ ರಂಗಶಿಕ್ಷಣ ಪದವಿ ಪಡೆದಿದ್ದಾನೆ.

ಅರಿಷಿಣಗೋಡಿಯವರಿಗೆ ಈಗ ೮೨ರ ಪ್ರಾಯ. ಜೊತೆಗೂ ನಂಟು, ಮನೆಯ ಜೊತೆಗೂ ಒಡನಾಟ, ಅವರದು ಸವ್ಯಸಾಚಿ ವ್ಯಕ್ತಿತ್ವ. ಅಣ್ಣ ಶೀರಿಕೊಂಡ ಮೇಲೆ ನಿಂತಿದ್ದ ಅವರ ಕಂಪನಿಗೂ ಜೀವದಾನ ನೀಡಿದರು. ಕೆಲವು ಕಾಲ ಮೂಲ ಕಂಪನಿಯ ಜೊತೆಗೆ ಎರಡು ಬ್ರ್ಯಾಂಚ್ ಕಂಪನಿಗಳನ್ನೂ ನೋಡಿಕೊಂಡರು. ಒಂದೊಂದು ವಾರ ಒಂದೊಂದು ಕಂಪನಿಯಲ್ಲಿದ್ದು ಅಲ್ಲಿಯ ಸಮಸ್ಯೆ, ಅಡಚಣೆಗಳಿಗೆ ಪರಿಹಾರ ಸೂಚಿಸುತ್ತಿದ್ದರು. ೧೫-೨೦ ದಿನಗಳಿಗೊಮ್ಮೆ ಕಮತಗಿಗೆ ಹೋಗುತ್ತಿದ್ದರು. ಅಲ್ಲಿ ಸ್ವಂತ ಮನೆ ಕಟ್ಟಿಸಿದ್ದಾರೆ. ಮನೆಯನ್ನು ನೋಡಿಕೊಳ್ಳುವ ಮಡದಿಯ ಬಗೆಗೆ ಅವರಿಗೆ ತುಂಬ ಗೌರವ. ಸಂಸಾರದಲ್ಲಿ ಆಗಾಗ ಭಿನ್ನಾಭಿಪ್ರಾಯಗಳು ತಲೆದೋರುತ್ತವೆ. ಅಂಥ ಪ್ರಸಂಗಗಳಲ್ಲಿ ಒಬ್ಬರು ಉದಾಸೀನ ತಾಳಿದರೆ ಮತ್ತೆ ವಾತಾವರಣ ಸೌಹಾರ್ದಮಯವಾಗುವದೆನ್ನುತ್ತಾರೆ. ಅವರದು ಸುಖೀ ಕುಟುಂಬ. ಕಮತಗಿಗೆ ಬಂದು ಹೋಗುವ ಕಂಪನಿಗಳಿಗೆ ಅನುಕೂಲವಾಗಲೆಂದು ೧೯೭೮ರಲ್ಲಿ ರಂಗಮಂದಿರ ಕಟ್ಟಿಸಿದ್ದಾರೆ. ಹೈಸ್ಕೂಲ್ ಎದುರಿಗಿನ ೧೧೦ x ೧೦೦ (ಚದರ ಅಡಿ) ವಿಶಾಲ ಜಾಗದಲ್ಲಿ ಎರಡೂವರೆ ಲಕ್ಷ ರೂಪಾಯಿ ವೆಚ್ಚದಲ್ಲಿ ತಲೆಯೆತ್ತಿದ ರಂಗಮಂದಿರಕ್ಕೆ 'ಶ್ರೀ ಹುಚ್ಚೇಶ್ವರ ರಂಗಮಂದಿರ' ಎಂದು ಹೆಸರಿಟ್ಟಿದ್ದಾರೆ. ಸದ್ದಿಲ್ಲದೆ ರಂಗಸೇವೆಯನ್ನು ಮುಂದುವರಿಸಿದ್ದಾರೆ.

# ೫. ಕವಿ – ಕಲಾವಿದ

ಕಂಪನಿ ನಾಟಕಕಾರರನ್ನು ಕವಿ ಎಂದು ಸಂಬೋಧಿಸುವ ಪದ್ಧತಿ ಇವತ್ತಿಗೂ ಮುಂದುವರಿದೆ. ಇದಕ್ಕೆ ಸಂಸ್ಕೃತ ಸಾಹಿತ್ಯ, ಜೊತೆಗೆ ಸಂಗೀತ ನಾಟಕಗಳ ಪ್ರಭಾವವೇ ಕಾರಣವೆನ್ನಬೇಕು. ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಶ್ರವ್ಯ ಕಾವ್ಯ, ದೃಶ್ಯ ಕಾವ್ಯಗಳೆಂದು ಮುಖ್ಯ ಪ್ರಕಾರಗಳಿದ್ದು ನಾಟಕಗಳು ದೃಶ್ಯ ಕಾವ್ಯಗಳಾಗಿದ್ದವು. ದೃಶ್ಯ ಕಾವ್ಯಗಳನ್ನು ಬರೆದವರಿಗೆ ಕವಿಗಳೆಂದು ಕರೆಯುವುದು ಸಹಜವಾಗಿತ್ತು. ವೃತ್ತಿರಂಗಭೂಮಿಯ ಮೊದಲ ನಾಟಕಗಳಾದರೂ ಸಂಗೀತ ನಾಟಕಗಳಾಗಿದ್ದುದರಿಂದ ಅಲ್ಲಿ ಹಾಡುಗಳಿಗೇ ಹೆಚ್ಚಿನ ಸ್ಥಾನವಿತ್ತು. ಅವುಗಳನ್ನು ಬರೆದವರನ್ನು ಕವಿಗಳೆಂದು ಕರೆಯುವುದು ಕೂಡ ಔಚಿತ್ಯಪೂರ್ಣವಾಗಿತ್ತು. ಸಂಗೀತ ನಾಟಕಗಳ ಕಾಲ ಮುಗಿದು ರಂಗದ ಮೇಲೆ ಗದ್ಯ ನಾಟಕಗಳು ಕಾಲಿಟ್ಟ ಮೇಲೆಯೂ ಅವುಗಳನ್ನು ಬರೆದವರಿಗೆ ಕವಿಗಳೆಂದೇ ಕರೆಯುವ ರೂಢಿ ಮುಂದುವರಿದಿದೆ. ಕಂದಗಲ್ಲ ಹನುಮಂತರಾಯರಿಗೆ 'ನಾಟ್ಯ ಕವಿಕೇಸರಿ' ಎಂದು, ನಲವಡಿ ಶ್ರೀಕಂಠ ಶಾಸ್ತ್ರಿಗಳಿಗೆ 'ಕರ್ನಾಟಕ ಕವಿಚಂದ್ರ' ಎಂದು, ಮಹಾಂತೇಶ ಶಾಸ್ತ್ರಿಗಳಿಗೆ 'ನಾಟ್ಯ ಕವಿರಾಜ' ಎಂದು ಸಾರ್ವಜನಿಕರು ಬಿರುದಿತ್ತು ಸನ್ಮಾನಿಸಿರುವುದನ್ನು ಈ ಸಂದರ್ಭದಲ್ಲಿ ನೆನೆಯಬೇಕು. ಇಂದಿಗೂ ಧುತ್ತರಗಿ, ಹೂಗಾರ ಮುಂತಾದ ನಾಟಕಕಾರರನ್ನು ಕವಿಗಳೆಂದೇ ಕರೆಯುವರು. ಅರಿಷಿಣಗೋಡಿಯವರಾದರೂ ಕವಿಗಳೆಂದೇ ಗೌರವಿಸಲ್ಪಡುತ್ತಾರೆ. ಅವರು ಬರೆದ ಮೊದಲ ನಾಟಕ 'ಲಂಚಸಾಮ್ರಾಜ್ಯ' ಅದರಲ್ಲಿ 'ಶಿಲಾಧರ'ನ ಪಾತ್ರವನ್ನು ಅಭಿನಯಿಸುತ್ತಿದ್ದರು. ನಾಟಕ ಬರೆದು ನಟನಾಗಿ ಅಭಿನಯಿಸಿ ಜನಮೆಚ್ಚುಗೆ ಪಡೆದರು. ಈ ವಿಶಿಷ್ಟತೆಯಿಂದಾಗಿಯಿಂದಾಗಿಯೇ ವಿಜಯಪುರ ಜಿಲ್ಲೆಯ ಸಿಂದಗಿಯಲ್ಲಿ ಪ್ರೇಕ್ಷಕರೆಲ್ಲ ಸೇರಿ, 'ಕವಿಯೂ ಹೌದು, ಕಲಾವಿದನೂ ಹೌದು' ಎಂದು 'ಕವಿಕಲಾಧರ' ಬಿರುದನ್ನಿತ್ತು ಸಾರ್ವಜನಿಕವಾಗಿ ಸನ್ಮಾನಿಸಿದರು.

ನಾಟಕ ಕಂಪನಿಯ ಮಾಲಿಕನು 'ಆಲ್‌ರೌಂಡರ್' ಆಗಿದ್ದರೆ ಅವನ ಕಂಪನಿಗೆ ಆಯುಷ್ಯ ಹೆಚ್ಚು ಎಂಬುದು ಅರಿಷಿಣಗೋಡಿಯವರ ಅನುಭವ. ಎಂತಹ ಪ್ರಸಂಗದಲ್ಲಿ ಎಂತೆಂಥ ಸಮಸ್ಯೆಗಳು ಎದುರಾಗುವವೋ ದೇವರೇ ಬಲ್ಲ! ಹೆಚ್ಚಾಗಿ ನಟ ಮಹಾಶಯ ಮಾಲಿಕರಿಗೆ ತಲೆನೋವು. ಸ್ವಲ್ಪ ಹೆಸರು ಬಂದರೆ ಸಾಕು ಅವನನ್ನು ಹಾರಿಸಿಕೊಂಡು ಹೋಗಲು ಕೆಲವರು ಕಾಯ್ದು ಕುಳಿತಿರುತ್ತಾರೆ. ಹೀಗಾಗಿ ಮುಂಜಾನೆ ಇದ್ದವ ಸಂಜೆಗೆ ಇರುತ್ತಾನೆಂದು ಹೇಳಲಾಗದು. ಏಕಾಏಕಿ ಒಬ್ಬ ಪ್ರಮುಖ ನಟ ನಿರ್ಗಮಿಸಿದರೆ ನಾಟಕವನ್ನಾಡುವುದು ಹೇಗೆ? ಸ್ಪೆಯರ ನಟರಿದ್ದರೆ ಸರಿ, ಇಲ್ಲವಾದರೆ ನಾಟಕವನ್ನು ನಿಲ್ಲಿಸಬೇಕಾಗುವುದು. ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಮಾಲಿಕನಾದವನೂ ನಟಿಸಬೇಕಾಗುವುದು. ಅರಿಷಿಣಗೋಡಿಯವರು ಪರಿಸ್ಥಿತಿಯ ಕೂಸಾಗಿ ಬಿಟ್ಟ ನಟರ ಸ್ಥಳ ತುಂಬುತ್ತ 'ಆಲ್‌ರೌಂಡ್' ನಟನಾಗಿ ಬೆಳೆದದ್ದುಂಟು. ತಮ್ಮ ಕಂಪನಿಯ ನಾಟಕಗಳಲ್ಲಿ ನಾಯಕನಿಂದ ಸೇವಕನವರೆಗೆ

ಎಲ್ಲ ಪಾತ್ರಗಳನ್ನು ನಿವರ್ಹಿಸಿದ ಅನುಭವವಿದೆ. 'ಬಸ್ ಕಂಡಕ್ಟರ್' ಒಂದರಲ್ಲಿಯೇ ಪ್ರದೀಪ (ನಾಯಕ), ರಂಗಣ್ಣ (ತಂದೆ), ರಾಜು (ಕಂಡಕ್ಟರ್) ದೇವಣ್ಣ (ಖಾನಾವಳಿ ಮಾಲೀಕ) ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. 'ಲಂಚಸಾಮ್ರಾಜ್ಯ'ದಲ್ಲಿ ಶಿಲಾಧರ, ರಮೇಶ, ಸಂಪತರಾವ್ ಪಾತ್ರಗಳನ್ನು ಅಭಿನಯಿಸಿದ್ದಾರೆ. 'ಹೆಣ್ಣು ಮಗಳು' ನಾಟಕದ ಹಾಸ್ಯ ಪಾತ್ರ ಗುರಣ್ಣನಾಗಿ, ತಂದೆಯ ಪಾತ್ರ ಸೋಮೇಶನಾಗಿ, ನಾಯಕ ಪಾತ್ರ ಗಿರೀಶನಾಗಿ ಅಭಿನಯಿಸಿದ್ದಾರೆ 'ಗರೀಬಿ ಹಟಾವೋ'ದಲ್ಲಿ ಗುರುಬಸಪ್ಪ ಮತ್ತು ರಾಮು ಆಗಿ, 'ಸೈನಿಕನ ಸಹೋದರಿ'ಯಲ್ಲೀ ಸಂಜೀವ, ಲಿಂಗಣ್ಣಶೆಟ್ಟಿಯಾಗಿ, 'ಇಲ್ಲಿಗೆ ಬಂತೋ ಸಂಗಯ್ಯ'ದಲ್ಲಿ ಆರೆಂಪಿ ಡಾಕ್ಟರ್‌ನಾಗಿ, ಹೂಗಾರರ 'ಕೊಂಡು ತಂದ ಗಂಡ' ನಾಟಕದಲ್ಲಿ ಹಾಸ್ಯ ಪಾತ್ರ ಮಾಣಿ ಆಗಿ ಅಭಿನಯಿಸಿದ್ದಾರೆ.

ಪ್ರಾಸಂಗಿಕವಾಗಿ ಎಲ್ಲ ಪಾತ್ರಗಳನ್ನು ನಿರ್ವಹಿಸಬಲ್ಲವರಾಗಿದ್ದರೂ ಹಾಸ್ಯ ಪಾತ್ರ ಮತ್ತು ತಂದೆಯ ಪಾತ್ರಗಳಲ್ಲಿಯೇ ಅವರು ಹೆಚ್ಚು ಜನಮನ ರಂಜಿಸಿದರು. ಹೆಣ್ಣುಮಗಳು ನಾಟಕದಲ್ಲಿಯ ಗೂರನ ಪಾತ್ರವು ಪ್ರೇಕ್ಷಕರ ಪ್ರಶಂಸೆಗೆ ಪಾತ್ರವಾಗಿತ್ತು. ಹೆಂಡತಿ ಸರಸ್ವತಿಯ ಜೊತೆಗೆ ಹುಸಿಮುನಿಸಿನ ಮಾತಿನಿಂದ ಸರಸವಾಡುತ್ತ, ಸಾಧ್ವಿ ದಮಯಂತಿಯ ಜೊತೆಗೆ ಮೃದು ಮಾತಿನಿಂದ ಗೌರವ ತೋರಿಸುತ್ತ, ದಾರಿ ಬಿಟ್ಟ ಕಾಮಾಕ್ಷಿಯ ಜೊತೆಗೆ ವ್ಯಂಗ್ಯದ ಮಾತಿನಿಂದ ಚುಚ್ಚುತ್ತ ಸನ್ನಿವೇಶದಿಂದ ಸನ್ನಿವೇಶಕ್ಕೆ ಸೂತ್ರಧಾರನಂತೆ ಸಂಚರಿಸುವ ಗೂರನ ಪಾತ್ರದಲ್ಲಿಯ ಅರಿಷಿಣಗೋಡಿಯವರನ್ನು ಪ್ರೇಕ್ಷಕರಿನ್ನೂ ಮೆಲುಕು ಹಾಕುತ್ತಾರೆ. ೧೯೬೦-೭೦ರ ದಶಕದಲ್ಲಿ 'ಸೈನಿಕನ ಸಹೋದರಿ' ನಾಟಕದಲ್ಲಿಯ ಸಂಜೀವನ ಪಾತ್ರದಲ್ಲಿ ಅರಿಷಿಣಗೋಡಿಯವರು ಪ್ರಕಟಿಸುತ್ತಿದ್ದ ಹಾವ-ಭಾವಗಳು ಪ್ರೇಕ್ಷಕರನ್ನು ನಗುವಿನ ಹೊಳೆಯಲ್ಲಿ ತೇಲಿಸುತ್ತಿದ್ದವು.

'ಅನುಕರಣೆಯಿಂದ ನಟನು ಬೆಳೆಯುವುದಿಲ್ಲ. ಸ್ವಂತಿಕೆ ಬೇಕು. ಪಾತ್ರವನ್ನು ಅರ್ಥ ಮಾಡಿಕೊಂಡು ಅಭಿನಯಿಸಿದರೆ ಪ್ರೇಕ್ಷಕರ ಹೃದಯ ಮುಟ್ಟಲು ಸಾಧ್ಯ. ಪೌರಾಣಿಕ ನಾಟಕಗಳಲ್ಲಿ ಅಭಿನಯವು ಅತಿರೇಕವನ್ನು ಸಹಿಸುತ್ತದೆ. ಸಾಮಾಜಿಕ ನಾಟಕಗಳಲ್ಲಿ ಹಾಗಾಗುವುದಿಲ್ಲ; ಆಭಾಸ ಉಂಟಾಗುತ್ತದೆ. ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸುವ ನಟನು ಸಾಮಾಜಿಕ ಜೀವನವನ್ನು ಸೂಕ್ಷ್ಮವಾಗಿ ನೋಡಬೇಕು, ಗ್ರಹಿಸಬೇಕು ವಿಭಿನ್ನ ವೃತ್ತಿ-ಉಪವೃತ್ತಿ, ಆಚಾರ-ವಿಚಾರ, ಮಾತು-ಕತೆಗಳುಳ್ಳ ಜನರ ಬಗ್ಗೆ ತಿಳಿದುಕೊಳ್ಳಬೇಕು. ಇದರಿಂದ ಅಭಿನಯಕ್ಕೆ ಸಹಜತೆ ಬರುತ್ತದೆ. ಧ್ವನಿಯ ಏರಿಳಿತಗಳ ತರಂಗದಿಂದ ಭಾವವನ್ನು ಪರಿಣಾಮಕಾರಿಯಾಗಿ ಒಪ್ಪಿಸಲು ಸಾಧ್ಯ' ಎಂದು ಅರಿಷಿಣಗೋಡಿಯವರು ಅಭಿನಯದ ಕುರಿತು ಅನುಭವದ ಮಾತುಗಳನ್ನು ಹೇಳುವರು. ಕಂಪನಿಯಲ್ಲಿದ್ದ ಕಲಾವಿದರಿಗೆ ಇದೇ ರೀತಿ ಕಲಿಸುವರು. ಅವರು ಸಮರ್ಥ ನಿರ್ದೇಶಕರೂ ಕೂಡ. ಅವರು ಬರೆದ ನಾಟಕಗಳನ್ನು ಅವರೇ ನಿರ್ದೇಶಿಸಿದ್ದಾರೆ. ಹದಿನೈದು ದಿನಗಳಲ್ಲಿ ಒಂದು ಹೊಸ ನಾಟಕ ನಿರ್ದೇಶಿಸಿ ರಂಗಕ್ಕೆ ತರುವ ಧೈರ್ಯ ಅವರದು.

# ೬. ನಾಟಕ ಸಾಹಿತ್ಯ

ಅರಿಷಿಣಗೋಡಿಯವರು ಹದಿಮೂರು ನಾಟಕಗಳನ್ನು ಬರೆದಿದ್ದಾರೆ. ಬಯಲಾಟವನ್ನು ಆಧರಿಸಿ ಬರೆದ 'ಸಂಗ್ಯಾ–ಬಾಳ್ಯಾ' ಒಂದನ್ನು ಬಿಟ್ಟರೆ ಉಳಿದವೆಲ್ಲ ಸಾಮಾಜಿಕ ನಾಟಕಗಳೇ. ಮೊದಲೆರಡು ನಾಟಕಗಳ ರಚನೆಗೆ ಕಮತಗಿಯಲ್ಲಿಯೇ ಜರುಗಿದ್ದ ಘಟನೆಗಳು ಕಾರಣವಾಗಿವೆ. ಸ್ವಾನುಭವದ ಜೊತೆಗೆ ಕಂಡು ಕೇಳಿದ್ದ ಹಲವಾರು ಪ್ರಸಂಗಗಳು ಉಳಿದ ನಾಟಕಗಳಿಗೆ ಹಿನ್ನೆಲೆಯಾಗಿವೆ. ಸಾಮಾನ್ಯವಾಗಿ ಕಥೆಯನ್ನು ಹುಡುಕುತ್ತ ನಮ್ಮ ಕಂಪನಿ ನಾಟಕಕಾರರು ದೂರ ಹೋಗುವುದಿಲ್ಲ. ಧುತ್ತರಗಿಯವರು ಹೇಳಿದಂತೆ ನನ್ನ ನಾಟಕದ ಪಾತ್ರ ಸನ್ನಿವೇಶಗಳು ನಮ್ಮೂರ ಸೀಮೆಯಿಂದ ೨೦–೩೦ ಕಿ.ಮೀ. ವ್ಯಾಪ್ತಿಯೊಳಗೇ ಸುತ್ತುತ್ತವೆ. 'ಸಂಪತ್ತಿಗೆ ಸವಾಲ್' ನಾಟಕದೊಳಗಿನ 'ಭದ್ರ' 'ನಮ್ಮ ಓಣಿಯ ಹುಡುಗ' ಈ ಮಾತು ಬಹುತೇಕ ಕಂಪನಿ ನಾಟಕಕಾರರಿಗೆ ಅನ್ವಯಿಸುತ್ತದೆ. ತಮ್ಮ ಮನೆಯಲ್ಲಿ ಊರಲ್ಲಿ ಸಂಭವಿಸಿದ ಘಟನೆಗಳನ್ನು ಎತ್ತಿಕೊಂಡು ಅವುಗಳಿಗೆ ನಾಟಕ ರೂಪ ಕೊಡುತ್ತಾರೆ. ಇದರಿಂದ ಮನೆ ಮನೆಯ ಕಥೆಗಳು ನಾಟಕಗಳಾಗಿ ಕಂಪನಿಗಳು ರಂಗವನ್ನಲಂಕರಿಸಿದವು.

ಅರಿಷಿಣಗೋಡಿಯವರ ನಾಟಕಗಳಿಗೆ ಇನ್ನಷ್ಟು ದ್ರವ್ಯ ದೊರೆತದ್ದು ಪತ್ರಿಕೆಗಳ ಓದಿನಿಂದ ವಿದ್ಯಾರ್ಥಿದೆಸೆಯಿಂದಲೇ ಕಸ್ತೂರಿ, ಮಯೂರ, ಮಲ್ಲಿಗೆ, ತುಷಾರ, ಉತ್ಥಾನ ಮುಂತಾದ ಮಾಸಿಕಗಳನ್ನು ಓದುವ ಹವ್ಯಾಸವಿತ್ತು. ಇವತ್ತಿಗೂ ಅವರ ಕೈಯಲ್ಲಿ ಇಲ್ಲವೆ ಬ್ಯಾಗಿನಲ್ಲಿ ಯಾವುದಾದರೂ ಮಾಸಿಕಗಳು ಇದ್ದೇ ಇರುತ್ತವೆ. ಅವುಗಳಲ್ಲಿಯ ಕಥೆ–ಕಾದಂಬರಿಗಳನ್ನು ಓದುತ್ತಿರುವಾಗ ಇವರ ನಾಟಕಕ್ಕೆ ಪ್ಲಾಟುಗಳು ಹೊಳೆದಿವೆ. ಪಾತ್ರಗಳು ಬೆಳೆದಿವೆ. ಇವರಿಗೆ ಮೆಚ್ಚುಗೆಯಾದ ನಾಟಕಕಾರರೆಂದರೆ ಮಹಾಂತೇಶಶಾಸ್ತ್ರಿ, ಎನ್.ಎಸ್.ಜೋಶಿ, ಕೆ.ಎನ್. ಸಾಳುಂಕೆ, ಎಚ್.ಎನ್. ಹೂಗಾರ. ಟಿ.ಕೆ. ಮಹಮ್ಮದ್ ಅಲಿ, ಪಿ.ಬಿ. ಧುತ್ತರಗಿ ಇವರ ನಾಟಕಗಳನ್ನು ಓದಿ, ನೋಡಿಯೂ ಸಾಕಷ್ಟು ಕಲಿತಿದ್ದೇನೆನ್ನುವ ನಮ್ರತೆ ಅರಿಷಿಣಗೋಡಿಯವರದು.

ನಾಟಕ ರಚನೆಯ ದೃಷ್ಟಿಯಿಂದ ಇವರು ಹೇಳುವ ಮಹತ್ವದ ಮಾತೆಂದರೆ, 'ಏಕಾಂಗಿಯಾಗಿ ಕುಂತು ಬರೆದರೆ ರಂಗನಾಟಕ ಸೃಷ್ಟಿಯಾಗುವುದಿಲ್ಲ. ಬರೆದದ್ದನ್ನು ಹಲವರೆದುರು ಓದಬೇಕು, ಪ್ರಯೋಗ – ತಂತ್ರ ಮುಂತಾದ ದೃಷ್ಟಿಯಿಂದ ಚರ್ಚಿಸಬೇಕು. ಚರ್ಚೆಯಲ್ಲಿ ಸಿಕ್ಕ ಅಮೂಲ್ಯ ಸಲಹೆ ಸೂಚನೆಗಳಿಗೆ ಅನುಗುಣವಾಗಿ ತಿದ್ದಬೇಕು. "ಅರಿಷಿಣಗೋಡಿಯವರ ನಾಟಕಗಳ ಜನಪ್ರಿಯತೆಗೆ ಈ ರೀತಿಯ ಬರವಣಿಗೆಯೂ ಕಾರಣವಾಗಿರ ಬೇಕು. ಬಹಳಷ್ಟು ನಾಟಕಗಳನ್ನು ಇವರು ಬರೆದದ್ದು ಗದುಗಿನಲ್ಲಿಯೇ 'ಕಂಪನಿ ನಾಟಕಗಳ ದೃಷ್ಟಿಯಿಂದ ಗದಗು ನಟ,

ನಾಟಕಕಾರ, ನಿರ್ದೇಶಕರ ತವರುಮನೆ ಇದ್ದಂತೆ. ಬರೆಯಬೇಕೆಂದು ಯೋಚಿಸಿದ ನಾಟಕದ ಪ್ಲಾಟಿನ ಬಗ್ಗೆ, ಪಾತ್ರ – ಸನ್ನಿವೇಶ ಸಂಭಾಷಣೆಗಳ ಬಗ್ಗೆ ಚರ್ಚಿಸಲು ಅಲ್ಲಿ ಹಲವಾರು ವಿದ್ವಾಂಸರು ಸಿಗುತ್ತಾರೆ. ಅವರಿಂದ ತಿದ್ದಿಸಿಕೊಂಡು ತಾಲೀಮಿನ ಸಂದರ್ಭದಲ್ಲಿ ಇನ್ನಷ್ಟು ಶುದ್ಧೀಕರಣ ಗೊಳಿಸಿರುವುದರಿಂದ ನನ್ನ ನಾಟಕಗಳು ರಂಗದ ಮೇಲೆ ಯಶಸ್ಸನ್ನು ಪಡೆದವು" ಎನ್ನುವರು ಅರಷಿಣಗೋಡಿ.

## ನಾಟಕಗಳ ಸ್ವರೂಪ

ನಾಟಕಗಳ ಮೂಲಕ ಮನರಂಜನೆಯನ್ನು ಮಾರುವ ಕಂಪನಿಗಳು ತಮ್ಮ ಉತ್ಪಾದನೆಗಳಿಗೆ ಆಕರ್ಷಕವಾದ ಹೆಸರನ್ನಿಡುವುದೂ ಒಂದು ವ್ಯಾಪಾರೀ ತಂತ್ರವೇ. ಹೆಸರು ಕೇಳಿಯೇ ನಾಟಕ ನೋಡಬೇಕೆಂಬ ಕುತೂಹಲ ಪ್ರೇಕ್ಷಕರಲ್ಲಿ ಉಂಟಾಗಬೇಕು. 'ಕಣ್ಣಿದ್ದೂ ಕುರುಡ', 'ಇಲ್ಲಿಗೆ ಬಂತೋ ಸಂಗಯ್ಯ', 'ಬಸ್ ಕಂಡಕ್ಟರ್' ಮುಂತಾದವು.

ನಾಟಕದಲ್ಲಿ ಹನ್ನೆರಡು ಇಲ್ಲವೆ ಹದಿಮೂರು ಪ್ರವೇಶಗಳಿರುತ್ತವೆ. ಆರು ಪ್ರವೇಶಗಳ ನಂತರ ಮಧ್ಯಂತರ ವಿರಾಮ. ಈ ತಂತ್ರವು ನಾಟಕವನ್ನು ಪೂರ್ವಾರ್ಧ – ಉತ್ತರಾರ್ಧವಾಗಿ ವಿಭಜಿಸುತ್ತದೆ. ಪೂರ್ವಾರ್ಧದಲ್ಲಿ ಕತೆಯ ಪರಿಚಯ ಮತ್ತು ಬೆಳವಣಿಗೆ ಇದ್ದರೆ, ಉತ್ತರಾರ್ಧದಲ್ಲಿ ಘಟನೆಗಳ ಪರಿಣಾಮ ಮತ್ತು ಸಮಸ್ಯೆಗಳಿಗೆ ಪರಿಹಾರ ಹೇಳುವ ಸನ್ನಿವೇಶಗಳಿರುತ್ತವೆ.

ಐದಾರು ಪುರುಷ ಪಾತ್ರಗಳು, ನಾಲ್ಕೈದು ಸ್ತ್ರೀಪಾತ್ರಗಳಿರುತ್ತವೆ. ಗೌಡ – ಪುಡಾರಿ – ಅಧಿಕಾರಿಗಳು ಹೆಚ್ಚಾಗಿ ದುಷ್ಟರಾಗಿರುತ್ತಾರೆ. ಬಡವರು, ಕಷ್ಟ ಜೀವಿಗಳು ಒಳ್ಳೆಯವರಾಗಿರುತ್ತಾರೆ. ಶ್ರಮಜೀವಿಗಳಿಗೆ ಒಳಿತಾಗಬೇಕೆಂಬ ಕಳಕಳಿ ನಾಟಕದುದ್ದಕ್ಕೂ ಎದ್ದುಕಾಣುತ್ತದೆ. ಕೆಟ್ಟವರೂ ಬುದ್ಧಿ ಕಲಿತು ಒಳ್ಳೆಯವರಾಗಿ ಮಾರ್ಪಡುತ್ತಾರೆ.

ಪಾತ್ರಗಳ ಮಾತುಗಾರಿಕೆಯಲ್ಲಿ ಮಡಿವಂತಿಕೆ ಇಲ್ಲ. ಥಾಟಿ ಮಾತ್ರ ಅಡುಮಾತಿನದು ಹಳ್ಳಿಯಲ್ಲಿ ಹುಟ್ಟಿ, ನಗರದಲ್ಲಿ ಒಂದಿಷ್ಟು ಆಡುವ ಮಾತಿನ ಶೈಲಿ ಇವರದು. ಹೀಗಾಗಿ ಇವರ ಪಾತ್ರಗಳು ಇತ್ತ ಶುದ್ಧ ಶಿಷ್ಟವೂ ಅಲ್ಲದೆ ಅತ್ತ ಶುದ್ಧ ಆಡುಮಾತೂ ಅಲ್ಲದ ಮಿಶ್ರಭಾಷೆಯನ್ನಾಡುತ್ತಾರೆ. ಅದು ಆಡಲು ಸುಲಭ, ಕೇಳಲು ಹಿತವಾಗಿರುತ್ತದೆ.

ಕರುಣ, ಶೃಂಗಾರ ಸನ್ನಿವೇಶಗಳಲ್ಲಿ ಪಾತ್ರಗಳು ಭಾವತುಂಬಿ ಹಾಡುತ್ತಾರೆ. ಹಾಡುಗಳಲ್ಲಿ ಸಾಹಿತ್ಯಕ್ಕಿಂತ ಸಂಗೀತಕ್ಕೇ ಪ್ರಾಧಾನ್ಯ.

ಕಥೆಯ ವಸ್ತು ಸಾಮಾಜಿಕ, ಅದರಲ್ಲಿಯೂ ಕೌಟುಂಬಿಕ ಪರಿಸರದಿಂದ

ಆಯ್ದುಕೊಂಡ ಸಮಸ್ಯೆಗಳಿಗೇ ಆದ್ಯತೆ. ಆಧುನಿಕ ಶಿಕ್ಷಣ, ನಗರ ಜೀವನ, ಸ್ವಾರ್ಥ ರಾಜಕಾರಣ ಇವುಗಳ ಪರಿಣಾಮದಿಂದ ಗ್ರಾಮೀಣ ಭಾಗದ ಅವಿಭಕ್ತ ಕುಟುಂಬಗಳು ಎದುರಿಸುವ ಬಿಕ್ಕಟ್ಟುಗಳನ್ನು ನಾಟಕಗಳು ನಿರೂಪಿಸುತ್ತವೆ. ಅವಿಭಕ್ತ ಕುಟುಂಬಗಳು ವಿಭಕ್ತಗೊಳ್ಳುವುದನ್ನು ಸಾಂಪ್ರದಾಯಿಕ ಜೀವನಶೈಲಿ ಶಿಥಿಲಗೊಳ್ಳುವುದನ್ನು ಇವರ ಕೃತಿಗಳು ಇಷ್ಟಪಡುವುದಿಲ್ಲ.

ಗಂಭೀರ ಸಮಸ್ಯೆಗಳ ಸರಳ ನಿರೂಪಣೆ ಇರುತ್ತದೆ. ಅದಕ್ಕೆ ಸುಲಭ ಪರಿಹಾರವೂ ಸೂಚಿತವಾಗಿರುತ್ತದೆ. ಅಪರಾಧಿಗಳು ನಿರಾಪರಾಧಿಗಳಾಗಿ, ದುಷ್ಟರು ಪಶ್ಚಾತ್ತಾಪಪಟ್ಟು ಒಳ್ಳೆಯವರಾಗಿ ಪರಿವರ್ತರ್ನೆಯಾಗುತ್ತಾರೆ. ನಾಟಕದ ಕೊನೆಯಲ್ಲಿ ಪ್ರೇಕ್ಷಕರಿಗೆ ಸಂದೇಶವಿರುತ್ತದೆ. ನೀತಿ ಹೇಳುವ ರೀತಿ ನೋಡಿದರೆ ಇವರ ಕೃತಿಗಳು ಸನಾತನ ಸಂತನಂತೆ ಕಾಣುತ್ತವೆ.

ಕಡಿದುಹೋದ ಕುಟುಂಬ ಸಾಮರಸ್ಯ, ಸಾಮಾಜಿಕ ಸಾಮರಸ್ಯದೆಳೆಗಳನ್ನು ಮತ್ತೆ ಕೂಡಿಸುವ ಮತ್ತು ಸಾಮರಸ್ಯದ ವಾತಾವರಣವನ್ನು ಪುನಃ ಸೃಷ್ಟಿಸುವ ಪಾತ್ರವೊಂದು ಎಲ್ಲ ನಾಟಕಗಳಲ್ಲಿ ಕಾಣುತ್ತದೆ. ಇಂಥ ಪಾತ್ರ ನಾಟಕದ ಸೂತ್ರಧಾರನಂತಿರುತ್ತಾನೆ. 'ಬಸ್ ಕಂಡಕ್ಟರ್'ನಲ್ಲಿ ಪ್ರದೀಪ, 'ಕಣ್ಣಿದ್ದೂ ಕುರುಡ'ರಲ್ಲಿ ಶಿವರಾಜ, 'ಸೈನಿಕನ ಸಹೋದರಿ'ಯಲ್ಲಿ ಸಂಜೀವ – ಇವರೇ ಅಂಥ ಪಾತ್ರಗಳಾಗಿದ್ದಾರೆ.

ಅರಿಷಿಣಗೋಡಿಯವರ ನಾಟಕಗಳ ಬಗೆಗೆ ಮಾತನಾಡಿದರೆ ಕಂಪನಿ ನಾಟಕಗಳ ಸ್ವರೂಪದ ಬಗೆಗೆ ಮಾತನಾಡಿದಂತಾಗುತ್ತದೆ. ಅವರು ಮೊದಲು ಬರೆದದ್ದು ಕಂಪನಿಗಾಗಿ ಅಲ್ಲ. ಕಂಪನಿ ಕಟ್ಟಿದ ಮೇಲೆ ಕಂಪನಿ ನಾಟಕಗಳ ತಂತ್ರದಲ್ಲಿಯೇ ಬರೆದರು. ಅವರ ಬಹುತೇಕ ನಾಟಕಗಳ ಕೇಂದ್ರಸ್ಥಳವು ಕುಟುಂಬ ಇಲ್ಲವೆ ಗ್ರಾಮವಾಗಿರುತ್ತದೆ. ಕಂಪನಿಗಳ ಪ್ರೇಕ್ಷಕ ಬಳಗವಾದರೂ ಹಳ್ಳಿಯದಾಗಿರುತ್ತದೆ. ಅವರೆಲ್ಲ ಅವಿಭಕ್ತ ಕುಟುಂಬದ ಅಭಿಮಾನಿಗಳಿರುತ್ತಾರೆ. ಅವರು ನೋಡುವ ನಾಟಕಗಳು ಅವರೊಂದಿಗೆ ಭಾವನಾತ್ಮಕ ಸಂಬಂಧ ಹೊಂದುವಂತೆ ಬರೆಯುವುದು ಕಂಪನಿ ನಾಟಕಕಾರನ ವ್ಯಾವಹಾರಿಕ ಬದ್ಧತೆಯಾಗಿದೆ.

## ಹೆಣ್ಣು ಮಗಳು

ಸೋಮೇಶನ ಮಗಳು ಕಾಮಾಕ್ಷಿಯ ಕಾಮುಕತೆಯ ಪ್ರಸಂಗವನ್ನು ತೋರಿಸುವುದೇ ಈ ನಾಟಕದ ಉದ್ದೇಶ. ಚಿತಾಪುರ ಗ್ರಾಮದ ಪ್ರಭಾಕರನೊಂದಿಗೆ ಕಾಮಾಕ್ಷಿಯ ಮದುವೆಯಾಗಿರುತ್ತದೆ. ಗಂಡನಿಗೆ ಕ್ಷಯರೋಗ ಅಂಟಿದ್ದೇ ಅವರ ಸಂಸಾರದಲ್ಲಿ ವಿರಸದ ಹೊಗೆಯಾಡುತ್ತದೆ. ಗಂಡ ಅನಾರೋಗ್ಯದಿಂದ ಬಳಲುತ್ತಿದ್ದಾಗ, ಮಗ ಬೆಳೆದು ಶಾಲೆಗೆ ಹೋಗುತ್ತಿದ್ದಾಗ ಕಾಮಾಕ್ಷಿ ಪರಪುರುಷನ ಸಹವಾಸಕ್ಕೆ ಹಂಬಲಿಸುತ್ತಾಳೆ. ಆಗ ಅವಳಿಗೆ ಸಿಕ್ಕವನು ಗಂಡನ ಗೆಳೆಯ ವಿನಾಯಕ.

ಅವನ ಜೊತೆಗಿನ ಸರಸ-ಸಲ್ಲಾಪಕ್ಕೆ ಗಂಡನಿಂದ ತೊಂದರೆಯಾಗಬಾರದೆಂದು ಅವಳು ತವರುಮನೆ ಸೇರುವಳು. ಸೋಮೇಶರಿಗೆ ಮಗಳೆಂದರೆ ಪಂಚಪ್ರಾಣ; ಈ ದೌರ್ಬಲ್ಯವನ್ನು ಉಪಯೋಗಿಸಿಕೊಂಡು ಕಾಮಾಕ್ಷಿ ತವರಿನಲ್ಲಿ ಅಧಿಕಾರ ಚಲಾಯಿಸುವಳು. ಅಣ್ಣನ ಹೆಂಡತಿ ದಮಯಂತಿ ಸಂಪನ್ನಳಾಗಿದ್ದರೂ ಅವಳ ಮೇಲೆ ಇಲ್ಲಸಲ್ಲದ ಆರೋಪ ಹೊರಸಿ ಮನೆ ಬಿಡಿಸುವಳು.

ವಿನಾಯಕನದು ತೋರಿಕೆಯ ಪ್ರೀತಿ. ಅವನಿಗೆ ಅವಳ ಆಸ್ತಿ ಬೇಕು. ಅದಕ್ಕಾಗಿ ಪ್ರೀತಿಯ ನಾಟಕವಾಡುವನು. ಮದುವೆಗೆ ಸೋಮೇಶ ಅಡ್ಡಿಯಾಗಬಹುದೆಂದು ಹೇಳಿ ಅವನಿಗೆ ಮಗಳ ಮೂಲಕವೇ ತಂದೆಯನ್ನು ಕೊಲ್ಲಿಸುವನು. ಆಮೇಲೆ ಅವಳಲ್ಲಿದ್ದ ಸಂಪತ್ತನ್ನು ವಶಪಡಿಸಿಕೊಂಡು ಅವಳಿಗೂ ಚೂರಿ ಹಾಕುವನು. ತಾಯಿಯ ಕಳ್ಳ ವ್ಯವಹಾರಗಳನ್ನು ಗಮನಿಸಿದ್ದ ರವೀಂದ್ರನು ಗುಂಡು ಹಾರಿಸಿ ವಿನಾಯಕನನ್ನು ಮುಗಿಸುವನು. ಮನಸಿಜನ ಮಾಯೆ ವಿಧಿವಿಲಾಸದ ನೆರವು ಪಡೆದು ನರರನ್ನು ಕೊಂದು ಕೂಗುತ್ತದೆ. ಕಾಮದಾಹಕ್ಕೆ ಒಬ್ಬಳು, ಧನದಾಹಕ್ಕೆ ಒಬ್ಬನು – ಹೀಗೆ ಇಬ್ಬರು ಬಲಿಯಾಗುವರು. ಇಲ್ಲಿಗೆ ಕಥೆ ಮುಗಿಯುವುದಿಲ್ಲ. ಕೆಟ್ಟ ತಾಯಿಗೆ ಹುಟ್ಟಿದ ಮಗನ ಒಳ್ಳೆಯತನದ ಬಗ್ಗೆ ನಾಟಕದ ಕ್ರಿಯೆ ಮುಂದುವರಿಯುತ್ತದೆ.

ರವೀಂದ್ರ ತಂದೆಯ ಆಸ್ತಿಯನ್ನು ಶಿಕ್ಷಣ ಸಂಸ್ಥೆಗೆ ದಾನ ಕೊಡುವನು. ಅರಣ್ಯ ಇಲಾಖೆಯಲ್ಲಿ ನೌಕರಿ ಹಿಡಿಯುವನು. ಧನದತ್ತರ ಮಗಳು ಸುಮಿತ್ರಾಳನ್ನು ಪ್ರೀತಿಸಿ ಮದುವೆಯಾಗುವನು. ಕಾಮಾಕ್ಷಿಯ ಕಾರಸ್ಥಾನದಿಂದ ಅಗಲಿದ್ದ ಗಿರೀಶ, ದಮಯಂತಿ ಮತ್ತೆ ಒಂದಾಗುವರು. ಇದಿಷ್ಟು ನಾಟಕದ ಕಥೆ.

ನಾಟಕದ ಉತ್ತರಾರ್ಧದಲ್ಲಿ ಬರುವ ಧನದತ್ತ ಹಾಗೂ ಸುಮಿತ್ರಾ ಪಾತ್ರಗಳು ನಾಟಕದ ಕ್ರಿಯೆಯೊಂದಿಗೆ ಹೊಂದಿಕೊಳ್ಳುವುದಿಲ್ಲ. ಅವು ನಾಟಕವನ್ನು ಸುಖಾಂತಗೊಳಿಸಲು ಸೃಷ್ಟಿಸಿದ ಪಾತ್ರಗಳಾಗಿವೆ. ದಮಯಂತಿ ನಿಗರ್ತಿಕಳಾಗಿ ಕೆಲಸದವಳಾಗಿ ಧನದತ್ತರ ಮನೆಗೆ ಬರುವುದು; ಅವಳ ಗಂಡ ಗಿರೀಶ ಹಸಿವಿನಿಂದ ಬಳಲುತ್ತ ಅವರ ಮನೆಗೇ ಬರುವುದು; ರವೀಂದ್ರನು ಧನದತ್ತರ ಮಗಳನ್ನು ಪ್ರೀತಿಸಿ ಮದುವೆಯಾಗಲು ಸಿದ್ಧನಾಗುವುದು – ಈ ಸನ್ನಿವೇಶಗಳು ನಾಟಕದ ಸಹಜ ಓಟಕ್ಕೆ ಅಸಹಜತೆಯ ಸ್ಪರ್ಶ ಕೊಡುತ್ತವೆ. ಧಾರಾಳವಾಗಿ ಬಳಕೆಯಾಗುವ ಆಡುಮಾತಿನ ಲಾಲಿತ್ಯ ಕೇಳಲು ಹಿತ ಹಾಗೂ ಅರ್ಥಪೂರ್ಣ.

## ಬಸ್ ಕಂಡಕ್ಟರ್

ರಂಗಣ್ಣನವರಿಗೆ ಮೂರು ಜನ ಮಕ್ಕಳು. ಜಗದೀಶ, ಪ್ರಕಾಶ ಮತ್ತು ಶಾಂತಾ. ಬಡತನದ ಕುಟುಂಬ. ಎಸ್ಸೆಸೆಲ್ಸಿವರೆಗೆ ಓದಿದ ಹಿರಿಯ ಮಗ ಜಗದೀಶ

ಕಂಡಕ್ಟರ್ ನೌಕರಿ ಹಿಡಿದಿರುತ್ತಾನೆ. ನೌಕರಿಯಿಂದ ಬಂದ ಸಂಬಳದಲ್ಲಿ ಮನೆ ನಡೆಸಬೇಕು. ಜೊತೆಗೆ ಬೆಂಗಳೂರಿನಲ್ಲಿ ಎಂ.ಬಿ.ಬಿ.ಎಸ್. ಓದುತ್ತಿದ್ದ ತಮ್ಮ ಪ್ರಕಾಶನ ವೆಚ್ಚವನ್ನೂ ನಿಭಾಯಿಸಬೇಕು. ಎರಡನ್ನೂ ನೋಡಿಕೊಳ್ಳುವಾಗ ಕೆಲವೊಮ್ಮೆ ಸಾಲಕ್ಕೂ ಕೈ ಚಾಚುತ್ತಾನೆ. ತನ್ನ ಮದುವೆಯನ್ನೂ ಮುಂದೂಡುತ್ತಾನೆ. ಅವನಿಗಿರುವ ಸಮಾಧಾನವೆಂದರೆ ತಮ್ಮ ಡಾಕ್ಟರ್ ಆಗುತ್ತಾನೆ. ಅನಾರೋಗ್ಯದ ತಂದೆ, ಕುಂಟ ತಂಗಿ ಇವರ ಬಾಳಿಗೆ ತಮ್ಮನು ಬೆಳಕಾಗುತ್ತಾನೆಂಬ ಆಶಾಕಿರಣ ಅವನದು. ಜಗದೀಶ ಮತ್ತು ಅವನ ತಂದೆ – ತಂಗಿ ಪ್ರಕಾಶನ ಬಗ್ಗೆ ಏನೇನೋ ಕನಸು ಕಟ್ಟಿ ಎದುರು ನೋಡುತ್ತಿರುತ್ತಾರೆ. ಆದರೇನು ಅವರ ಲೆಕ್ಕಾಚಾರವೆಲ್ಲ ತಿರುವು ಮುರುವಾಗುತ್ತದೆ. ಪ್ರಕಾಶನು ಎಂ.ಬಿ.ಬಿ.ಎಸ್. ಮುಗಿಸಿ ಹಿರಿಯಣ್ಣನಿಗೆ ಹೇಳದೆ ಕೇಳದೆ ಬೆಂಗಳೂರಿನಲ್ಲಿದ್ದ ಶ್ರೀಮಂತ ಕನ್ಯೆ ಉಮಾಳೊಂದಿಗೆ ರಿಜಿಸ್ಟರ್ ಮದುವೆಯಾಗುತ್ತಾನೆ. ಮುಂದೊಂದು ದಿನ ಮಡದಿಯೊಂದಿಗೆ ಮನೆಗೆ ಬಂದಾಗ ತಂದೆಗೆ ಬೇಸರವಾಗುತ್ತದೆ. ಸೊಸೆಯಾಗಿ ಬಂದ ಉಮಾ ತನ್ನ ರೂಪ, ಸಿರಿವಂತಿಕೆಯ ದರ್ಪದಿಂದ ಮನೆಯಲ್ಲಿದ್ದ ಹಿರಿಯರ ಮೇಲೆ ಅಧಿಕಾರ ಚಲಾಯಿಸುತ್ತಾಳೆ. ಇದು ಮತ್ತಷ್ಟು ಅಸಹನೀಯವಾಗಿ – ಪ್ರಕಾಶನಿಗೆ ಕಲಿಸಿದ್ದೆ ಅಪರಾಧವಾಯಿತೆಂದು ತಂದೆ ಪಶ್ಚಾತ್ತಾಪಪಡುತ್ತಾರೆ.

ಉಮಾಳಿಗೆ ಹಳ್ಳಿಯಲ್ಲಿದ್ದ ಗಂಡನ ಮನೆ ಸ್ವಾತಂತ್ರ್ಯವಿಲ್ಲದ ಜೈಲಿನಂತೆ ಕಾಣುತ್ತದೆ. ಅದರಿಂದ ಬಿಡಿಸಿಕೊಂಡು ಬೇಗನೆ ಬೆಂಗಳೂರಿಗೆ ಹೋಗಲು ನಿರ್ಧರಿಸುತ್ತಾಳೆ. ಅವಳ ಮೋಹಕ್ಕೆ ಸಿಲುಕಿದ ಪ್ರಕಾಶನೂ ಅವಳನ್ನೇ ಹಿಂಬಾಲಿಸುತ್ತಾನೆ. ಇವರಿಬ್ಬರ ನಿರ್ಗಮನವು ರಂಗಣ್ಣನವರ ಸಂಸಾರದ ಮೇಲೆ ಕಠೋರ ಪರಿಣಾಮ ಬೀರುತ್ತದೆ. ಅವರ ಆರೋಗ್ಯ ಇನ್ನಷ್ಟು ಹದಗೆಡುತ್ತದೆ. ತಂದೆಯವರಿಗೆ ತಮ್ಮನಿಂದ ವೈದ್ಯಕೀಯ ಉಪಚಾರ ಕೊಡಿಸಬೇಕೆಂದು ಜಗದೀಶ ಬೆಂಗಳೂರಿಗೆ ಧಾವಿಸುತ್ತಾನೆ. ಆದರೆ ಪ್ರಕಾಶನು ಅಣ್ಣನ ಮನವಿಗೆ ಕಿವಿಗೊಡಲಿಲ್ಲ. ಊರಿಗೆ ಹೋಗಲು ಒಲ್ಲೆ ಎನ್ನುತ್ತಾನೆ. ಸಿಟ್ಟು ತಡೆಯದೆ ಜಗದೀಶನು – 'ಹುಟ್ಟಿದ ಮನೆ, ಹಡೆದಪ್ಪನ ಕರುಣೆ, ಬಂಧು ಬಳಗದವರ ಭಾವನೆ ಇವೆಲ್ಲವನ್ನೂ ಮರೆತು ಮಾಂಸ ತಿನ್ನುವ ಹೊಲೆಯನಾಗಿ ಬಿಟ್ಟೆಯ?' ಎಂದು ಕಿಡಿಕಿಡಿಯಾಗಿ ನುಡಿಯುತ್ತಾನೆ. ಅದಕ್ಕೆ ಪ್ರಕಾಶನಿಂದ ಸಿಕ್ಕ ಉತ್ತರ ಕಪಾಳಮೋಕ್ಷ. ನಿರುಪಾಯನಾದ ಜಗದೀಶ ಮನೆಗೆ ಹಿಂದಿರುಗುತ್ತಾನೆ. ಬೆಂಗಳೂರ ಬೀದಿಯಲ್ಲಿ ಬರುವಾಗ ಪ್ರಕಾಶನ ಸಹಪಾಠಿ ಪ್ರದೀಪ ಭೇಟಿಯಾಗುತ್ತಾನೆ. ಅವನು ಸರಕಾರಿ ಆಸ್ಪತ್ರೆಯ ಸರ್ಜನ್ ಆಗಿ – ಜಗದೀಶನಿರುವ ಊರಿಗೇ ಹೊರಟಿರುತ್ತಾನೆ. ಇವನ ಭೇಟಿಯಿಂದ ಕಥೆ ತಿರುವು ಪಡೆದುಕೊಳ್ಳುತ್ತದೆ.

ಪ್ರಕಾಶನ ವರ್ತನೆ ಕೇಳಿ ಪ್ರದೀಪನ ಮನಸ್ಸು ವ್ಯಗ್ರವಾಗುತ್ತದೆ. ಜಗದೀಶನ ಬಗ್ಗೆ ಅಂತಃಕರಣ ತುಂಬಿ ಬರುತ್ತದೆ. ಪ್ರಕಾಶನಿಂದ ಅವರ ಮನೆಗಾದ ಅನ್ಯಾಯವನ್ನು

ಸರಿಪಡಿಸಲು ಮುಂದಾಗುತ್ತಾನೆ. ಅವನ ಉಪಚಾರದಿಂದ ರಂಗಣ್ಣನವರ ಆರೋಗ್ಯ ಸುಧಾರಿಸುತ್ತದೆ. ಅವನು ನಡೆಸಿದ ಶಸ್ತ್ರಕ್ರಿಯೆಯಿಂದ ಶಾಂತಾಳ ಕಾಲು ನೆಟ್ಟಗಾಗುತ್ತದೆ. ಈ ಒಡನಾಟದಿಂದ ಬೆಳೆದ ಶಾಂತಾ ಮತ್ತು ಪ್ರದೀಪರ ಸ್ನೇಹ ಪ್ರೇಮಕ್ಕೆ ಪರಿವರ್ತನೆಯಾಗುತ್ತದೆ. ಅದು ಮದುವೆಯವರೆಗೆ ಬೆಳೆಯುತ್ತದೆ. ಪ್ರದೀಪನ ಪ್ರಯತ್ನ ಇಷ್ಟಕ್ಕೆ ನಿಲ್ಲುವುದಿಲ್ಲ. ಬಣ್ಣದ ಹೆಣ್ಣಿನ ಮೋಹಜಾಲಕ್ಕೆ ಸಿಕ್ಕ ಗೆಳೆಯನಿಗೆ ಬುದ್ಧಿ ಕಲಿಸಬೇಕೆಂದು ಷಡ್ಯಂತ್ರ ರಚಿಸುತ್ತಾನೆ ಪ್ರದೀಪ.

ಪ್ರಕಾಶನು – ಆಸ್ಪತ್ರೆಯಲ್ಲಿಯ ನರ್ಸುಗಳೊಂದಿಗೆ ಪ್ರೇಮ ಸಂಬಂಧ ಇಟ್ಟುಕೊಂಡಿದ್ದಾನೆಂದು ಪ್ರದೀಪ ಉಮಾಳಿಗೆ ಸುಳ್ಳು ಹೇಳುವನು. ಗಂಡನ ಮನಸ್ಸರಿಯದ ಅವಳು ಅದನ್ನು ನಿಜವೆಂದು ನಂಬುವಳು. ಅಲ್ಲದೆ ಪ್ರದೀಪನ ಸ್ನೇಹಕ್ಕೆ ಹಂಬಲಿಸುವಳು. ಅವನು ಪ್ರೀತಿಯ ನಾಟಕ ಮಾಡಿ ಅವಳಿಂದ ಆಸ್ತಿಯನ್ನೆಲ್ಲ ಬರೆಸಿಕೊಳ್ಳುವನು. ಹೀಗೆಯೇ ಕಥೆ ಬೆಳೆದು ಪ್ರಕಾಶನು ಉಮಾಳಿಂದ ವಂಚಿತನಾಗಿ ಊರು ಸೇರುವನು. ಉಮಾ ಪ್ರದೀಪನಿಂದ ವಂಚಿತಳಾಗಿ ಪಶ್ಚಾತ್ತಾಪಪಡುವಳು. "ನೀವು ಗುರುಹಿರಿಯರನ್ನು ಗೌರವಿಸದೆ ಇರುವುದರಿಂದ ಈ ರೀತಿಯಲ್ಲಿ ನಾಟಕ ಮಾಡಬೇಕಾಯಿತೆಂದು" ಪ್ರದೀಪ ಸತ್ಯ ಸಂಗತಿಯನ್ನು ಹೇಳುತ್ತಾನೆ. ತಪ್ಪಿನ ಅರಿವಾಗಿ ಪ್ರಕಾಶ ಉಮಾ ಪಶ್ಚಾತ್ತಾಪಪಡುವರು.

ಕಥೆಯ ಮುಖ್ಯಧಾರೆಗೆ ಖಾನಾವಳಿ ದೇವಣ್ಣನ ಉಪಕಥೆಯೊಂದು ಸೇರಿಕೊಂಡು ನಾಟಕಕ್ಕೆ ಹಾಸ್ಯದ ಸ್ಪರ್ಶ ಒದಗುತ್ತದೆ. ಮಗಳು ಚೆನ್ನಿಯನ್ನು ಪ್ರದೀಪ ಡಾಕ್ಟರರಿಗೆ ಕೊಟ್ಟು ಮದುವೆ ಮಾಡಿಕೊಡಬೇಕೆಂದು ದೇವಣ್ಣನ ಆಶೆ. ಆದರೆ ಖಾನಾವಳಿಯ ಗಿರಾಕಿ ರಾಜು ಕಂಡಕ್ಟರ್ ಚೆನ್ನಿಯ ಪತಿ ಮನಸ್ಸಿಟ್ಟು, ಅವಳನ್ನು ಒಲಿಸಿಕೊಳ್ಳುವಲ್ಲಿ ಯಶಸ್ವಿಯಾಗುವನು. ಕೊನೆಯ ಸನ್ನಿವೇಶದಲ್ಲಿ ಶಾಂತಾ – ಪ್ರದೀಪ ಮತ್ತು ಚೆನ್ನವ್ವ – ರಾಜು ಕಂಡಕ್ಟರ್ ಇವರ ಮದುವೆ ನೆರವೇರುವುದು. ಕೊನೆಯಲ್ಲಿ ಪ್ರದೀಪನು ಉಮಾ – ಪ್ರಕಾಶ ಇವರಿಗೆ ಹೇಳುವ ಮಾತು ನಾಟಕದ ಸಂದೇಶದಂತಿದೆ. 'ಹಿರಿಯರ ಅನುಗ್ರಹವಿಲ್ಲದೆ ರಿಜಿಸ್ಟರ್ ಮ್ಯಾರೇಜ್ ಮಾಡಿಕೊಂಡು ನೀವು ಇಷ್ಟೆಲ್ಲ ಪೇಚಾಡಬೇಕಾಯಿತು. ಗುರು – ಹಿರಿಯರ ಆಶೀರ್ವಾದ ಪಡೆದು ಭಾಗ್ಯವಂತರಾಗಿರಿ."

ಅರಿಷಿಣಗೋಡಿಯವರ ನಾಟಕಗಳಲ್ಲಿಯೇ ಇದು ಅತ್ಯಂತ ಜನಪ್ರಿಯವಾದ ಕೃತಿ. ಕಮತಗಿ ಕಂಪನಿ ಮಾತ್ರವಲ್ಲ, ಕರ್ನಾಟಕದ ಹಲವಾರು ನಾಟಕ ಕಂಪನಿಗಳು ಈ ನಾಟಕವನ್ನು ಪ್ರದರ್ಶಿಸಿವೆ. ಕಮತಗಿ ಕಂಪನಿ ನಾಡಿನ ಸೀಮೋಲ್ಲಂಘನ ಮಾಡದಿದ್ದರೂ ಕಂಪನಿಯ ಯಶಸ್ವಿ ನಾಟಕ, 'ಬಸ್ ಕಂಡಕ್ಟರ್' ಸಿಮೋಲ್ಲಂಘನ ಮಾಡಿದೆ. ಗದುಗಿನ ವೀರೇಶ್ವರ ನಾಟಕ ಕಂಪನಿಯವರು ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಇದನ್ನು ಆಡಿದ್ದಾರೆ. ಹೊರನಾಡ ಕನ್ನಡಿಗರು ಮುಂಬಯಿಯಲ್ಲಿ ಪ್ರಯೋಗಿಸಿದ್ದಾರೆ. ಕರ್ನಾಟಕದ ಹಳ್ಳಿಹಳ್ಳಿಗಳಲ್ಲೂ ಈ ನಾಟಕದ ಬೆಳಕು ಹರಡಿದೆ.

ಕರ್ನಾಟಕದ ನಾಟಕ ಅಕಾಡೆಮಿ ಬಿಜಾಪುರದಲ್ಲಿ ಹಮ್ಮಿಕೊಂಡಿದ್ದ ಶತಮಾನದ ರಂಗಸಂಭ್ರಮದಲ್ಲಿ (೨೩-೧೨-೧೯೯೯) ದಾವಣಗೆರೆಯ ವೃತ್ತಿರಂಗ ಕಲಾವಿದರ ಸಂಘದಿಂದ 'ಬಸ್ ಕಂಡಕ್ಟರ್' ಪ್ರಯೋಗವಾಯಿತು. ಅರಿಷಿಣಗೋಡಿಯವರ ಅಂದಾಜಿನಂತೆ 'ಬಸ್ ಕಂಡಕ್ಟರ್' ಹತ್ತು ಸಾವಿರಕ್ಕೂ ಹೆಚ್ಚು ಪ್ರಯೋಗಗಳನ್ನು ಕಂಡಿದೆ. 'ಖಾನಾವಳಿ ಚೆನ್ನಿ', 'ಬಣ್ಣದ ಹೆಣ್ಣು' ಹೆಸರುಗಳಿಂದಲೂ ಇದು ಪ್ರಯೋಗವಾಗುತ್ತದೆ.

ಕಂಡಕ್ಟರ್‌ನಾದ ಅಣ್ಣ ದುಡಿದು ತಮ್ಮನನ್ನು ಡಾಕ್ಟರ್ ಮಾಡುತ್ತಾನೆ. ಆದರೆ ಡಾಕ್ಟರ್‌ನಾದ ತಮ್ಮ ತನ್ನ ಅಣ್ಣ, ಅಪ್ಪ, ತಂಗಿಗಾಗಿ ಏನು ಮಾಡುತ್ತಾನೆ? – ಈ ಪ್ರಶ್ನೆಯು ಪ್ರೇಕ್ಷಕರ ಮನಸ್ಸಿನಲ್ಲಿ ಗಿರಿಕಿ ಹೊಡೆಯುತ್ತಿರುವಾಗ ಅವನಿಂದ ಯಾವ ನೆರವೂ ದೊರೆಯುವುದಿಲ್ಲ. ಅವನ ಅವಕೃಪೆಗೆ ಪಾತ್ರರಾಗಿ ಅನಾರೋಗ್ಯದ ಅಪ್ಪ, ಕುಂಟಿ ತಂಗಿ, ಅಸಹಾಯಕನಾದ ಅಣ್ಣ ಇವರೆಲ್ಲ ಪ್ರೇಕ್ಷಕರಿಂದ ಕರುಣೆಯ ಕಾಣಿಕೆ ಪಡೆಯುತ್ತಾರೆ. ಮನೆಯ ಮಗ ಪರಕೀಯನಾದ, ಪರಕೀಯ ವ್ಯಕ್ತಿ (ಪ್ರದೀಪ) ಮನೆಯವನಾಗಿ ಕುಟುಂಬದ ಸ್ವಾಸ್ಥ್ಯಕ್ಕೆ ಕಾರಣನಾದ. ದೇವಣ್ಣನ ಖಾನಾವಳಿ ಅಲ್ಲಿಗೆ ಬರುವ ಗಿರಾಕಿಗಳ ವರ್ತನೆ, ಚೆನ್ನಿಯ ವ್ಯವಹಾರಜ್ಞಾನ, ರಾಜುವಿನ ಪ್ರೇಮಸಲ್ಲಾಪ – ಇವೆಲ್ಲ ಗಂಭೀರ ಸನ್ನಿವೇಶಗಳ ಹಿಂದೆ ನಗೆಯ ಅಲೆಯಾಗಿ ತೇಲಿಬರುತ್ತವೆ. ಪ್ರೇಕ್ಷಕರನ್ನು ನಗಿಸಿ ರಂಜಿಸುತ್ತವೆ.

## ಸೈನಿಕನ ಸಹೋದರಿ

ಒಂದು ಸಾಮಾನ್ಯ ಹಳ್ಳಿಯಲ್ಲಿ ಈ ನಾಟಕದ ಕತೆ ತೆರೆದುಕೊಳ್ಳುತ್ತದೆ. ನಾಗೇಶರಾವ್ ಮತ್ತು ಲಿಂಗಣ್ಣಶೆಟ್ಟಿ ಊರಿನ ಗಣ್ಯವ್ಯಕ್ತಿಗಳೆನಿಸಿಕೊಂಡವರು. ನಾಗೇಶರಾವ್ ಶ್ರೀಮಂತ ಕುಳ, ಅಲ್ಲದೆ ಎಮ್ಮೆಲ್ಲೆಯ ಮಾವ. ಹೀಗಾಗಿ ಸಿರಿವಂತರಿಗಿರಬೇಕಾದ ದರ್ಪಗಳೆಲ್ಲವೂ ಅವನ ವ್ಯಕ್ತಿತ್ವದಲ್ಲಿ ಮನೆ ಮಾಡಿವೆ. ತನ್ನ ಮಗ ವಸಂತನಿಗೆ ಇಂಜಿನಿಯರಿಂಗ್ ಓದಿಸಲು ಬೆಂಗಳೂರಿಗೆ ಕಳಿಸಿರುತ್ತಾನೆ. ಆತನೋ ಆರಾರು ವರ್ಷ ಒಂದೇ ಕ್ಲಾಸಿನಲ್ಲಿ ಕುಳಿತು ಪಾಸಾಗಲು ಪರದಾಡುತ್ತಿರುತ್ತಾನೆ.

ನಾಗೇಶರಾಯನ ವ್ಯಕ್ತಿತ್ವಕ್ಕೆ ಸಮನಾದವನೆಂದರೆ ವ್ಯಾಪಾರಿ ಲಿಂಗಣ್ಣಶೆಟ್ಟಿ, ಶೆಟ್ಟಿ ಮಹಾಜಿಪುಣ – ಲಂಪಟಕೋರ, ತನ್ನ ಮಗಳು ಪದ್ಮಾಳನ್ನು ವಸಂತನಿಗೆ ಧಾರೆಯೆರೆದು ಕೊಟ್ಟು ನಾಗೇಶರಾಯನೊಂದಿಗೆ ಸಂಬಂಧ ಬೆಳೆಸಲು ಹೊಂಚು ಹಾಕಿರುತ್ತಾನೆ.

ಶೆಟ್ಟಿ ಮತ್ತು ನಾಗೇಶರಾಯರು ಕೂಡಿದರೆಂದರೆ ಸದಾ ಹಣ ಮಾಡುವ ವಿಚಾರಗಳಲ್ಲೇ ಮುಳುಗಿ ಗ್ರಾಮೋದ್ಧಾರದ ಹೆಸರಿನಲ್ಲಿ ಬೇರೆ ಯಾವುದಾದರೂ

ನೆವ ಮಾಡಿ ಚಂದಾ ಎತ್ತುತ್ತಿದ್ದರು. ಹಾಗೆ ಎತ್ತಿದ ಹಣವನ್ನು ತಮ್ಮ ಜೇಬಿಗಿಳಿಸಿಕೊಳ್ಳುತ್ತಿದ್ದರು. ಯಾರನ್ನೂ ಹಿಂದು ಮುಂದು ನೋಡುತ್ತಿರಲಿಲ್ಲ. ಬಡತನದಿಂದಲೂ ಕಾಯಿಲೆಯಿಂದಲೂ ನರಳುತ್ತಿದ್ದ ನಿವೃತ್ತ ಮಾಸ್ತರರಾದ ರಾಮಣ್ಣನವರ ಸ್ಥಿತಿಯನ್ನು ಗಮನಿಸದೆ ಅವರಲ್ಲೂ ಒತ್ತಾಯದಿಂದ ಚಂದಾಹಣ ಕೇಳುವರು.

ನಾಟಕದ ನಾಯಕ ಸುಭಾಷ್ ದೇಶಾಭಿಮಾನಿ, ರಾಮಣ್ಣ ಮಾಸ್ತರರ ಮಗ. ಡಿಪ್ಲೊಮಾ ಮುಗಿಸಿ ಪಿ.ಡಬ್ಲ್ಯೂಡಿ.ಯಲ್ಲಿ ನೌಕರನಾಗಿದ್ದ. ಅವನ ತಂಗಿ ಸಾವಿತ್ರಿಯು ಸಂಭಾವಿತೆ ಮತ್ತು ಗುಣವಂತಳು. ಇವಳೊಂದಿಗೆ ವಸಂತನ ಸಖ್ಯ. ರಜೆ ಕಳೆಯಲು ಬೆಂಗಳೂರಿನಿಂದ ಬಂದಿದ್ದ ವಸಂತ ಮತ್ತು ಸಾವಿತ್ರಿಯಲ್ಲಿ ಪ್ರೇಮ ಪಲ್ಲವಿಸಿತ್ತು. ಅದರಂತೆಯೇ ಲಿಂಗಣ್ಣ ಶೆಟ್ಟಿಯ ಮಗಳು ಪದ್ಮಾ ಮತ್ತು ಸುಭಾಸರಲ್ಲೂ ಒಳಗೊಳಗೇ ಒಡನಾಟ ಬೆಳೆದಿತ್ತು. ಸಮಾಜ-ರಾಷ್ಟ್ರ ಸೇವೆಯಲ್ಲಿ ತೊಡಗಿಸಿಕೊಂಡಿದ್ದ ಸುಭಾಷನನ್ನು ಪದ್ಮಾ ಒಳಗೊಳಗೇ ಪ್ರೀತಿಸುತ್ತಿದ್ದಳು.

ಈ ನಡುವೆ ಭಾರತ - ಚೀನಾ ಯುದ್ಧದ ಸನ್ನಿವೇಶ ಎದುರಾಗುತ್ತದೆ. ಆಗ ರಾಷ್ಟ್ರಭಕ್ತಿ ಪ್ರೇರಣೆಯಿಂದ ಸುಭಾಸ ಮನೆ ಬಿಟ್ಟು ಹೋಗಿ ಸೇನೆ ಸೇರುತ್ತಾನೆ. ವೃದ್ಧಾಪ್ಯದಲ್ಲಿ ತನ್ನನ್ನು ಬಿಟ್ಟು, ಹೋಗಿ ಸೇನೆ ಸೇರಿದ ಮಗನ ಮೇಲೆ ಇತ್ತ ಅವರ ಕುಟುಂಬದಲ್ಲಿ ಅನಾಹುತಗಳು ಸಂಭವಿಸುತ್ತವೆ. ವಸಂತ - ಸಾವಿತ್ರಿಯರು ಪರಸ್ಪರ ಪ್ರೀತಿಸುತ್ತಿದ್ದ ವಿಷಯ ಗೊತ್ತಾಗಿ ನಾಗೇಶರಾಯ ಮಗನನ್ನು ಬೆಂಗಳೂರಿಗಟ್ಟುತ್ತಾನೆ. ವಸಂತನ ಪ್ರೇಮ - ಸಲ್ಲಾಪದಲ್ಲಿ ಹೆಜ್ಜೆ ತಪ್ಪಿದ ಸಾವಿತ್ರಿ ಗರ್ಭಿಣಿಯಾಗುತ್ತಾಳೆ. ಮಗಳ ಈ ವಿಷಯ ತಿಳಿದು ರಾಮಣ್ಣರ ಸೂಕ್ಷ್ಮ ಜೀವ ಕೊನೆಯುಸಿರೆಳೆಯುತ್ತದೆ. ಸಾವಿತ್ರಿ ಅನಾಥಳಾಗಬೇಕಿತ್ತು, ಬೀದಿಗೆ ಬೀಳಬೇಕಿತ್ತು. ಆಗ ಆಪದ್ಬಾಂಧವನಾಗಿ ಕುರುಬರ ಸಂಜೀವ ನೆರವಾಗುತ್ತಾನೆ.

ಹಾಗೆ ನೆರವಾದ ಸಂಜೀವನೇ ಸಾವಿತ್ರಿಯ ಬಸಿರಿಗೆ ಕಾರಣ ಎಂದು ನಾಗೇಶರಾಯ ಮತ್ತು ಲಿಂಗಣ್ಣರು ಸುಳ್ಳು ಸುದ್ದಿ ಹಬ್ಬಿಸುತ್ತಾರೆ. ಹಲ್ಕಟತನ ಮಾಡುತ್ತಿದ್ದವರ ಹಿಂದೆ ಬಿದ್ದು ಚಾಟಿಯೇಟಿನ ಮಾತುಗಳಿಂದ ಪೀಡಿಸುತ್ತಿದ್ದ ಸಂಜೀವ ನಡೆ - ನುಡಿಯಲ್ಲಿ ನೇರ, ಆಸ್ತಿ ಸಾಕಷ್ಟಿದ್ದರೂ ಕಾಯಕವನ್ನು ನಂಬಿದವ. ಕೀಳೆಂದು ಬಗೆಯದೆ ಹಮಾಲಿ ಕೆಲಸವನ್ನು ಮಾಡುತ್ತಿದ್ದ. ಜೊತೆಗೆ ಕುರಿಗಳನ್ನೂ ಸಾಕಿದ್ದ, ಚಂದ್ರಿ ದಿಟ್ಟೆ. ಅವಳ ತಾಯಿ ಅವಳನ್ನು ದೇವದಾಸಿ ಎಂದು ಬಿಡುವಾಗ ಮನೆ ಬಿಟ್ಟು ಬಂದು ಕೋಳಿ ವ್ಯಾಪಾರ ಮಾಡುತ್ತಿದ್ದಳು. ಇವಳ ಮೇಲೆ ಲಿಂಗಣ್ಣಶೆಟ್ಟಿಯ ಕಾಮದ ಕಣ್ಣು ಬಿದ್ದಿರುತ್ತದೆ. ಶೆಟ್ಟಿಯ ಈ ದೌರ್ಬಲ್ಯವನ್ನು ಉಪಯೋಗಿಸಿಕೊಂಡು ಸಂಜೀವ - ಚಂದ್ರಿ ಅವನಿಂದ ದುಡ್ಡು ಪಡೆದುಕೊಂಡು ಗರ್ಭಿಣಿ ಸಾವಿತ್ರಿಯೊಂದಿಗೆ ಊರು ಬಿಟ್ಟು ಬೆಂಗಳೂರು ಸೇರುತ್ತಾರೆ.

ಈ ನಡುವೆ ಪದ್ಮಾ ಮತ್ತು ವಸಂತರ ಮದುವೆಯೂ ನಿಶ್ಚಯವಾಗಿರುತ್ತದೆ.

ಬೆಂಗಳೂರಿಗೆ ಬಂದ ಸಂಜೀವ ಗಂಡಾಗುಂಡಿ ಮಾಡಿ ವಸಂತನನ್ನು ಪತ್ತೆ ಹಚ್ಚುತ್ತಾನೆ. ಸಾವಿತ್ರಿಯನ್ನು ಕಂಡ ಲಂಪಟ ವಸಂತ ಅವಳನ್ನು ತಿರಸ್ಕರಿಸುವನು. ಸಂಜೀವನ ಹಾದರಕ್ಕೆ ಬಸುರಿಯಾಗಿರುವಿಯೆಂದು ಆಪಾದಿಸಿ ಹೋಗುತ್ತಾನೆ. ಸಾವಿತ್ರಿ ತತ್ತರಿಸಿ ದಿಗ್ಭ್ರಮೆಗೊಳ್ಳುತ್ತಾಳೆ.

ಇನ್ನೇನು ಮದುವೆ ಮಂಟಪದಲ್ಲಿ ವಸಂತ ಪದ್ಮಾಳಿಗೆ ತಾಳಿ ಕಟ್ಟಬೇಕೆನ್ನುವಾಗಲೇ ಸಂಜೀವ, ಸುಭಾಷ, ಸಾವಿತ್ರಿಯರು ಮಗುವಿನೊಂದಿಗೆ ಮಂಟಪಕ್ಕೆ ಬರುತ್ತಾರೆ. ಮದುವೆ ನಿಲ್ಲಿಸಲು ಕೋರ್ಟಿನಿಂದ ತಡೆಯಾಜ್ಞೆ ತಂದಿರುತ್ತಾರೆ. ಆ ಆಜ್ಞೆಯಲ್ಲಿ ಮಗುವಿನ ಮತ್ತು ವಸಂತನ ರಕ್ತ ಪರೀಕ್ಷೆಯಾಗಬೇಕು ಎಂದಿರುತ್ತದೆ.

ಕೊನೆಗೆ ವಸಂತನು ಸಾವಿತ್ರಿಯನ್ನು ಮದುವೆ ಮಾಡಿಕೊಳ್ಳಲು ಒಪ್ಪುತ್ತಾನೆ. ಪದ್ಮಾ ಮತ್ತು ಸುಭಾಷರ ಪ್ರೇಮದ ಕೊನೆ ಸ್ಪಷ್ಟವಾಗುವುದಿಲ್ಲ. ಸಂಜೀವ – ಚಂದ್ರಿಯರ ಬುದ್ಧಿವಂತಿಕೆಯಿಂದ ನಾಗೇಶ – ಲಿಂಗಣ್ಣ, ಸಜ್ಜನರಾಗುತ್ತಾರೆ. ಕೊನೆಯಲ್ಲಿ ಸಂಜೀವ – ಚಂದ್ರಿಯರೂ ಲಗ್ನವಾಗುವರು.

ಮೊನ್ನಿನ ಕಾರ್ಗಿಲ್ ಯುದ್ಧದಲ್ಲಿ ಸೈನಿಕರ ಸಾಹಸ ಬಲಿದಾನಗಳಿಗೆ ವ್ಯಾಪಕ ಪ್ರತಿಕ್ರಿಯೆ ದೊರೆಯಿತು. ಬಲಿಯಾದ ಸೈನಿಕರ ಕುಟುಂಬಗಳಿಗಾಗಿ ಆರ್ಥಿಕ ನೆರವೂ ಧಾರಾಳವಾಗಿ ಹರಿದು ಬಂತು. ಇದು ಇತ್ತೀಚಿನ ಒಳ್ಳೆಯ ಬೆಳವಣಿಗೆ. ಇದು ಸಾಧ್ಯವಾದದ್ದು ಸಮೂಹ ಮಾಧ್ಯಮಗಳ ಪ್ರಯತ್ನ ಮತ್ತು ಪ್ರಚಾರದಿಂದ. ಇದಕ್ಕಿಂತ ಮೊದಲು ಹಲವು ಯುದ್ಧಗಳಾಗಿವೆ. ಆಗ ಸೈನಿಕರ ಬಗೆಗೆ ಅಷ್ಟೊಂದು ಅಭಿಮಾನ ವ್ಯಕ್ತವಾಗಿದ್ದು ಇಲ್ಲ. ಅವರ ಕುಟುಂಬಗಳಿಗೂ ಭದ್ರತೆ ಇರಲಿಲ್ಲ. ಈ ಹಿನ್ನೆಲೆ ಕಾರಣವಾಗಿ, ಭಾರತ – ಚೀನಾ ಯುದ್ಧದ ಸಂದಭರ್ದಲ್ಲಿ 'ಸೈನಿಕನ ಸಹೋದರಿ' ನಾಟಕ ರೂಪ ತಾಳಿತು. ಈ ನಾಟಕ ಪ್ರಕಟಿಸುವ ಸಂದೇಶಗಳು ಹೀಗಿವೆ:

ಸೈನಿಕನ ಕುಟುಂಬದ ಹೊಣೆ ಅವನ ಸಮಾಜದ್ದು. ಶ್ರೀಮಂತನಾದರೂ ಮೈಮುರಿದು ದುಡಿಯಬೇಕು. ದೇವದಾಸಿ ಅನಿಷ್ಟ ಪದ್ಧತಿ ನಿಲ್ಲಬೇಕು. ಜಾತಿಗಿಂತ ಪ್ರೀತಿ ದೊಡ್ಡದು. ದುಷ್ಟರಿಗೆ ಪಾಠ ಕಲಿಸಿ ಅವರನ್ನು ಸುಧಾರಿಸಬೇಕು. ಇಷ್ಟು ವಿಷಯಗಳನ್ನು 'ಸೈನಿಕನ ಸಹೋದರಿ' ನಾಟಕ ಚೆನ್ನಾಗಿ ಬಿಂಬಿಸುತ್ತದೆ. ಕುರಿ ಕಾಯುವ ಕುರುಬ ಪೆದ್ದನಂತಿರುವನು ಎಂಬುದು ರೂಢಿಮಾತು. ಈ ನಾಟಕಕಾರ ಈ ಮಾತಿಗೆ ತದ್ವಿರುದ್ಧವಾಗಿ ಕುರುಬರು ಚತುರಮತಿಗಳಾಗಿರುವರೆಂಬುದನ್ನು ಸಂಜೀವನ ಪಾತ್ರದ ಮೂಲಕ ತೋರಿಸಿದ್ದಾರೆ.

ಸಂಜೀವ – ಚಂದ್ರಿ ಇವರಿಬ್ಬರೂ 'ನಾ' ಎಂದು ಮೆರೆಯುವ ರಾಜಕಾರಣಿ ಪುಡಾರಿಗಳ ಬೆನ್ನುಬಿದ್ದು ಪಶ್ಚಾತ್ತಾಪ ಪಡುವಂತೆ ಮಾಡುತ್ತಾರೆ. ಪ್ರದರ್ಶನ ಸಂದರ್ಭದಲ್ಲಿ ರಂಗದ ಮೇಲೆ ಈ ಪಾತ್ರಗಳು ಪ್ರೇಕ್ಷಕರನ್ನು ಮನದುಂಬಿ ರಂಜಿಸಿದ್ದು ಮರೆಯಲಾಗದು.

# ಕಣ್ಣಿದ್ದೂ ಕುರುಡ

ಸಿರಿಯೂರಿನ ಎರಡು ಕುಟುಂಬಗಳ ಮಧ್ಯೆ ನಡೆಯುವ ಕಥೆ ಈ ನಾಟಕದ ವಸ್ತು. ನಾಗೇಗೌಡ ಆಗರ್ಭ ಶ್ರೀಮಂತ. ಸಕ್ಕರೆ ಕಾರ್ಖಾನೆಯ ಮಾಲಿಕ. ಅವನಿಗೆ ಮಂಜುಳಾ ಎಂಬ ಮಗಳಿರುವಳು. ಅವಳ ಮದುವೆ ಪ್ರತಿಷ್ಠಿತ ಮನೆತನದ ವರನೊಂದಿಗೆ ನೆರವೇರಿಸುವುದೆಂದು ಗೌಡ ತಾಳೆ ಹಾಕಿರುವನು. ಆದರೆ ಅವಳಿಗೆ ಸಿನಿಮಾ ನಟಿಯಾಗಬೇಕು – ಸ್ವತಂತ್ರ ನೌಕರಿ ಮಾಡಿ ಸ್ವಚ್ಛಂದವಾಗಿರಬೇಕೆಂಬ ಆಶೆ. ಅಂಥ ಆಶೆಗಳಿಗೆ ನೀರೆರೆದು ಬೆಳೆಸಿದವನು ಆನಂದ ಎಂಬ ತರುಣ. ಅವರಿಬ್ಬರ ಪ್ರೇಮ ಸಂಬಂಧದ ಬಗ್ಗೆ ಗುಸುಗುಸು ಸುದ್ದಿಗಳು ಹಬ್ಬಿರುತ್ತವೆ. ಇದರಿಂದ ಒಳ್ಳೆಯ ವರಗಳು ಗೌಡನ ಮನೆಯ ಸಮೀಪ ಸುಳಿಯುವುದಿಲ್ಲ. ಪರಿಸ್ಥಿತಿಯನ್ನು ಅರಿತ ಗೌಡನ ಕಣ್ಣು ಕಾರ್ಖಾನೆಯಲ್ಲಿಯ ಇಂಜಿನಿಯರ ಹುದ್ದೆಯ ಮೇಲೆ ಹಾಯುತ್ತದೆ. ಶೇಖರನೆಂಬ ಬಿ.ಇ. ಪದವೀಧರನನ್ನು ಆ ಹುದ್ದೆಗೆ ನೇಮಿಸಿ ಮಂಜುಳೆಯನ್ನು ಅವನಿಗೆ ಕೊಡಲು ನಿರ್ಧರಿಸುತ್ತಾನೆ. ವಿಚಿತ್ರವೆಂದರೆ ಶೇಖರನಿಗೆ ಬಾಲ್ಯವಿವಾಹವಾಗಿರುತ್ತದೆ.

ಶೇಖರ ಬಾಲ್ಯದಲ್ಲಿಯೇ ತಾಯಿ ತಂದೆಗಳನ್ನು ಕಳೆದುಕೊಂಡಿರುತ್ತಾನೆ. ಅವನನ್ನು ಬೆಳೆಸಿ ಓದಿಸಿದವರು ಅಕ್ಕ ಮತ್ತು ಮಾವ. ಅಕ್ಕ ಅನಾರೋಗ್ಯದಿಂದ ಬಳಲುತ್ತಿದ್ದಾಗ, ತಮ್ಮನಿಗೆ ಮಗಳನ್ನು ಕೊಟ್ಟು ಮದುವೆ ಮಾಡುವಳು. ಆಗ ಶೇಖರ–ಗಿರಿಜಾ ಇಬ್ಬರೂ ಸಣ್ಣವರು. ಮದುವೆಯ ನಂತರ ಶೇಖರನ ಓದು ಮುಂದುವರಿಯುವುದು. ಬಿ.ಇ. ಪದವೀಧರನಾಗುವನು. ನಗರದಲ್ಲಿ ಓದಿದ ಪರಿಣಾಮ ಅವನ ಕಣ್ಣೆದುರು ಬಣ್ಣ ಬಣ್ಣದ ಕನಸುಗಳು ಕುಣಿಯುವವು. ಬಾಲ್ಯದಲ್ಲಾದ ಮದುವೆಯ ಬಗ್ಗೆ ಪಶ್ಚಾತ್ತಾಪಪಡುವನು. ಅಕ್ಕನ ಮಗಳು ಅಶಿಕ್ಷಿತಳಾಗಿ ಫ್ಯಾಶನ್ ಅರಿಯದ ಹಳ್ಳಿಯ ಗುಗ್ಗು ಆಗಿ ಕಾಣುವಳು. ಅವಳನ್ನು ಬಿಟ್ಟು ಆಧುನಿಕ ವೇಷಭೂಷಣದ ಕನ್ಯೆಯೊಂದಿಗೆ ಮದುವೆಯಾಗಲು ಮುಂದಾಗುವನು. ಶೇಖರನ ವರ್ತನೆಯು ಗಿರಿಜೆಗೆ ಅವಳ ಕುರುಡು ತಂದೆ ಶ್ರೀನಿವಾಸರಾಯರಿಗೆ ದೊಡ್ಡ ಸಮಸ್ಯೆಯಾಗುವುದು. ಹೈಸ್ಕೂಲ್ ಶಿಕ್ಷಕ ಶಿವರಾಜನ ಮೂಲಕ ಅವರು ಎಷ್ಟು ಒತ್ತಾಯಪಡಿಸಿದರೂ ಗಿರಿಜೆಯನ್ನು ಸ್ವೀಕರಿಸಲು ಅವನು ಒಪ್ಪುವುದಿಲ್ಲ. ಅಷ್ಟೇ ಅಲ್ಲ, ಒಂದು ದಿನ ಅವಳ ಕೊರಳಲ್ಲಿಯ ತಾಳಿಯನ್ನೇ ಕಿತ್ತುಕೊಂಡು ಹೋಗುವನು.

ಸಾವುಕಾರ ನಾಗೇಗೌಡನ ಸಂಚಿನಂತೆ ಶೇಖರನ ಮದುವೆ ಮಂಜುಳೆಯೊಂದಿಗೆ ನಿಶ್ಚಯವಾಗುವುದು. ಮಂಜುಳಾ ಆನಂದದೊಂದಿಗೆ ಸ್ವಚ್ಛಂದವಾಗಿ ತಿರುಗುವುದನ್ನು ಕಣ್ಣಾರೆ ನೋಡಿದರೂ ಶೇಖರನಿಗೆ ಅವಳ ಬಗ್ಗೆ ಸಂಶಯ ಬರುವುದಿಲ್ಲ. ಶಿವರಾಜ ಎಚ್ಚರಿಸಿದರೂ ಅವನ ಕಣ್ಣು ತೆರೆಯುವುದಿಲ್ಲ. ಮದುವೆಯ ಮುಹೂರ್ತ ಸನ್ನಿಹಿತವಾಗುವುದು. ಶೇಖರ ತಾಳಿ ಕಟ್ಟಲು ಸಿದ್ಧನಾಗಿರುತ್ತಾನೆ. ಅಷ್ಟೊತ್ತಿಗೆ

ಮಂಜುಳಾ ಎಚ್ಚರ ತಪ್ಪಿ ಬೀಳುವಳು. ಕೂಡಲೇ ವೈದ್ಯರಿಂದ ಉಪಚಾರ ನಡೆದು ಅವಳು ಗರ್ಭಿಣಿಯಾಗಿರುವ ಸುದ್ದಿ ಗೊತ್ತಾಗುವುದು. ಅದನ್ನು ಕೇಳಿದ ತಕ್ಷಣ ಕಣ್ಣಿದ್ದೂ ಕುರುಡನಾಗಿದ್ದ ಶೇಖರನ ಕಣ್ಣು ತೆರೆಯುವುದು. ಕಲಿಯದಿದ್ದರೂ ಗಿರಿಜೆ ಸದ್ಗುಣಸಂಪನ್ನಳಾಗಿ ಫ್ಯಾಶನ್ ಮಾಡದಿದ್ದರೂ ಶೀಲಸಂಪನ್ನಳಾಗಿ ತೋರುವಳು. ಕೊನೆಗೆ ಅವಳೊಂದಿಗೇ ಕೂಡಿ ಬಾಳಲು ತೀರ್ಮಾನಿಸುವನು.

ಹೆಚ್ಚು ಕಲಿತಿರುವ ಶೇಖರ ಆಡಂಬರಕ್ಕೆ ಒಲಿದರೆ ಅಷ್ಟು ಕಲಿಯದ ಗೋಪಿ ಸರಳ ಜೀವನ ಬಯಸುತ್ತಾನೆ. ಗೋಪಿಯ ತಂದೆ ವರದಕ್ಷಿಣೆಗಾಗಿ ಹಪಹಪಿಸುತ್ತಾನೆ. ಮಗನಿಗೆ ವರದಕ್ಷಿಣೆ ಬೇಡ, ಮದುವೆ ಬೇಕು. ಮನೆಯಲ್ಲಿ ಪಾತ್ರೆ ತೊಳೆಯುವ ಮಲ್ಲವ್ವನ ಮಗಳು ಗೌರಿಯ ಮೇಲೆ ಅವನ ಮನಸ್ಸು, ಅವಳ ಕೈಹಿಡಿಯುವ ಹಟದಿಂದ ಶಿವರಾಜನಿಗೆ ಸಲಹೆ ಕೇಳುತ್ತಾನೆ. ದುಡ್ಡಿನ ಗರಬಡಿದ ತಂದೆಗೆ ದುಡ್ಡಿನ ಮೂಲಕವೇ ಪಾಠ ಕಲಿಸಲು ಅವನು ಉಪಾಯ ಸೂಚಿಸುತ್ತಾನೆ. ಅದರಂತೆ ಮನೆಯಲ್ಲಿಯ ಸಂಪತ್ತನ್ನು ಕಳವು ಮಾಡಿ. ಗೌರಿಯ ಜೊತೆಗೆ ಮದುವೆ ಮಾಡುವುದಾದರೆ ಆ ಸಂಪತ್ತು ಮರಳಿ ಸಿಗುವುದೆಂದು ತಿಳಿಸುವನು. ಶಂಕ್ರಪ್ಪ ಒಪ್ಪುವುದು ಅನಿವಾರ್ಯವಾಗುತ್ತದೆ. ಹೀಗೆ ಗೋಪಿ – ಗೌರಿ ದಂಪತಿಗಳಾಗುವರು. ಕೊನೆಯಲ್ಲಿ ಒಡೆದುಹೋಗಿದ್ದ ಶೇಖರ – ಗಿರಿಜೆಯ ದಾಂಪತ್ಯ ಮತ್ತೆ ಒಂದುಗೂಡುವುದು. ಶಿವರಾಜನು ಗೋಪಿಗೆ ಹೇಳುವ ಮಾತು ನಾಟಕದ ಸಂದೇಶವಾಗಿದೆ.

"ಹೆಚ್ಚಿನ ಹಣದಾಸೆಯಿಂದಾಗಲೀ, ಹುಚ್ಚು ರೂಪದ ಹೆಣ್ಣಿನಾಸೆಯಿಂದಾಗಲಿ 'ಕಣ್ಣಿದ್ದೂ ಕುರುಡ'ರಾಗಿ ಸಮಾಜವನ್ನು ಅಧೋಗತಿಗೆ ಇಳಿಸುವ ಅಂಥರಿಗೆ ಇಂದಿನ ದೃಶ್ಯ ಮಾನವರಿಗೆ ಯಾವಾಗಲೂ ತಮ್ಮ ಸಂಸಾರವನ್ನು ಸರಾಗವಾಗಿ ಸಾಗಿಸಿಕೊಂಡು ಹೋಗುವ ಸದ್ಬುದ್ಧಿಯನ್ನು ದೇವರು ಅವರಿಗೆ ದಯಪಾಲಿಸಲೆಂದು ಆ ಹುಚ್ಚೇಶ್ವರನಲ್ಲಿ ನಾವೆಲ್ಲರೂ ಬೇಡಿಕೊಳ್ಳೋಣ."

ಹೀಗೆ ಈ ನಾಟಕ ಹೆಣ್ಣಿಗೆ ಚಾರಿತ್ರ್ಯವೇ ಭೂಷಣವೆಂದು ವರದಕ್ಷಿಣೆ ಪಡೆಯುವುದು ಪುರುಷ ಲಕ್ಷಣವಲ್ಲವೆಂದು ಚೆನ್ನಾಗಿ ಬಿಂಬಿಸುತ್ತದೆ. ಹಾಸ್ಯ, ಶೃಂಗಾರ, ಕರುಣರಸಗಳ ಸಮನ್ವಯ ನಾಟಕದ ಪ್ಲಸ್ ಪಾಯಿಂಟ್, ವಚನ – ಕೀರ್ತನೆಗಳ ನುಡಿಗಳನ್ನು ಸಾಂದರ್ಭಿಕವಾಗಿ ಬಳಸಿಕೊಂಡಿರುವ ಗೋಪಿ – ಶಂಕ್ರಪ್ಪನವರ ಸಂಭಾಷಣೆಗೆ ವಿಶೇಷ ಆಕರ್ಷಣೆ ಇದೆ.

## ಇಲ್ಲಿಗೆ ಬಂತೋ ಸಂಗಯ್ಯಾ!

ಮಂಗಳಾಪುರದ ಸಾಧಾರಣ ಶ್ರೀಮಂತ ವ್ಯಕ್ತಿ ಶ್ಯಾಮಣ್ಣ. ಇವರ ಮರುಮದುವೆಯ ಹೆಂಡತಿ ಲಕ್ಷ್ಮಕ್ಕ. ಲಲಿತಾ ಇವರ ಮಗಳು. ಗೀತಾ

ಮೊದಲ ಮಡದಿಯ ಮಗಳು. ತಾಯಿಯನ್ನು ಕಳೆದುಕೊಂಡ ಗೀತಾಳ ಬಗ್ಗೆ ಶ್ಯಾಮಣ್ಣನವರಿಗೆ ವಿಶೇಷ ಕಾಳಜಿ. ಅವಳಾದರೂ ರೂಪ-ಗುಣದಲ್ಲಿ ಸಂಪನ್ನಳು. ಮಲತಾಯಿಯ ಕಷ್ಟದಿಂದ ಅವಳನ್ನು ದೂರವಿಡಲು ನಿರ್ಧರಿಸಿದ ಶ್ಯಾಮಣ್ಣನವರು ಶೇಷಾಪುರದಲ್ಲಿದ್ದ ಗೆಳೆಯ ಡಾಕ್ಟರ್ ರಂಗಣ್ಣನ ಮನೆಯಲ್ಲಿಡುತ್ತಾರೆ. ಅಲ್ಲಿ ಅವಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಸಿಗುತ್ತದೆ. ಕಾಲೇಜಿನಲ್ಲಿ ಓದುತ್ತಿದ್ದಾಗ ವಿಶ್ವನಾಥನೆಂಬ ಚಿತ್ರಕಲಾವಿದನ ಪರಿಚಯವಾಗುವುದು. ಇಬ್ಬರ ಆಸಕ್ತಿ-ಅಭಿರುಚಿಗಳು ಒಂದೇ ಆಗಿರಲು ಪರಸ್ಪರ ಆಕರ್ಷಿತರಾಗುತ್ತಾರೆ.

ಗೀತಾಳ ಮಲತಾಯಿ ಲಕ್ಷಕ್ಕನಿಗೋ ಮೋಹನ ಎಂಬ ತಮ್ಮನಿರುತ್ತಾನೆ. ಅವನು ಮಹಾ ವ್ಯಸನಿ. ಕುಡಿತದ ಚಟಕ್ಕೆ ಬೆನ್ನುಹತ್ತಿ ಇದ್ದ ಆಸ್ತಿಯನ್ನೆಲ್ಲ ಕಳೆದುಕೊಂಡಿರುತ್ತಾನೆ. ಹಣ ಬೇಕಾಗದಾಗಲೆಲ್ಲ ಅಕ್ಕನಿಗೆ ಪೀಡಿಸುವನು. ಇಂಥ ತಮ್ಮನೊಂದಿಗೆ ಗೀತಾಳ ಮದುವೆ ಮಾಡಬೇಕೆಂಬ ಸಂಚು ಮಲತಾಯಿಯದು. ಅವಳು ದಿನವೂ ಗಂಡನಿಗೆ ದುಂಬಾಲು ಬಿದ್ದು ಮದುವೆಗೆ ಒಪ್ಪಿಸುವಳು. ಮನಸ್ಸು ಒಪ್ಪದಿದ್ದರೂ ತಂದೆ-ತಾಯಿಗಳ ಒತ್ತಾಯಕ್ಕೆ ಮಣಿದು ಗೀತಾ ಮೋಹನನ ಜೊತೆಗೆ ಹಸೆಮಣೆ ಏರುವಳು.

ಗೀತಾ ಮೋಹನರ ಮದುವೆಯಾದ ಪರಿಣಾಮ ಇಬ್ಬರೂ ಭಗ್ನಪ್ರೇಮಿಗಳಾಗುವರು. ಗೀತಾಳನ್ನು ಪ್ರೀತಿಸುತ್ತಿದ್ದ ವಿಶ್ವನಾಥ ಮತ್ತು ಮೋಹನನನ್ನು ಪ್ರೀತಿಸುತ್ತಿದ್ದ ರೂಪಾ ಇವರ ಬಾಳಿನ ದಾರಿಯೇ ಬದಲಾಗುವುದು. ವಿಶ್ವನಾಥನು ಗೀತಾಳ ಮೇಲಿಟ್ಟ ಪ್ರೇಮವನ್ನು ಕಲೆಯ ಕಡೆಗೆ ಹೊರಳಿಸಿ ಅದರಲ್ಲಿ ಸಿದ್ಧಿ ಪಡೆಯುವನು. ಹೆಸರಾಂತ ಕಲಾವಿದನಾಗುವನು. ಇದಕ್ಕೆ ವಿರುದ್ಧವಾದ ಗತಿ ರೂಪಾಳದು. ಇವಳು ಡಾಕ್ಟರ್ ರಂಗಣ್ಣನವರ ಮಗಳು ಸ್ವೇಚ್ಛೆ ವರ್ತನೆಯಿಂದಾಗಿ ತಂದೆಯ ಆಶ್ರಯವನ್ನು ಕಳೆದುಕೊಂಡಿರುತ್ತಾಳೆ. ಮೋಹನನು ಮದುವೆಯಾಗುವೆನೆಂದು ನಂಬಿಸಿ ಗೀತಾಳ ಕೈ ಹಿಡಿದಾಗ ಇವಳಿಗೆ ಬೀದಿಯೇ ಗತಿಯಾಗುವುದು. ಅವನ ಪ್ರೀತಿಯ ನಾಟಕಕ್ಕೆ ತಲೆ ಕೆಡಿಸಿಕೊಂಡು ಹುಚ್ಚಿಯಾಗಿ ಅಲೆಯುವಳು. ಕೊನೆಗೆ ಬಾವಿಗೆ ಬಿದ್ದು ಸಾವನ್ನಪ್ಪುವಳು.

ಮಲಮಗಳನ್ನು ಕುಡುಕ ತಮ್ಮನಿಗೆ ಕೊಟ್ಟು ಮದುವೆ ಮಾಡಿದ ಲಕ್ಷಕ್ಕ ತನ್ನ ಮಗಳು ಲಲಿತಾಳಿಗಾಗಿ ಶ್ರೀಮಂತ ವರವನ್ನು ಹುಡುಕಲು ಓಡಾಡುವಳು. ಆದರೆ ಆರೆಂಪಿ ಡಾಕ್ಟರ್ ಶಂಕರನು ಲಲಿತಾಳನ್ನು ಒಲಿಸಿಕೊಂಡಿರುವನು. ಮಂಗಳಾಪುರದ ದೇಶಪಾಂಡೆ ಡಾಕ್ಟರರ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದ ಶಂಕರ ಮುತ್ಸದ್ದಿ ತರುಣ. ಲಲಿತಾಳನ್ನು ಪ್ರೀತಿಸಿ ಅವಳಿಂದ ಮನೆಯಲ್ಲಿದ್ದ ಹಣ ಬಂಗಾರವನ್ನು ಗುಪ್ತವಾಗಿ ಪಡೆಯುವನು. ಒಂದು ದಿನ ಅವಳನ್ನು ಕರೆದುಕೊಂಡು ಬೇರೆ ಊರಿಗೆ ಹೋಗಿ ರಿಜಿಸ್ಟರ್ ಮದುವೆಯಾಗುವನು. ಹೆಂಡತಿ ತಂದ ಸಂಪತ್ತಿನಿಂದ ಒಳ್ಳೆಯ ದವಾಖಾನೆ ತೆರೆದು ಸುಖ-ಸಂಸಾರ ಹೂಡುವನು. ಶಂಕರನ ಕಮಾಯಿ ಲಲಿತಾಳ

ತಾಯಿಗೆ ಗೊತ್ತಾಗುವುದು. ಅವರಿಬ್ಬರ ಸಂಬಂಧ ಮುರಿಯಲು ಅವಳು ಏನೆಲ್ಲ ಪ್ರಯತ್ನ ಮಾಡುವಳು. ತಮ್ಮ ಮೋಹನನ ಮೂಲಕ ಛೂ ಬಿಡುವಳು. ಶಂಕರನ ಬುದ್ಧಿವಂತಿಕೆಯ ಎದುರು ಅವಳ ತಂತ್ರಗಳೆಲ್ಲ ವ್ಯರ್ಥವಾಗುವವು. ಹಣವೂ ಇಲ್ಲದೆ, ಮಗಳೂ ಇಲ್ಲದೆ ಅಸಹಾಯಕಳಾಗಿ ನಿಂತು ಅವಳು ಕೊನೆಗೆ ಶಂಕರನನ್ನೇ ಆಶ್ರಯಿಸುವಳು. ಶಂಕರ ಮತ್ತು ಡಾಕ್ಟರ್ ರಂಗಣ್ಣನವರ ಪ್ರಯತ್ನದಿಂದ ಗೀತಾ ಗಂಡ ಕುಡಿಯುವ ಚಟ ಬಿಡುವನು. ಕೊನೆಯಲ್ಲಿ ಡಾಕ್ಟರ್ ರಂಗಣ್ಣ ಗೀತಾಳಿಗೆ ಹೇಳುವ ಮಾತು ನಾಟಕದ ಸಂದೇಶವಾಗಿದೆ. 'ಮಾನವ ಜೀವನದಲ್ಲಿ ಸಾವು ಬದುಕು ಮುಖ್ಯವಲ್ಲ. ನಮ್ಮ ಬದುಕಿನ ಸಾರ್ಥಕತೆ ಮುಖ್ಯವಾದದ್ದು. ಸ್ವಂತದ ಸಾವು – ನೋವುಗಳನ್ನು ಮರೆತು ಪರರ ದುಃಖ – ದುಮ್ಮಾನಗಳಲ್ಲಿ ಭಾಗಿಯಾಗಿ ದುಡಿಯುವುದೇ ಮಾನವ ಧರ್ಮದ ತಿರುಳು.'

ಮಲತಾಯಿಯ ದುಷ್ಟತನ, ಮಲಮಗಳ ಕಷ್ಟ, ಕುಡಿತದ ದುಷ್ಪರಿಣಾಮದ ಸನ್ನಿವೇಶಗಳು ಗಮನಾರ್ಹವಾಗಿವೆ. ಅದಕ್ಕೆ ಪೂರಕವಾಗಿ ಚಿತ್ರಕಲಾವಿದನ ಬದುಕು, ವೈದ್ಯವೃತ್ತಿಯ ವಿವರಗಳೂ ಧಾರಾಳವಾಗಿ ಸೇರಿಕೊಂಡಿವೆ. ಆಡಂಬರದ ಜೀವನ ಶೈಲಿ, ಆಕರ್ಷಕ ವೇಷ – ಭೂಷಣಗಳ ವಿಡಂಬನೆ ಮನರಂಜನೆಯ ಶಕ್ತಿ ಪಡೆದುಕೊಂಡಿದೆ.

## ಇತರ ನಾಟಕಗಳು

ಮಿಲ್ಲಿನ ಕಾರ್ಮಿಕರು ಮತ್ತು ಒಡೆಯರ ನಡುವಿನ ಸಮಸ್ಯೆಯನ್ನಾಧರಿಸಿದ ನಾಟಕ 'ಗರೀಬಿ ಹಟಾವೋ' ಕಾರ್ಮಿಕರ ನಾಯಕ ರಾಜೇಶನು ಸಂಘ ಕಟ್ಟಿಕೊಂಡು ಕಾರ್ಮಿಕರ ಕಲ್ಯಾಣಕ್ಕಾಗಿ ಹೋರಾಟಕ್ಕಿಳಿಯುವನು. ಮಿಲ್ಲಿನ ಒಡೆಯ ವೀರನಗೌಡ ಕಾರ್ಮಿಕರಲ್ಲಿ ಒಡಕು ಹುಟ್ಟಿಸಿ ರಾಜೇಶನ ಸಂಘಟನೆಯನ್ನು ಮುರಿಯುವನು. ಅವನ ಕುತಂತ್ರ ಅಷ್ಟಕ್ಕೇ ನಿಲ್ಲದೆ ರಾಜೇಶನ ತಂಗಿ ಶೋಭಾಳ ಮೇಲೆ ಬಲಾತ್ಕಾರ ಮಾಡಿ ಸೇಡು ತೀರಿಸಿಕೊಳ್ಳಲು ಹೊಂಚು ಹಾಕುವನು. ಈ ವಿಷಯ ವೀರನಗೌಡನ ತಂಗಿಗೆ ಗೊತ್ತಾಗುವು,ದು. ಅಣ್ಣನ ದೌರ್ಜನ್ಯದಿಂದ ಶೋಭಾಳ ಬಾಳು ಹಾಳಾಗಬಾರದೆಂದು ಅವಳು ವೇಷ ಧರಿಸಿ ಅಣ್ಣನಿಗೆ ಬುದ್ಧಿ ಕಲಿಸುವಳು. ಶೋಭಾಳ ಜೊತೆಗೇ ಅವನ ಮದುವೆ ನೆರವೇರುವಂತೆ ಮಾಡುವಳು. ಕೊನೆಯಲ್ಲಿ ತಾನು ರಾಜೇಶನ ಕೈ ಹಿಡಿದು ಅವನನ್ನು ಮಿಲ್ಲಿನ ಮ್ಯಾನೇಜರ್ ಹುದ್ದೆಗೆ ನೇಮಿಸುವಳು.

ಗೌರಿಯ ವೀರಗಾಥೆಯಂತಿದೆ 'ಗಂಡೆದೆಯ ಗೌರಿ' ನಾಟಕ. ಗೌರಿ ಬಡವಿ, ನೋಡಲು ಸುಂದರಿ. ಅವಳ ಮೇಲೆ ಪೋಲಿ ಹುಡುಗರ ಕಣ್ಣು. ಊರ ಶ್ರೀಮಂತರ ಮಗ ಅವಳ ಹಿಂದೆ ಬೀಳಲು ಉಗ್ರವಾಗಿ ಪ್ರತಿಭಟಿಸುವಳು. ಅವಮಾನಿತನಾದ

ಶ್ರೀಮಂತರ ಹುಡುಗ ಬಲಾತ್ಕಾರಕ್ಕಾಗಿ ಸಂಧಿ ಕಾಯುವನು. ಅವನ ತಂಗಿ ಗೌರಿಯ ಗೆಳತಿ. ಅವಳು ಅಣ್ಣನ ಯೋಜನೆಗಳನ್ನು ಗೌರಿಗೆ ತಿಳಿಸಿ ಎರಡು – ಮೂರು ಸಲ ಕಷ್ಟದಿಂದ ಪಾರು ಮಾಡುತ್ತಾಳೆ. ಕೊನೆಯಲ್ಲಿ ಅಣ್ಣನ ಮನವೊಲಿಸಿ ಗೌರಿಯ ಜೊತೆಗೇ ಅವನ ಮದುವೆ ನೆರವೇರಲು ಕಾರಣಳಾಗುತ್ತಾಳೆ.

ಸಿ.ಐ.ಡಿ. ಅಧಿಕಾರಿಯಾಗಿದ್ದ ತರುಣಿ ನಟಿಯ ವೇಷ ಧರಿಸಿ ಊರೊಳಗಿನ ಮುಖಂಡರ ಜಾತಕವನ್ನು ಜಾಲಾಡುವ ಕಥೆ 'ನಕಲಿ ಸಂಪನ್ನರು' ನಾಟಕದಲ್ಲಿ. ಶೆಟ್ಟಿ, ಸಾಹುಕಾರರು ಒಳ್ಳೆಯ ಮುಖವಾಡ ಹಾಕಿ ಸಾಮಾನ್ಯರ ಬದುಕಿಗೆ ಕಂಟಕರಾಗಿರುವರು. ನಟಿ ರಹಸ್ಯವಾಗಿ ಅವರ ಅಪರಾಧಗಳನ್ನು ಪತ್ತೆ ಹಚ್ಚಿ ಅವರಿಗೆಲ್ಲ ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲಿಸುವಳು. ಈ ನಾಟಕದ ಮತ್ತೊಂದು ರೂಪದಂತಿದೆ. 'ಅಪ್ರತಿಮ ಅಳಿಯ' ಅರ್ಥಾರ್ತ್ 'ಬಡವರೂ ನಗಬೇಕು' ಸಿ.ಐ.ಡಿ. ಅಧಿಕಾರಿಯಾಗಿದ್ದವನು ಸಿನಿಮಾ ನಟನ ವೇಷ ಹಾಕುವನು. ಸಿನಿಮಾ ಮಾಡುವ ಹುಚ್ಚಿದ್ದವರಿಗೆ ಆಮಿಷವೊಡ್ಡುವನು. ಅದೇ ವೇಷದಲ್ಲಿ ಓಸಿ ಆಡುವ, ಕಾಳಸಂತೆ ಮಾಡುವ ಜನರನ್ನು ಹಿಡಿದು ಶಿಕ್ಷೆಗೆ ಗುರಿ ಮಾಡುವನು. ಇದಿಷ್ಟು ನಾಟಕದ ಸ್ಥೂಲ ಕಥೆ.

ಅರಿಷಿಣಗೋಡಿಯವರ ನಾಟಕಗಳಲ್ಲಿ ದುಃಖಾಂತ ಕಡಿಮೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಪಶ್ಚಾತ್ತಾಪದ ಮೂಲಕ ಅವರು ಒಳ್ಳೆಯವರಾಗಿ ಒಳ್ಳೆಯ ಬದುಕಿಗೆ ತಿರುಗಬೇಕೆಂಬುದೇ ನಾಟಕಕಾರರ ಆಶಯ. "ದುಷ್ಟರನ್ನು ಕೊಲೆ ಮಾಡಿ ಒಳ್ಳೆಯವನು ಜೇಲಿಗೆ ಹೋಗುವುದು ನನ್ನ ದೃಷ್ಟಿಯಲ್ಲಿ ಸರಿಯಲ್ಲ. ಕೊಲ್ಲುವುದರಿಂದ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ದುಷ್ಟರು ಸುಧಾರಿಸಿಕೊಂಡು ಜನರ ಮಧ್ಯದಲ್ಲಿಯೇ ಇದ್ದರೆ ಅವರನ್ನು ನೋಡಿ ಉಳಿದವರೂ ತಮ್ಮ ಬಾಳನ್ನು ತಿದ್ದಿಕೊಳ್ಳಬಹುದು" ಎನ್ನುವರು ಅರಿಷಿಣಗೋಡಿ. ಹಾಗಾದರೆ ನಾಟಕಗಳಿಂದ ಸಮಾಜ ಸುಧಾರಣೆಯಾಗುವುದೇ? ಎಂದು ಕೇಳಿದರೆ ಅದಕ್ಕೆ ಅವರ ವಿವರಣೆ ಹೀಗಿದೆ. "ನಾಟಕಗಳಿಂದ ಸಮಾಜ ಸುಧಾರಿಸುತ್ತದೆಂದು ಹೇಳುವುದು ಕಷ್ಟ. ಆಗುತ್ತದೆಂದು ಹೇಳುವುದು ಹುಸಿ ಅಹಂಕಾರವಾಗುತ್ತದೆ. ನಾಟಕಗಳನ್ನಾಡುವುದು ನಮ್ಮ ವೃತ್ತಿ. ಅದರಿಂದ ಸಮಾಜಕ್ಕೆ ಯತ್ಕಿಂಚಿತ್ ಸಹಾಯವಾದರೆ ನಮ್ಮಷ್ಟು ಸುದೈವಿಗಳು ಯಾರಿದ್ದಾರೆ?"

## ಸಂಭಾಷಣೆ

ಯಾವುದೇ ಕಲಾಕೃತಿಯು ಜನಪರ ಅಂಶಗಳನ್ನು ಒಳಗೊಂಡಷ್ಟೂ ಅದು ಜನಪ್ರಿಯವಾಗಲು ಸಾಧ್ಯ. ಜನಪರ ಅಂಶಗಳಿಂದಾಗಿಯೇ ಕಂಪನಿ ನಾಟಕಗಳನ್ನು ಜನಪ್ರಿಯ ಸಾಹಿತ್ಯವೆಂದು ಕರೆಯುತ್ತೇವೆ. ಅವುಗಳಲ್ಲಿ ಕಥೆ, ಪಾತ್ರ, ಭಾಷೆ ಎಲ್ಲವೂ

ಜನರ ಜೀವನದಿಂದಲೇ ಎದ್ದು ಬಂದವುಗಳಾಗಿರುತ್ತವೆ. ಅರಿಷಿಣಗೋಡಿಯವರ ನಾಟಕಗಳಾದರೂ ಈ ಮಾತಿಗೆ ಹೊರತಾಗಿಲ್ಲ. ಕುಟುಂಬ ಪರಿಸರದ ಕಥೆಗಳು, ಸಮಕಾಲೀನ ಸಮಸ್ಯೆಗಳು, ಆಡುನುಡಿಯ ಸೊಗಡು, ಹಾಸ್ಯಕ್ಕೆ ಪ್ರಾಧಾನ್ಯತೆ, ಮಧುರ ಹಾಡುಗಳು ಈ ವಿಶೇಷತೆಗಳಿಂದ ಅವರ ಕೃತಿಗಳಿಗೆ ರಂಗಮೌಲ್ಯ ಪ್ರಾಪ್ತವಾಗಿದೆ. 'ಬಸ್ ಕಂಡಕ್ಟರ್' ನಾಟಕದ ಒಂದು ಸನ್ನಿವೇಶ. ಖಾನಾವಳಿಯ ಯಜಮಾನ ದೇವಣ್ಣನ ಮಗಳು ಕಾಯಿಪಲ್ಲೆ ಖರೀದಿಸಿಕೊಂಡು ಬಂದಿರುವಳು. ಆಗ ತಂದೆ ಮಗಳ ನಡುವೆ ನಡೆದ ಸಂವಾದ ಹೀಗಿದೆ:

ಚೆನ್ನವ್ವ – ಯಪ್ಪಾ ಇವತ್ತು ಕಾಯಿಪಲ್ಲೆ ಧಾರಣಿ ಭಾಳ ತುಟ್ಟಿ ಆಗೈತಿ. ನೀ ಕೊಟ್ಟ ಮೂರು ರೂಪಾಯಿ ಸಾಲಲೇ ಇಲ್ಲ ನೋಡು.

ದೇವಣ್ಣ – ಮೂರು ರೂಪಾಯಿ ಮುಗಿಸಿದೆವ್ವ? ಏನೇನ ತಂದೆವ್ವ?

ಚೆನ್ನವ್ವ – ಆರಾಣೆ ಉಳ್ಳಗಡ್ಡಿ, ಬಾರಾ ಆಣೇದ ಬಟಾಟಿ, ಒಂದುವರಿ ರೂಪಾಯಿ ಸವತಿಕಾಯಿ, ಮೂರಾಣೆ ಹಸೇಕಾಯಿ, ಒಂದಾಣೆ ಕೊತಂಬ್ರಿ, ಮುಗಿತು. ೧೦–೧೨ ಪೈಸಾ ಉಳದಾವು.

ದೇವಣ್ಣ – ಉಳದ್ವೋ ಇಲ್ಲೋ ಛಲೋ ಆತ ಬಿಡು. ಎಲ್ಲೆವ್ವಾ ಕಾಯಿಪಲ್ಯ ಎಂಥಾದೈತಿ? (ಚೀಲದಲ್ಲಿ ಕೈ ಹಾಕಿ ನೋಡಿ) ಬೇ, ಚೆನ್ನವ್ವ ನೀ ಯಾಕೆ ಹೊಕ್ಕಿಯವ್ವಾ ಬಜಾರಕೆ? ಎಂಥಾ ಕಾಯಿಪಲ್ಯ ಖರೀದಿ ಮಾಡಬೇಕೂ ಅನೂದ ಗೊತ್ತ ಇಲ್ಲ ನಿನಗ.

ಚೆನ್ನವ್ವ – ಯಾಕಪ್ಪಾ ಛಲೋ ಇಲ್ಲೇನು?

ದೇವಣ್ಣ – ಛಲೋ ಐತವ್ವಾ, ಛಲೋ ಐತಿ, ಈ ಕಾಯಿಪಲ್ಯ ಛಲೋ ಐತಂತನೆ ನಾ ಕೊಟ್ಟ ಮೂರು ರೂಪಾಯಿ ನಿನಗೆ ಎದಕ್ಕೂ ಸಾಲಿಲ್ಲ. ಅಲ್ಲವೇ ಇಂಥಾ ಛಲೋ ಕಾಯಿಪಲ್ಲೆ ಕೊಂಡು ಹಾಕಿದರ ನಾವು ಹ್ಯಾಂಗವ್ವಾ ಖಾನಾವಳಿಯವರು ಬದಕೂದು? ಮುಂಜಾಲೆದ್ದ ಕೂಡಲೇ ನಾವು ಕಾಯಿಪಲ್ಲೆ ಖರೀದಿ ಎಂದೂ ಮಾಡಬಾರದವ್ವ, ಅವರು ರಾತ್ರಿ ಅಂಗಡೀ ಕೀಳೋ ಹೊತ್ತಿಗ ಹೋಗಬೇಕು ಅಂದ್ರ...

ಚೆನ್ನವ್ವ – ಅಂದ್ರ ಆವಾಗ ಅಗ್ಗ ಕೊಡತಾರೇನಪ್ಪಾ?

ದೇವಣ್ಣ – ಹ್ಹೂ ಮತ್ತೆ? ಕೊಡದೇನು ಮಾಡತಾರ? ಮ್ಯಾಲ ಮ್ಯಾಲ ಛಲೋ ಇದ್ದದ್ದು ಮಾರಿರತೈತಿ. ಉಳಿದ ಸೆಕೆಂಡ್ ಕ್ಲಾಸ್ ಕಾಯಿಪಲ್ಲೇಕ ನಾವು ಗುತಗಿ ಹಾಯಬೇಕು. ಅಂದ್ರ ಮೂರು ರೂಪಾಯಿದಾಗ ಮೂರು ದಿವ್ಸ ಆಗುವಷ್ಟು ಪಲ್ಲೇ ಬರತಾವಬೇ. ತಿಳಿಯೂದಿಲ್ಲ ನಿನಗ. ಒಟ್ಟ ಖಾನಾವಳಿ ದಂಧೇ ಮಾಡಾಕ ಬರ್ಲಿಲ್ಲ ನಿನಗ. ಬಾರೀಕಾಲಾ ಹೇಳಿದರೂ...

ಖಾನಾವಳಿ ನಡೆಸುವವರ ಗುಟ್ಟಿನ ಮಾತುಗಳು ತಂದೆ – ಮಗಳ ಸಂವಾದದಲ್ಲಿ ಸಹಜವಾಗಿ ಮೂಡಿಬಂದಿವೆ. ಖಾನಾವಳಿಗೆ ಗಿರಾಕಿಗಳು ಕಡಿಮೆಯಾಗಲು ಕಾರಣವೇನೆಂದು ಕಂಡಕ್ಟರ್ ರಾಜು ಹೇಳುವುದು ಹೀಗೆ:

ರಾಜು – ನೋಡ್ರಿ, ನಿಮ್ಮ ಖಾನಾವಳಿ ಗಿರಾಕಿ ಕಡಿಮೆ ಆಗಕ ಒಂದ ಕಾರಣ ಐತಿ. ಉತ್ತಮ ಅಡಿಗಿ ಮಾಡಿ, ಒಳ್ಳೇ ಅಚ್ಚುಕಟ್ಟಾದ ವ್ಯವಸ್ಥಾ ಇಟ್ರೆ, ಯಾಕ ಬರೂದಿಲ್ರಿ ಗಿರಾಕಿ? ಒಂದ ಸ್ವಚ್ಛಂದ ಅಡಗೀ ಮಾಡಸ್ತೀರಾ, ಛಲೋ ಕಾಯಿಪಲ್ಲೆ ತರ್ತೀರಾ? ರಾತ್ರಿ ಅಂಗಡಿ ಕೀಳೂ ಹೊತ್ತಿಗೆ ಹೋಗಿ, ಮಾರಿ ಉಳದ ಕೊಳಕು ಕಾಯಿಪಲ್ಲೇಕ ಗುತಗೀ ಹಾಯ್ತಿರಿ. ಆದ್ರೂ ಆಗ್ಲಿ ಅಂತ ಉಳದ ಬಂದ್ರ ಉಣ್ಣಾಕ ನೀಡೂ ಮಂದೆರ ಸಿಸ್ತ ಅದಾರ? ಚಂದ ಅದಾರ? ಎಲ್ಲೋ ಬ್ಯಾನಿಹಾದ ಎಡ್ಡ ಗಂಡಗೋಸಿ ಹುಡುಗರ್ನ ತಂದು ನೀಡಾಕ ಹಚ್ಚಶೀರಿ. ಅಂದಮ್ಯಾಲ ಹ್ಯಾಂಗ ಬರಬೇಕು ಉಣ್ಣೂ ಗಿರಾಕಿ? ನೋಡ್ರಿ ದೇವಣ್ಣವರ, ನೀವೇನ ತಿಳಕೋರಿ, ನಿಮ್ಮ ಮಗಳ್ನ ನೀವು ಎಂದ ಉಣ್ಣಾಕ ನೀಡೂದ ಬಿಡಿಸಿದಿರಿ... ಅಂದ ನಿಮ್ಮ ವ್ಯಾಪಾರ ಮಂದೀ ಹಿಡಿದಬಿಟ್ಟಿತು.

ಮಾತಿನ ಧಾಟಿ, ಪದಗಳ ಪ್ರಯೋಗದಲ್ಲಿ ಆಡುಮಾತಿನ ಸಹಜ ಸೌಂದರ್ಯವಿದೆ. ಕೆಲವು ಕಡೆಗೆ ಶಿಷ್ಟ ಮತ್ತು ಆಡುಮಾತನ್ನು ಹದವಾಗಿ ಬೆರಸುತ್ತಾರೆ. ಉಚ್ಚಾರಕ್ಕೆ ಕ್ಲಿಷ್ಟವೆನಿಸುವಂತಿಲ್ಲ. 'ಕಣ್ಣಿದ್ದೂ ಕುರುಡ' ನಾಟಕದಲ್ಲಿಯ ಸನ್ನಿವೇಶ. ತಂದೆಗೆ ವರದಕ್ಷಿಣೆಯ ಹುಚ್ಚು, ಮಗನಿಗೆ ಮದುವೆಯ ಹುಚ್ಚು. ತಂದೆ ಮದುವೆಯನ್ನು ಮುಂದೂಡುತ್ತಲೇ ಇದ್ದಾನೆ. ಅದರಿಂದ ಬೇಸರಾಗಿ ಮಗ ದಾಸನಾಗಿದ್ದಾನೆ. ಅವರಿಬ್ಬರ ಮಾತುಕತೆ:

ಶಂಕ್ರಪ್ಪ – ಯಾವೂರಪಾ ನಿಂದು ದಾಸಯ್ಯ? ಸರಿ. ದಾರಿ ಬಿಟ್ಟು ನಿಂದ್ರು ಆ ಕಡೆ. ಏನರ ಒಂದು ಶುಭ ಕೆಲ್ಸದ ಮ್ಯಾಗ ಹೊಂಟಾಗ ಇಂಥ ದರಿದ್ರರ ಭೆಟ್ಟಿ ಆಕ್ಕಾರ ನಮಗ. ಮೂರ್ತಕ್ಕ ಮುಂದಾಗಿ! ಸರದ ನಿಂದ್ರೊ ದಾರಿ ಬಿಟ್ಟು.

ಗೋಪಿ – ಎಲ್ಲಿಂದ ಬಂದೆ? ಎಲ್ಲಿಗೆ ಪಯಣ? ಇನ್ನು ನಿನಗೆಷ್ಟು ಆಯುಷ್ಯ ಹೇಳು ಮಗನೇ!

ಶಂಕ್ರಪ್ಪ – (ಗಾಬರಿಯಿಂದ) ಮಗನೇ! (ಅವನೆಡೆಗೆ ನೋಡುವನು).

ಗೋಪಿ – (ಥಟ್ಟನೆ ಮುಖ ಮೇಲೆ ಮಾಡಿ) ಶ್ರೀಹರಿ ಪುರಂದರ ವಿಠಲಾ ಶ್ರೀಹರಿ ಪುರಂದರ ವಿಠಲಾ...

ಶಂಕ್ರಪ್ಪ – ಅಬಬಾ, ಮಗ ಗೋಪಿ, ನಮ್ಮ ಕುಲಪುತ್ರ ! ಲೇ ಅವಿವೇಕಿ ನನ

ಮಗನ, ಏನಲೇ ಇದು ಅವತಾರ?

ಗೋಪಿ – ಇದು ದಾಸಾವತಾರ, ಯಪ್ಪಾ... ದಾಸಾವತಾರ. ಹಣದಾಸೆ ಬಿಟ್ಟು ಹರಿದಾಸರಾದವರು, ಹೆಣ್ಣಿನಾಸೆಯಿಂದ ಸಣ್ಣದಾಸನಾದ ಇವನು.

ಶಂಕ್ರಪ್ಪ – ಬೇಸೈತೆಪಾ ಬೇಸೈತಿ, ಮತ್ತ ಹೆಣ್ಣಿನಾಸೆಯಿಂದ ಸಣ್ಣದಾಸನಾದೆ ಅಂತ ನೀನ ಹೇಳ್ತಿಯಲ್ಲ.

ಗೋಪಿ – ಯಪ್ಪಾ ನಿನ್ನೆ ರಾತ್ರಿ ನನಗೊಂದು ಕನಸ ಬಿದ್ದಿತ್ತು. ತ್ವಾಟದಾಗ ಮಕ್ಕೊಂಡಾಗ ಯಪ್ಪಾ ಅದು ಎಂಥಾ ಕನಸಂದಿ? ಪುರಂದರದಾಸರು ಬಂದು ತಂಬೂರಿ ಹಿಡಕೊಂಡು ಥೈ ಥೈ ಥೈ ಕುಣದಂಗಾತು. ಎದ್ದು ನೋಡುದರೊಳಗ ಯಾರೂ ಇರಲಿಲ್ಲ. ಅದರ ಅರ್ಥ ಏನು ಅನ್ನೂದು ನನಗ ತಿಳೀತು. ಮುಂಜಾಲೆದ್ದು ಅಲ್ಲೆ ಮಟ್ಟಿಭಾವಿ ಸ್ನಾನ ಮಾಡಿ, ಗಟ್ಟಿಮಣ್ಣಿ ಹರಿನಾಮಾ ಬಡಕೊಂಡು, ಇದೊಂದು ಸೊಟ್ಟ ತಂಬೂರಿ ಕೈಗಡ ಇಸಗೊಂಡು, ಈ ಅವತಾರ ತಾಳಿ ಹೊಂಟೀವಿ. ಯಪ್ಪಾ ಇವತ್ತಿಂದ ನನ್ನ ಸಲುವಾಗಿ ಹೆಣ್ಣ ಹುಡುಕಬ್ಯಾಡ, ಮಣ್ಣ ಹುಡುಕಬ್ಯಾಡ, ಥಣ್ಣಗ ಕಣ್ಣು ಮುಚ್ಚಿಗೊಂಡು ಮನ್ಯಾಗ ಕುಂತಬಿಡು.

ಶಂಕ್ರಪ್ಪ – ಇನ್ಲಿ ಹೋಗಲೇ ಮಗನ ನಿನ್ನ ಅವತಾರ ಎದಕ ಅನ್ನೋದು ನನಗ ತಿಳದೈತಿ. ಈ ದಾಸಾವತಾರ ತಾಳಿ ನಿಂತ್ರೆ ಎಲ್ಲಿ ನನ್ನ ಮಗ ಸನ್ನೇಸಿ ಅಕ್ಯಾನೋ ಅಂತ ಹೆದರಿ, ದೌಡ ನಮ್ಮಪ್ಪ ಮದ್ವಿ ಮಾಡ್ತಾನ ನಮ್ಮಪ್ಪ ಅಂತ ಬಂದೀದಿ. ಮಗಾ ಬೇಕಾದಂಗ ಇದ್ದ ಆಸ್ತಿ ಪಾಸ್ತಿ ಉಪಭೋಗ ಮಾಡೂದು ಬಿಟ್ಟು ಭಿಕಾರಿದಾಸ ಆಗಾಕ ಹೊಂಟಾನ ಮಗಾ ಇವ!

ತಂದೆ ಮಗನ ಸಲಿಗೆಯ ಸಂಭಾಷಣೆಯಲ್ಲಿ ನಗೆ ತುಂಬಿದೆ. ಈ ಸನ್ನಿವೇಶದಲ್ಲಿ ಪ್ರೇಕ್ಷಕರು ಹೊಟ್ಟೆ ತುಂಬ ನಗುತ್ತಿದ್ದರು. ಅವರ ಇತರ ನಾಟಕಗಳೆಲ್ಲ ಇಂಥ ಹಾಸ್ಯ ಸನ್ನಿವೇಶಗಳು ಸಾಮಾನ್ಯ. ಹಾಸ್ಯಕ್ಕೆ ಇಷ್ಟೊಂದು ಪ್ರಾಧಾನ್ಯತೆ ಯಾಕೆ? ಎಂದು ಕೇಳಿದರೆ ಅದಕ್ಕೆ ಅವರು ಕೊಡುವ ವಿವರಣೆ ಹೀಗಿದೆ: "ಬದುಕು ತೇಕೋದರೊಳಗ ಸಾಕಷ್ಟು ಸುಸ್ತಾಗಿರ್ತೀವಿ. ನಾಟಕ ನೋಡಿ ಅದನ್ನೆಲ್ಲ ಮರೆಯಬೇಕು ಅಂತ ಥೇಟರಿಗೆ ಬಂದರೆ ಅಲ್ಲಿಯೂ ಅಂಥದ್ದೇ ಬದುಕಿನ ಚಿತ್ರ, ಇದರಿಂದ ಯಾರಿಗೆ ತಾನೆ ಬೇಸರವಾಗುವುದಿಲ್ಲ" ಎಂದು ಪ್ರೇಕ್ಷಕರು ಹಲವುಬಾರಿ ನಾಟಕಕಾರರಿಗೆ ಕೇಳಿದ್ದಾರೆ. "ನಗಿಸಿ ಮನಸ್ಸು ಹಗುರು ಮಾಡೋ ನಾಟಕಗಳು ಬೇಕು" ಅಂತ ಆಗ್ರಹಿಸಿದ್ದುಂಟು. ಪ್ರೇಕ್ಷಕರ ಈ ನಾಡಿಮಿಡಿತ ಹಿಡಿದುಕೊಂಡೇ ಅರಿಷಿಣಗೋಡಿಯವರು ನಾಟಕಗಳನ್ನು ಬರೆದಿದ್ದಾರೆ; ಹಾಸ್ಯಕ್ಕೆ ಒತ್ತು ಕೊಟ್ಟಿದ್ದಾರೆ. ಇಂಥ ನಾಟಕಗಳಿಂದಾಗಿ ನಮ್ಮ ರಂಗಮಂದಿರಗಳು ನಗಿಸುವ ಕೇಂದ್ರಗಳಾಗಿವೆ. ಹಾಸ್ಯ ಹದವಾಗಿ ಬೆರೆತರೆ ಸಮಸ್ಯೆ ಇಲ್ಲ. ಅದುವೇ ಮುಖ್ಯವಾದರೆ ನಾಟಕದ ಅರ್ಥ, ಪರಿಣಾಮ ಚೆನ್ನಾಗಿ ಪ್ರಕಟವಾಗುವುದಿಲ್ಲ.

ಅರಿಷಿಣಗೋಡಿಯವರ ವಿಡಂಬನಾ ಶೈಲಿಗೆ ಕೆಳಗಿನ ಸಂಭಾಷಣೆಯನ್ನು ನೋಡಬಹುದು:

ಸಂಜೀವ – ನಮಸ್ಕಾರ್ರೀ... ರಾಮಣ್ಣ ಮಾಸ್ತರ! ನಮಸ್ಕಾರ್ರೀ ನಾಗೇಶರಾಯರ ಅಲೆಲೇ... ಲಿಂಗಣ್ಣ ಶೆಟ್ರೂ ಇಲ್ಲೇ ಅದಾರಲ್ಲ? ನಮಸ್ಕಾರ್ರೀ ಶೆಟ್ರ!

ಲಿಂಗಣ್ಣ – ಬಂದ ನೋಡ್ರಿ ಮಗ ಸಂಜೀವ! ನಾ ಎಲ್ಲಿ ಹೋದಲ್ಲೆ ನಮ್ಮ ಬೆನ್ನ ಹತ್ತೇ ಅದಾನ ನೋಡ್ರಿ ಇವ ಸಿ.ಐ.ಡಿ. ಗತೆ. ಲೇ ಮಗನ ಸಂಜೀವ ಇಲ್ಲೇನ ಕೆಲ್ಸ ಇತ್ತಪಾ ನಿಂದು?

ಸಂಜೀವ – ಏನಿಲ್ರೀ, ರಾಮಣ್ಣ, ಮಾಸ್ತರರ ಮಗ ಸುಭಾಸಪ್ಪಾರು ಸೈನ್ಯಕ್ಕೆ ಸೇರೀನಿ, ಮನಿ ಕಡೆ ಆಟು ಕಾಳಜಿ ಇರಲಿ ಅಂತ ನನಗೊಂದು ಟಪಾಲು ಹಾಕಿದ್ರು. ಅಲ್ಲದ ಅವರು ಊರು ಬಿಟ್ಟು ಹೋಗು ಮುಂದ ತಂದಿಯವರ ಮೈಯಾಗ ಪೂರ್ತಿ ಆರಾಮ ಅಗಿರಲಿಲ್ಲ. ಡಾಕ್ಟರ ಊರಿಗೆ ಬಂದಾಗ ಇನ್ನಷ್ಟು ಪರೀಕ್ಷೆ ಮಾಡಿಸಿ ಔಷಧಿ ವಗ್ಯೆರ ಕೊಡಿಸಬೇಕು ಅಂತ ತಿಳಸ್ಯಾರ್ರಿ.

ರಾಮಣ್ಣ – ಸುಮ್ಮನೆ ಡಾಕ್ಟರರನ್ನೇಕೆ ಬರಲಿಕ್ಕೆ ಹೇಳಿದೆಯಪ್ಪ ಸಂಜೀವ? ನಾನೀಗ ಸೌಖ್ಯವಾಗಿದ್ದೇನೆ. ಸಂತೋಷವಾಗಿದ್ದೇನೆ. ಅಲ್ಲದೆ ಸೈನ್ಯಕ್ಕೆ ಸೇರಿದ ನನ್ನ ಮಗನ ರಾಷ್ಟ್ರೀಯ ಭಕ್ತಿ ನನಗೆ ಎಲ್ಲಿಲ್ಲದ ಸಂತೋಷ ನೀಡಿದೆ.

ಸಂಜೀವ – ಹೌದ್ರಿ ತಂದೆ, ಖರೆ ಐತ್ರಿ ನಿಮ್ಮ ಮಾತು. ದೇಶಕ್ಕೆ ಹಣಾ ಕೊಡಬಹುದು. ಬಂಗಾರ ಕೊಡಬಹುದು. ಅದರ ತಮ್ಮ ಜೀವನಾ ಪಣಕ್ಕ ಹಚ್ಚಿ ಹೋರಾಡೂ ಸೈನಿಕರು ಅಂದ್ರ ದೇವರಿದ್ದಂಗರಿ. ಅದಕಂತ 'ವಿದ್ವಾನ್ ಸರ್ವತ್ರ ಪೂಜ್ಯತೇ' ಅಂತ ಇದ್ದದ್ದನ್ನು ತಗದು ಈಗಲ ಕಾಲಕ್ಕ ಅದು "ಸೈನಿಕಾನ್ ಸರ್ವತ್ರ ಪೂಜ್ಯತೇ" ಅಂತ ಆಗಬೇಕು. ಅಂತ ಹೇಳಿದ್ರು ನಮ್ಮ ಲಾಲ್ ಬಹುದ್ದೂರ್ ಶಾಸ್ತ್ರಿ ಅವರು.

ಲಿಂಗಣ್ಣ – ಹ್ಞಾ ಒಗದ ನೋಡ್ರಿ ಮಗ ಒಂದು ಸಂಸ್ಕೃತ ಶ್ಲೋಕಾನ. ಮಗಾ ಎಷ್ಟು ಕಲ್ತಾನೋ ಯಾವ ಯುನಿರ್ವಸಿಟಿಗೆ ಹೋಗಿ ಬಂದಾನೋ... ಹ್ಯಾಂಗ ಅದಾವ ನೋಡ್ರಿ ಆ ಮಗನ ಮೈಯಾಗಿನ ಡ್ರೆಸ್ಸು! ಎಂದ ಹೊಲಸಿಟ್ಟಿದ್ನೋ ಈ ಕೊಳಕ ಖಾದೀ ಕೌದೀನ?

ಸಂಜೀವ – ಅಲ್ರೀ ಶೆಟ್ರ ಖಾದಿ ಡ್ರೆಸ್ ಅಂದ್ರ ನಿಮ್ಮ ಪಾಲಿಗೆ ಕೊಳಕ ಕೌದಿ ಆಗ್ಯಾವಲ್ರೀ? ನೋಡ್ರಿ, ಮೊಟ್ಟ ಮೊದಲಿಗೆ ನಮ್ಮ ಭಾರತದಾಗ ರಾಷ್ಟ್ರೀಯ ಭಕ್ತಿ ಪ್ರತಿಯೊಬ್ಬನ ಹೃದಯದಾಗೂ ಮೂಡಬೇಕಾದ್ರ ಈ ಖಾದೀನ ಕಾರಣಾತು ಕಸಬರಗಿ ಹಿಡದು ಕಸಾ ಹೊಡಿಯೂ ಸೇವಾಗುಣಾನೂ ಇದರಾಗೈತಿ. ಶಾಂತಿ ಸತ್ಯ ಅಹಿಂಸೆಗಳ ಆಯುಧ

ಹಿಡಿದು ಯುದ್ಧ ಮಾಡೂ ವೀರರಸಾನೂ ಇದರಾಗ ತುಂಬೈತಿ. ನಿಜವಾಗಿಯೂ ನಾನೊಬ್ಬ ನಾಗರಿಕ, ನನ್ನ ಸ್ವಂತ ಸುಖ ಸಂತೋಷದ ಜೊತೆಗೆ ಇನ್ನುಳಿದ ದೀನದಲಿತರ ಉದ್ಧಾರಕ್ಕೂ ಮನಸಾ ದುಡೀತೀನಿ. ಊರ ಕಲ್ಯಾಣಕ್ಕ ಹೊರಡ್ತೀನಿ ಅಂತ ಆಣೀ ಮಾಡಿ ಈ ಅರಬೀ ಹಾಕ್ಕೋಬೇಕು. ಬರೀ ಹೆಸರಿಗೆ ಮಾತ್ರ ಖಾದಿ ಹಾಕ್ಕೊಂಡು, ಅದರ ಕಿಸೇದಾಗ ಲಂಚ, ಮೋಸ, ಮನಿಮುರುಕತನ ಕತ್ತರಿ ಇಟಗೊಂಡು ದೊಡ್ಡವರು ಅಂತ ತಿರಗೂ ನಿಮ್ಮಂಥ ಡಂಭಾಚಾರಿ ಹಿರೇರಿಗೆ ಆ ಗಾಂಧಿ ಮುತ್ಯಾನ ಕೆರವು ತಂದು ಬಾಯಿ ಬಾಯಿ ಬಾರಿಸಬೇಕು.

ಲಿಂಗಣ್ಣ – ಮಾಡೋ ಮಗನೇ, ನೀ ಊರ ಉದ್ಧಾರ ಮಾಡಲೇ. ಖಾದಿ ಭಕ್ತ ಆಗಿ ಮೆರಿ. ತಿನ್ನಾಕ ಕೂಳ ಇರಲಿಕರ ಅಷ್ಟ ಹೋತು, ಇನ್ನೊಂದು ೩–೪ ಖಾದಿತಾಗೆ ತಂದು ಮನ್ಯಾಗ ಇಡು.

ಸಂಜೀವ – ಇದಿಷ್ಟು ಸಾಕ್ರಿ ನಮಗ ಶೆಟ್ರ, ೧೯೪೭ನೇ ಸಾಲಿನಾಗ ಈ ಒಂದ ಜತಿ ಡ್ರೆಸ್ಸು ನಮ್ಮಪ್ಪ ಹೊಲಿಸಿ ಇಟ್ಟಿದ್ದ. ಈಗ ಅವನ್ನ ನಾವು ಹಾಕ್ಕೊಂತೀವಿ. ಇನ್ನ ಇವ ಮುಂದ ನಮ್ಮ ಮಕ್ಕಳಿಗೆ ಬರ್ತಾವು.

ನಾಗೇಶ – ಅಲ್ಲಪ ಸಂಜೀವ, ೪೭ನೇ ಸಾಲು ಗತಿಸಿ ಹೋಗಿ ಈಗಾಗಲೇ ೨೩–೨೪ ವರ್ಷಗಳಾಗಿ ಹೋದವು. ಆಗ ನಿಮ್ಮಪ್ಪ ಹೊಲಿಸಿದ ಡ್ರೆಸ್ಸು ಇಲ್ಲಿಯವರೆಗೆ ಹೇಗೆ ನಡೆಯುತ್ತವಪ್ಪ?

ಸಂಜೀವ – ತಡೀದ ಏನ ಮಾಡ್ತಾವ್ರಿ ಸಾವಕಾರ? ಈಗ ನೋಡ್ರಿ, ವರ್ಷದಾಗ ಏನೋ ೩–೪ಸಲ ಅಂದ್ರ ಯಾವದರ ಸಭೆ ಸಮ್ಮೇಳನ ಇದ್ದಾಗ ಯಾರರ ಮಂತ್ರಿಗಳು ಬರ್ತಾರ ಅಂದಾಗ, ಅವಾಗಷ್ಟು ನಾವು ಇವನ್ನ ಹಾಕ್ಕೊಂಡು ಬರ್ತೀವಿ. ಕಾರ್ಯಕ್ರಮ ಮುಗಿದು ಮನಿಗೆ ಹೋದ ಕೂಡ್ಲೆ ಇವನ್ನ ಮತ್ತೆ ಮಡಚಿ ಟ್ರಂಕಿನಾಗ ಹಾಕಿಬಿಡ್ತೀವಿ. ಇಲ್ಲೇ ಅದಾರ ನೋಡ್ರಿ ಶೆಟ್ರು, ಮುಖಂಡರ ಕೂಡ ಕೂಡಿದಾಗ ಕೋರ್ಟ – ಕಚೇರಿ ಕೆಲ್ಸ ನಡೆದಾಗ ಒಳೇ ಖಡಕ ಇಸ್ತ್ರಿ ಮಾಡಿಸಿದ ಖಾದಿ ಅರಬಿ ಹಾಕ್ಕೊಂಡ ಬರ್ತಾರ. ಇನ್ನುಳಿದ ದಿವ್ಸದಾಗ ಭಾರಿ ಭಾರಿ ಶಿಲ್ಕು ಟರ್ಲಿನ್ ಶರ್ಟು ಹಾಕ್ಕೊಂಡು ತಿರಗತಾರ. ಒಟ್ಟಿಗೇನರಿ ಅವರು ಬಂದಾಗ ಅವರಂಗ, ಇವರು ಬಂದಾಗ ಇವರಂಗ ಬಾರಿಸಿ ತಮ್ಮ ಬ್ಯಾಳಿ ಬೇಸಿಗೋತಾರ. ಕಡಿಗೆ ಇಂಥವರ ಪರಿಸ್ಥಿತಿ ಎಲ್ಲಿಗೆ ಬರ್ತೈತಂದ್ರ ಧೋಬಿಕಾ ಕುತ್ತಾ ನ ಘಾಟ ಕಾ ನ ಘರ ಕಾ.

ಡಾಂಭಿಕ ದೇಶಭಕ್ತ, ಸ್ವಾರ್ಥಿ ವ್ಯಾಪಾರಿಯ ವ್ಯಕ್ತಿತ್ವವನ್ನು ಅನಾವರಣಗೊಳಿಸುವ ಸಂಜೀವನ ಮಾತಿಗೆ ವಿಡಂಬನೆಯ ವಿಶಿಷ್ಟ ಶಕ್ತಿ ಇದೆ. ವಿನೋದ, ವಿಡಂಬನೆಯ

ಇಂಥ ಮಾತುಗಳು ನಾಟಕದುದ್ದಕ್ಕೂ ಕಾಣುತ್ತೇವೆ. ಆಡುಮಾತನ್ನು ಸಾಹಿತ್ಯ ಕೃತಿಯಲ್ಲಿ ಹೇಗೆ ದುಡಿಸಿಕೊಳ್ಳಬೇಕೆನ್ನುವವರು ಇಂಥ ಕೃತಿಗಳನ್ನು ನೋಡಬೇಕು.

## ಹಾಡು

ಒಂದು ಕಾಲದಲ್ಲಿ ಸಂಗೀತವು ಅರಮನೆ ಬಿಟ್ಟರೆ ರಂಗಭೂಮಿಯನ್ನೇ ಆಶ್ರಯಿಸಿತ್ತು. ಗವಾಯಿಗಳು, ಗಾಯಕರು, ನಿರ್ದೇಶಕರಾಗಿ, ನಟರಾಗಿ ನಾಟಕ ಕಂಪನಿಗಳಲ್ಲಿರುತ್ತಿದ್ದರು. ಅಂಥವರ ಸಾನ್ನಿಧ್ಯದಿಂದ ಅಂದಿನ ನಾಟಕಗಳು 'ಸಾಗ್ರ ಸಂಗೀತ ನಾಟಕ'ಗಳಾಗಿರುತ್ತಿದ್ದವು. ಸನ್ನಿವೇಶಕ್ಕೆ ತಕ್ಕಂತಹ ಅಂದರೆ ವಸ್ತುವಿನ ರಸಭಾವ ಪೋಷಿಸುವಂತಹ ರಾಗಗಳನ್ನು ನಾಟಕದ ಹಾಡುಗಳಿಗೆ ಸಂಯೋಜಿಸುತ್ತಿದ್ದರು. ಹೀಗಾಗಿ ಸಂಗೀತವು ಅಭಿನಯದ ಒಂದು ಅಂಗವಾಗಿ ಕೆಲವೊಮ್ಮೆ ಸಂಗೀತವೇ ಅಭಿನಯವಾಗಿ ಪ್ರೇಕ್ಷಕರನ್ನು ರಂಜಿಸುತ್ತಿತ್ತು. ಕಾಲಾಂತರದಲ್ಲಿ ಲಂಗುಲಗಾಮಿಲ್ಲದೆ ರಂಗಕಲೆಯ ರಾಜ್ಯವನ್ನಾಳುತ್ತಿದ್ದ ಸಂಗೀತಕ್ಕೆ ಕಡಿವಾಣ ಹಾಕುವ ಪ್ರಯತ್ನಗಳು ನಡೆದವು. ಕ್ರಮೇಣ ನಾಟಕಗಳಲ್ಲಿ ಗದ್ಯ ಮುಂದಾಯಿತು. ರಂಗಸಂಗೀತವು ಶೇಕಡ ಮೂವತ್ತರ ಸ್ಥಾನ ಉಳಿಸಿಕೊಂಡಿತು. ಅನಂತರದ ಬೆಳವಣಿಗೆಯಲ್ಲಿ ಗಾಯಕರ ಕೊರತೆ, ನವ್ಯರ ಟೀಕೆಗಳಿಂದ ಸಾಮಾಜಿಕ ನಾಟಕಗಳ ಸಂದರ್ಭದಲ್ಲಿ ಸಂಗೀತದ ಸ್ಥಾನವು ಶೇಕಡ ಹತ್ತಕ್ಕೆ ಇಳಿಯಿತು. ಸಂಗೀತವಿಲ್ಲದೆ ನಾಟಕ ರಂಜಿಸುವುದಿಲ್ಲವೆಂಬ ಸತ್ಯವನ್ನು ಕಂಡುಕೊಂಡ ನಾಟಕ ಕಂಪನಿಗಳು ಆ ಹತ್ತರ ಸ್ಥಾನವನ್ನು ಹೇಗೋ ಭರ್ತಿ ಮಾಡುತ್ತ ಮುಂದುವರಿದಿವೆ. ಇಂದು ಕಂಪನಿ ನಾಟಕಗಳ ಹಾಡುಗಳಲ್ಲಿ ಕನ್ನಡ ಹಿಂದಿ ಚಿತ್ರಗೀತೆಗಳು, ಕವ್ವಾಲಿ, ಗಜಲ್‌ಗಳು ಸೇರಿಕೊಂಡಿವೆ. ಅರಿಷಿಣಗೋಡಿಯವರು ಪ್ರದರ್ಶಿಸುವ ನಾಟಕಗಳಲ್ಲಿ ಪರಿಸ್ಥಿತಿ ಈ ವಿಪರೀತಕ್ಕಿಳಿದಿಲ್ಲ. ಅವರ ನಾಟಕಗಳಲ್ಲಿ ಪರಂಪರೆಯ ಗಂಧ ಗಾಳಿ ಸುಳಿಯುತ್ತದೆ.

ಅರಿಷಿಣಗೋಡಿಯವರಿಗೆ ಸಂಗೀತದಲ್ಲಿ ಆಸಕಿತ ಇದೆ. ಕಂಪನಿ ಕಟ್ಟುವ ಪೂರ್ವದಲ್ಲಿ ಪಂಚಾಕ್ಷರ ಗವಾಯಿಗಳ ಶಿಷ್ಯರಾದ ಕಮತಗಿಯ ಗದಿಗೆಯ್ಯನವರಿಂದ ಆರು ತಿಂಗಳು ಸಂಗೀತ ಹೇಳಿಸಿಕೊಂಡಿದ್ದಾರೆ. ಅಂದು ಐದಾರು ರಾಗಗಳನ್ನು ತಿಳಿದುಕೊಂಡಿದ್ದ ಅವರು ನಾಟಕಗಳಿಗೆ ಬೇಕಾದಷ್ಟು ಸಂಗೀತ ಜ್ಞಾನವನ್ನು ಪಡೆದವರಾಗಿದ್ದಾರೆ. ಈ ಆಸಕ್ತಿ – ಅಭ್ಯಾಸ ಬಲದಿಂದಲೋ ಏನೋ ತಾವು ಬರೆದ ನಾಟಕಗಳಲ್ಲಿ ಉತ್ತಮ ಹಾಡುಗಳನ್ನು ಬರೆದಿದ್ದಾರೆ. ಒಂದೊಂದು ನಾಟಕದಲ್ಲಿ ಆರರಿಂದ ಏಳರ ವರೆಗೆ ಹಾಡುಗಳಿವೆ. ಇವರೇ ರಚಿಸಿದ ಹುಚ್ಚೇಶ್ವರನ ಸ್ತುತಿಪರವಾದ ನಾಂದಿ ಪದ್ಯವು ಎಲ್ಲ ನಾಟಕಗಳಿಗೂ ಸಾಮಾನ್ಯವಾಗಿದೆ.

'ಬಸ್ ಕಂಡಕ್ಟರ್' ನಾಟಕದಲ್ಲಿ ಹೆಣ್ಣಿನ ಪ್ರಭಾವವನ್ನು ಬಣ್ಣಿಸುವ ರಾಜು

ಕಂಡಕ್ಟರ್‌ನ ಹಾಡೊಂದು ತುಂಬ ಪ್ರಸಿದ್ಧಿಯಾಗಿತ್ತು :

ಕಾಮರೂಪದ ಹೆಣ್ಣು ಅವಳ ಮೇಲೆ ಎಲ್ಲಾರ ಕಣ್ಣು ।
ಕಾಮನಬಿಲ್ಲಿನ ಮಿಂಚು ಅವಳ ಕಣ್ಣಿನ ಸಂಚು ॥ಪ॥
ಹೆಣ್ಣಿಗಾಗಿ ಮುಕ್ಕಣ್ಣನು ಸೋತು
ಕಣ್ಣು ಬಾಯಿ ಬಿಡುವಂಥ ಮಾತು
ರಾಮ ರಾವಣರ ಯುದ್ಧವು ಆಯ್ತು
ಕೌರವ ಪಾಂಡವರ ಕಾಳಗವಾಯ್ತು ॥ ೧ ॥

ಹಳ್ಳಿಯ ರೈತರು, ಸಾಲಿ ಕಲಿಯುವ ಹುಡುಗರು ಹೆಣ್ಣಿನ ಮೋಹಕ್ಕೆ ಸಿಕ್ಕು ಹೇಗೆ ತಿರುಗುತ್ತಾರೆಂಬುದನ್ನು ಈ ಹಾಡು ಹಾಸ್ಯಮಯವಾಗಿ ಬಣ್ಣಿಸುತ್ತದೆ.

'ಇಲ್ಲಿಗೆ ಬಂತೋ ಸಂಗಯ್ಯಾ' ನಾಟಕದಲ್ಲಿ ಚಿತ್ರಕಲಾವಿದ (ವಿಶ್ವನಾಥ)ನ ಪ್ರೇಯಸಿ (ಗೀತಾ) ಅವನ ಬೆಳವಣಿಗೆ ಕುರಿತು ಹಾಡುವ ಹಾಡು ರಾಗ ಭಾವಗಳಿಂದ ಮಧುರವಾಗಿದೆ:

ಕಲೆಯ ಕುಂಚ ಕುಣಿಯಲಿ
ಹದಯ ತುಂಬಿ ತಣಿಸಲಿ
ದಿನದ ತಾಪ ಕಳೆದು ಮನದಿ
ಇಳೆಯ ಸೊಬಗು ತುಂಬಲಿ ॥ ಪ ॥
ಸುತ್ತುವರಿದು ಸರಸಲೀಲೆ
ಸೂರೆಗೊಂಡು ಹರಿಯಲಿ
ನಿತ್ಯ ನಮ್ಮ ಬಾಳಿನಲ್ಲಿ
ಹರುಷ ನಿಮಿಷ ನೆಲೆಸಲಿ ॥ ೧ ॥
ಸ್ನೇಹ ಕಲೆಯ ಮಧುರ ಮಿಲನ
ನಿಮಗೆ ಸ್ಫೂರ್ತಿ ನೀಡಲಿ
ನಿಮ್ಮ ಕೈಯ ಕುಂಚಿನಲ್ಲಿ
ಮಿಂಚು ಮೆರಗು ಮೂಡಲಿ ॥ ೨ ॥

ಇದೇ ನಾಟಕದಲ್ಲಿ ಆರೆಂಪಿ ಡಾಕ್ಟರ್ ಶಂಕರನ ಹಾಡೊಂದು ತುಂಬ ಸೊಗಸಾಗಿದೆ. ಆಧುನಿಕತೆಯ ಆಡಂಬರವನ್ನು ವಿಡಂಬಿಸುವ ಅದರ ಶೈಲಿ ಮೋಜಿನದಾಗಿದೆ:

ಸುತ್ತಲೂ ಸುಧಾರಣೆಯ ಚಿತ್ರಗಳೊ ಅಂಣಾ ।
ನಮ್ಮ ಬಾಳಿಗಿಲ್ಲದಾಯ್ತು ಭವ್ಯವಾದ ಕಂಣಾ ॥
ಪಾಶ್ಚಿಮಾತ್ಯ ದೇಶಗಳ ಫ್ಯಾಶನ್ ಬಂಣಾ ।
ಭಾರತೀಯರಾದ ನಾವು ಮರುಳಾದಿವಂಣಾ ॥ ಪ ॥

ವಸ್ತವಡವಿ ಗಡಿಗಿ ಮಡಿಕಿಯಲ್ಲ ಹಗುರಂಣಾ ।
ಭಾರವಿಲ್ಲದಾ ವಸ್ತು ಪ್ಲಾಸ್ಟಿಕ್ಕು ಬಂತಂಣಾ ॥

ನಮ್ಮ ಹಿರಿಯರಾ ಶಕ್ತಿ ನಮಗಿಂದ ಇಲ್ಲಂಣಾ ।
ಒನ್ ಬಾಯ್ ಟು, ಟು ಬಾಯ್ ತ್ರಿ ಚಹಾ ಕಾಫಿ ಆಯ್ತಂಣಾ ॥ ೧ ॥
ದಿನಕ್ಕೊಂದು ಹೊಸ ನಮೂನಿ ಉಡಿಗೆ ತೊಡಿಗೆ ಟರ್ಲಿನಾ ।
ಇಲಿಬೂಟು ಮುಂಗ್ಲಿಸೂಟು ದೇಹಕಾಯ್ತು ಫ್ಯಾಷನ್ ॥
ಹಿಂದೂ ನಾರಿ ತಾನುಟ್ಟ ಮೈ ಕಾಣುವ ಫಾಕ್ಲಿನಾ ।
ಗಾಳಿ ಬೀಸಿ ಹಾರಿ ಹೋಯ್ತು ಉಟ್ಟ ಸೀರೆ ನಾಯಲಾನ್ ॥ ೨ ॥
ಹೊಸ ನಮೂನಿ ಪಾದರಕ್ಷೆ ಹಿಂಬಡಕ್ಕೆ ಹಾಯ್ ಹೀಲ್ಸ್
ಬೆಡಗು ಮಾಡಿ ತೂಗಿ ಬಾಗಿ ನಡೆಯುವುದೇ ಟ್ರಿಕ್ಸ್
ಗಾಳಿ ಮೇಲೆ ನಡೆದಂತೆ ಹವಾಯಿ ಚಪ್ಪಲ್ಸ್
ಮಳೆಗಾಲದ ಕೆಸರಿನಲ್ಲಿ ರಟಕ್ ಪಟಕ್ ರಾಡೀಸ್ ॥ ೩ ॥

'ಸೈನಿಕನ ಸಹೋದರಿ' ನಾಟಕದಲ್ಲಿ ದೇಶದ ನಾಯಕರನ್ನು ವಿಡಂಬಿಸುವ ಸಂಜೀವನ ಹಾಡು ಹೀಗಿದೆ :

ರಾಮರಾಜ್ಯವಾಗಬೇಕು ಎಂದರಪ್ಪ ಗಾಂಧೀಜಿ ।
ರಾಕ್ಷಸರೇ ತುಂಬಿಬಿಟ್ಟರಲ್ಲ ಇಂದು ಸಂದಿ ಸಂದಿ ॥ ಪ ॥
ದೇಶಹಿತ ನಮ್ಮ ಮತ ಎಂಬ ಬಾಯಿಬಡಿವಾರ ।
ತಾಸಿಗೊಂದು ಕಳ್ಳಪೇಟೆ ಕಾಳು – ಕಡಿಯ ವ್ಯಾಪಾರ ॥
ಬರಿ ಬಾಯಿ ಮಾತಿನಲಿ ಮಾತ್ರ ದೀನ ಜನರ ಉದ್ಧಾರ ।
ಸ್ವಾರ್ಥಹಿತದ ದಾರಿಯಲ್ಲಿ ಇವರ ನಡತೆ ಪೂರ ॥ ೧ ॥

ಇಂಥ ಹಲವಾರು ಹಾಡುಗಳನ್ನು ಅರಿಷಿಣಗೋಡಿಯವರು ರಚಿಸಿದ್ದಾರೆ. ಕವಿತ್ವದ ದಷ್ಟಿಯಿಂದ ಅವು ಗಮನಾರ್ಹವಾಗಿರದಿದ್ದರೂ ರಂಗದ ಮೇಲೆ ನಾಟಕದ ಸನ್ನಿವೇಶಕ್ಕೆ ರಂಗು ತುಂಬುವಲ್ಲಿ, ಪ್ರೇಕ್ಷಕರನ್ನು ರಂಜಿಸುವಲ್ಲಿ ಅವು 'ಒನ್ಸ್‌ಮೋರ್' ಪಡೆದುಕೊಳ್ಳುವ ಶಕ್ತಿಯನ್ನು ಪಡೆದಿದ್ದವು.

# ೭. ದೇಹ ದಣಿಯಿತು, ಕಂಪನಿ ಮುಚ್ಚಿತು

ಕ್ರಿ.ಶ. ೨೦೦೦ – ಇದು ಅರಿಷಿಣಗೋಡಿ ಮತ್ತು ಅವರು ಹುಟ್ಟು ಹಾಕಿದ್ದ ನಾಟಕ ಕಂಪನಿಯ ಜೀವನದಲ್ಲಿಯ ನಿರ್ಣಾಯಕ ಕಾಲಘಟ್ಟ. ಆಗಲೆ ಬಿ.ಆರ್. ಅರಿಷಿಣಗೋಡಿಯವರು ೬೪ ವಸಂತಗಳನ್ನು ಪೂರೈಸಿದ್ದರು. ಆಯುಷ್ಯದ ಬಹುಭಾಗವನ್ನು ಕಂಪನಿಯ ಜೊತೆಗೇ ಅಲೆದಾಡಿ, ಅಲೆದಾಡಿ ಆಯಾಸಗೊಂಡಿದ್ದರು. ಅವರೇ ಹುಟ್ಟು ಹಾಕಿದ್ದ ಕಂಪನಿ ನಾಲ್ಕಾಗಿ ಬೆಳೆದು ಮತ್ತೆ ಮೂಲ ಕಂಪನಿಯೊಂದಕ್ಕೇ ಇಳಿದಿತ್ತು. ಅದಕ್ಕೆ ನಾಲವತ್ತರ ಪ್ರಾಯ. ಒಂದು ಕಾಲದಲ್ಲಿ ನಾಲ್ಕು ನಾಟಕ ಕಂಪನಿಗಳು, ನೂರಾರು ರಂಗಕರ್ಮಿಗಳ ಸಂಸಾರ, ಅವರ ಸಂಬಳ, ಯೋಗಕ್ಷೇಮ ಕ್ಯಾಂಪುಗಳ ಬದಲಾವಣೆ, ನಾಟಕಗಳ ಬದಲಾವಣೆ, ರಂಗಸಲಕರಣೆಗಳ ಉಸ್ತುವಾರಿ – ಇದೆಲ್ಲ ನಿತ್ಯನಿಯಮದಂತೆ ನಡೆಯಬೇಕು. ಇಷ್ಟೊಂದು ಶ್ರಮಕ್ಕೊ, ದುಡಿಮೆಗೆ ಸಿಗುವ ಫಲವೋ ನಿಶ್ಚಿತವಿರಲಿಲ್ಲ. ನಾಟಕಗಳ ಬಗ್ಗೆ ಜನರಲ್ಲಿ ಆಸಕ್ತಿ ಇಲ್ಲದಂತಾಗಿತ್ತು. ಮನೆಯಲ್ಲಿಯೇ ಸಿಗುವ ಟಿ.ವಿ. ಮನರಂಜನೆ ಪ್ರೇಕ್ಷಕರನ್ನು ಕಟ್ಟಿಹಾಕಿತ್ತು. ಪ್ರತಿಕೂಲ ಪರಿಸ್ಥಿತಿಯ ವಿರುದ್ಧ ಎಷ್ಟೊಂದು ಈಜುವುದು? ಮನೆಯಿಂದ ಹಣ ಒಯ್ದು ಕಂಪನಿ ನಡೆಸುವುದು? ಅರಿಷಿಣಗೋಡಿಯವರು ಸುಸ್ತಾಗಿದ್ದರು. 'ಕಂಪನಿ ಮುಚ್ಚಿ ಮರ್ಯಾದೆಯಿಂದ ಮನೆಗೆ ಹೋಗುವುದೇ ಲೇಸು' ಎಂದು ನಿರ್ಣಯಿಸಿದರು.

ಅದನ್ನು ಆಪ್ತರ ಎದುರು ಹೇಳಿಕೊಂಡರು ಕಂಪನಿಯಲ್ಲಿದ್ದ ಕೆಲವು ಹಿತೈಷಿ ಕಲಾವಿದರು, ಮ್ಯಾನೇಜರರು 'ಹಾಗೆ ಮಾಡುವುದು ಬೇಡ. ನೀವು ಊರಿಗೆ ಹೋಗಿ ವಿಶ್ರಮಿಸಿ, ಬೇಕೆನಿಸಿದಾಗ ಕಂಪನಿಗೆ ಬನ್ನಿ ನಾವೆಲ್ಲಾ ನೋಡಿಕೊಳ್ಳುತ್ತೇವೆ' ಎಂದು ಧೈರ್ಯ ತುಂಬುತ್ತಿದ್ದರು. ಹಾಗೆಯೆ ನೋಡಿಕೊಳ್ಳುತ್ತಿದ್ದರು ಕೂಡ. ಆದರೇನು ಪರಿಸ್ಥಿತಿ ಯಾರ ಕೈಯಲ್ಲಿ? ಮಾಲೀಕರು ಊರಿಗೆ ಹೋಗಿ ಒಂದೆರಡು ದಿನ ಆಗಿರಲಿಕ್ಕಿಲ್ಲ ಮತ್ತೆ ಕಂಪನಿಯಿಂದ 'ಅರ್ಜೆಂಟ್ ಕರೆ'ಗಳು ಬರುತ್ತಿದ್ದವು. ಏನೇನೊ ಸಮಸ್ಯೆಗಳು ಎದುರಾಗಿರುತ್ತಿದ್ದವು. ಗತ್ಯಂತರವಿಲ್ಲ. ಅವನ್ನು ಬಗೆಹರಿಸಲು ಅವರೇ ಹೋಗಬೇಕು ಅವರ ಅನುಭವ, ಪ್ರಸಂಗಾವಧಾನ, ರಂಗನಿಷ್ಠೆಯಿಂದ ಗುಡ್ಡದಂಥ ಸಮಸ್ಯೆಗಳು ಕರಗಿ ಬಿಡುತ್ತಿದ್ದವು. ಇಂಥ ಅನಿಶ್ಚಿತ ಕಠಿಣ ಪರಿಸ್ಥಿತಿಯಲ್ಲಿಯೂ ಮತ್ತೆ ಮೂರು ವರುಷ ಕಂಪನಿ ನಡೆಸಿದರು.

ಕೊನೆಯ ಎರಡು ಮೂರು ವರುಷಗಳಲ್ಲಿ ಕಂಪನಿ ವಿಜಯಪುರ, ಬಳ್ಳಾರಿ, ಹೊಸಪೇಟೆ, ಬೆಳಗಾವಿ, ಚಿಕ್ಕೋಡಿ, ಯರಗಟ್ಟಿ, ಶಿವಮೊಗ್ಗ, ತೀರ್ಥಹಳ್ಳಿ, ಹಾಸನ, ಕಡೂರ, ಚನ್ನರಾಯಪಟ್ಟಣ, ಸಕ್ಕರಾಯಪಟ್ಟಣ, ಮೈಸೂರು ಮುಂತಾದ ಕಡೆಗಳಲ್ಲಿ ನಾಟಕಗಳನ್ನಾಡಿತು. ಸೊಸೆ ಹಾಕಿದ ಸವಾಲು, ಮಂತ್ರಿಯ ಮಗಳು, ಹಳ್ಳಿ ಹುಡುಗಿ ಪ್ಯಾಟಿಗಿ ಬಂದಿತ್ತ, ಭೂಮಿ ತೂಕದ ಹೆಣ್ಣು, ನನ್ನ ಗಂಡನ ಹೆಂಡತಿ, ಕಿವುಡ ಮಾಡಿದ ಕಿತಾಪತಿ, ಚನ್ನಪ್ಪ ಚನ್ನಗೌಡ ನಾಟಕಗಳನ್ನು ಪ್ರದರ್ಶಿಸಿತು. ಒಂದು ಕ್ಯಾಂಪು ಚೆನ್ನಾಗಿ ಆಯಿತೆಂದರೆ, ಮೂರು ಕ್ಯಾಂಪುಗಳಲ್ಲಿ ಕಲೆಕ್ಷನ್ ಇಲ್ಲ. ಕಂಪನಿಯ

ಹಿತೈಷಿಯಾಗಿ ನಿಂತು, ಮಾಲತಿಶ್ರೀ ಮೈಸೂರು, ಕರೀಂಸಾಬ ಮ್ಯಾನೇಜರ್, ಕುಮಾರಸ್ವಾಮಿ ಮುಂತಾದವರು ಸಾಕಷ್ಟು ಪ್ರಯತ್ನ ಮಾಡಿದರೂ ಪ್ರೇಕ್ಷಕರ ಪ್ರೋತ್ಸಾಹ ಅಷ್ಟಕ್ಕಷ್ಟೇ. ಚಿಕ್ಕೋಡಿ ಕ್ಯಾಂಪಿನಲ್ಲಿ ಕಲೆಕ್ಶನ್ ಇಲ್ಲದಾಗ ಪ್ರಮುಖ ನಟಿ ಮಾಲತಿಶ್ರೀ ಮೈಸೂರ ಅವರು ಶಾಲಾ ಮಕ್ಕಳಿಗಾಗಿ ನಾಟಕ ಆಡುವ ಪ್ರಯತ್ನ ಮಾಡಿದರು ವಿದ್ಯಾರ್ಥಿಗಳನ್ನು ರಂಗಭೂಮಿಯತ್ತ ಆಕರ್ಷಿಸುವುದು ಮತ್ತು ಕಂಪನಿಗೂ ಒಂದಿಷ್ಟು ನೆರವು ಹರಿದು ಬರಲಿ ಎಂದು ಶಿಕ್ಷಣಾಧಿಕಾರಿಗಳನ್ನು ಕಂಡು ಒಪ್ಪಿಸಿದ್ದರು. ಅಲ್ಲಿ ಅದು ಯಶಸ್ವಿಯೂ ಆಯಿತು. ಆದರೆ ಮಾಲೀಕರಿಗೆ ಕಂಪನಿಯನ್ನು ಈ ತರಹ ನಡೆಸುವುದು ಬೇಕಾಗಿರಲಿಲ್ಲ. ಆಪತ್ಕಾಲದಲ್ಲಿ ನೆರವು ಕೋರುವುದೇನೂ ತಪ್ಪಲ್ಲ. ಆದರೆ ನಿತ್ಯವೂ ಆಪತ್ಕಾಲವಾದರೆ ಆಸರೆಗೆ ನಿಲ್ಲುವವರು ಯಾರು? ಎಂಬುದು ಅರಿಷಿಣಗೋಡಿಯವರ ಪ್ರಶ್ನೆ. ನಾಟಕದವರು ಗೌರವದಿಂದ ಬದುಕಬೇಕೆಂಬುದು ಅವರ ನಿಲುವಾಗಿತ್ತು.

೨೦೦೩ – ಕಂಪನಿ ಕಡೂರ ಹತ್ತಿರದ ಸಕ್ರಾಯಪಟ್ಟಣದಲ್ಲಿ ಬೀಡು ಬಿಟ್ಟಿತ್ತು. ಒಂದು ದಿನ ಅರಿಷೋಣಗೋಡಿಯವರು ಕಲಾವಿದರನ್ನೆಲ್ಲ ಕರೆದು 'ನನಗಂತೂ ಕಂಪನಿ ನಡೆಸಲು ಆಸಕ್ತಿ ಇಲ್ಲ. ಮೊದಲಿನ ಶಕ್ತಿಯೂ ಉಳಿದಿಲ್ಲ. ನಿಮ್ಮ ನಿಮ್ಮ ಸಂಬಳ ತೆಗೆದುಕೊಂಡು ನಿಮ್ಮ ಮುಂದಿನ ದಾರಿಯತ್ತ ಹೆಜ್ಜೆ ಹಾಕಿರಿ. ನಾನು ಕಮತಗಿಗೆ ಹೋಗುವೆ' ಎಂದು ಹೇಳಿದರು. ಕಂಪನಿಯಲ್ಲಿದ್ದ ಪ್ರಮುಖ ನಟರು 'ನೀವು ಕಂಪನಿಯ ಸಲಕರಣೆಗಳನ್ನು ಕೊಟ್ಟರೆ, ನಿಮ್ಮ ಹೆಸರಿನಲ್ಲಿಯೇ ಕಂಪನಿ ನಡೆಸುತ್ತೇವೆ. ನಮ್ಮ ಬದುಕಿಗೂ ದಾರಿಯಾಗುತ್ತದೆ' ಎಂದು ಕೇಳಿಕೊಂಡರು. ಅರಿಷಿಣಗೋಡಿಯವರು 'ಹಾಗಾದರೆ ನೀವೇ ಮಾಲೀಕರು ನೀವೇ ಕಲಾವಿದರು. ನನ್ನ ಪಾತ್ರವೇನೂ ಇಲ್ಲ' ಎಂದು ಕಂಪನಿಯ ಹೊಣೆಗಾರಿಕೆಯನ್ನು ಮುಂದೆ ಬಂದ ನಟರ ಹೆಗಲಿಗೆ ವರ್ಗಾಯಿಸಿದರು. ವ್ಯವಹಾರವನ್ನು ಮುಗಿಸಿ ಊರಿಗೆ ಮರಳಿದರು. ಇದಾದ ಕೆಲ ದಿನಗಳಲ್ಲಿಯೇ ಅರಿಷಿಣಗೋಡಿಯವರಿಗೆ ಪೊಲೀಸರಿಂದ ಕರೆ ಬಂದಿತು. ಕಾರಣವೇನೆಂದರೆ 'ಮಾಲೀಕರು ಸಂಬಳ ಕೊಟ್ಟಿಲ್ಲ'ವೆಂದು ಕೆಲ ಕಲಾವಿದರು ಪೊಲೀಸರಿಗೆ 'ಕಂಪ್ಲೇಂಟ್' ಮಾಡಿದ್ದರು ಇದು ಕೇಳಿ ಅರಿಷಿಣಗೋಡಿಯವರಿಗೆ ಆಶ್ಚರ್ಯವಾಯಿತು. 'ಕಲಾವಿದರನ್ನು ನಂಬಿ ಕೆಟ್ಟೆ' ಎಂದು ಕ್ಯಾಂಪಿಗೆ ಹೋಗಿ ಕಲಾವಿದರನ್ನೆಲ್ಲ ಕರೆದು, ಅವರವರ ಸಂಬಳ ಅವರ ಕೈಗೆ ಹಾಕಿ, ಯಾರೋ ಮಾಡಿದ ತಪ್ಪಿಗೆ ತಾವು ಕೈಯಿಂದ ಹಣ ಸುರಿದರು. ಕಲಾವಿದರ ಜೊತೆಗೆ ಜಗಳ, ಕೋರ್ಟು ಕಚೇರಿ ಎಂದು ಅಲೆಯುವುದು ಅವರಿಗೆ ಬೇಕಾಗಿರಲಿಲ್ಲ. ಇದೂ ಒಂದು ತರಹದ 'ರಂಗಸೇವೆ' ಎಂದು ಸಮಾಧಾನಚಿತ್ತದಿಂದಲೇ ಕಲಾವಿದರನ್ನು ಬೀಳ್ಕೊಂಡರು 'ಕೊನೆಗೂ ಋಣಮುಕ್ತನಾದೆ' ಎಂದು ನಿಟ್ಟುಸಿರು ಬಿಟ್ಟು, ಊರಿಗೆ ಹೊರಟರು. ಇಲ್ಲಿಗೆ 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ' ಕಂಪನಿಯ ಬಾಗಿಲು ಮುಚ್ಚಿತು.

'ಅರಿಷಿಣಗೋಡಿಯವರು ನಾಟಕ ಕಂಪನಿ ಮುಚ್ಚಿದರು' ಎಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅದನ್ನು ಓದಿ ರಂಗಾಸಕ್ತರು 'ಹೀಗಾಗಬಾರದಿತ್ತು' ಎಂದು ಮರುಗಿದರು.

# ೮. ಸಮಾರೋಪ

ರಂಗಭೂಮಿಗೆ ಸಂಬಂಧಿಸಿದಂತೆ ಬಿ.ಆರ್. ಅರಿಷಿಣಗೋಡಿ ಅವರದು ಬಹುಮುಖ ಸೇವೆ. ಜೀವನದಲ್ಲಿ ಎದುರಾದ ಒಂದು ಅಹಿತಕರ ಘಟನೆ ಕಾರಣವಾಗಿ, ಅದರಿಂದ ಪ್ರೇರಿತರಾಗಿ ಅವರು ನಾಟಕ ಬರೆದರು. ಬರೆದ ನಾಟಕ ಆಡಲು ನಟರಾದರು. ಮುಂದೆ ನಾಟಕ ಕಂಪನಿ ಕಟ್ಟಿ ಒಡೆಯರಾದರು. ಜೀವನ ಮತ್ತು ನಾಟಕ ಎರಡನ್ನು ತೂಗಿಸಿಕೊಂಡು ನಡೆದರು. ಅವರು ದುಡುಕಿ ತಪ್ಪು ಹೆಜ್ಜೆ ಇಟ್ಟದ್ದು ಕಡಿಮೆ.

೧೯೬೧ರಿಂದ ೧೯೭೨ರವರೆಗೆ ನಾಟಕಗಳಲ್ಲಿ ಪ್ರಮುಖ ನಟರಾಗಿ ಅಭಿನಯಿಸಿದರು. ೧೯೮೨ರವರೆಗೆ ನಾಟಕಗಳನ್ನು ಬರೆದು ನಿರ್ದೇಶಿಸಿದರು 'ಬಸ್ ಕಂಡಕ್ಟರ್' ಇವರ ಅತ್ಯಂತ ಜನಪ್ರಿಯ ನಾಟಕ. ಇವತ್ತಿಗೂ ಚಲಾವಣೆಯಲ್ಲಿರುವ ನಾಟಕ. ೨೦೦೨ರವರೆಗೆ ಮಾಲೀಕರಾಗಿ ಕಂಪನಿಯನ್ನು ದಕ್ಷ ರೀತಿಯಿಂದ ನಡೆಸಿದರು. ೨೦೦೩ರಿಂದ ತಮಗೆ ಬದುಕು ಕೊಟ್ಟ, ಭವಿಷ್ಯ ರೂಪಿಸಿದ ಕಮತಗಿ ಎಂಬ ಊರಲ್ಲಿಯೇ ತಮ್ಮ ಕುಟುಂಬದ ಸದಸ್ಯರೊಂದಿಗೆ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಬಿ.ಆರ್. ಅರಿಷಿಣಗೋಡಿ ಅವರದು ಹಿತಮಿತವಾದ ಭಾಷೆ, ಸಮಾಧಾನ ಚಿತ್ತ, ದೂರದಷ್ಟಿ, ಆವೇಶವಿಲ್ಲದ ಸಮತೂಕದ ನಿರ್ಣಯ. ದಕ್ಷವಾದ ಆಡಳಿತ, ರಂಗಕಲೆಯ ಬಗ್ಗೆ ಪ್ರೀತಿ, ಭಕ್ತಿ ಪ್ರೇಕ್ಷಕರ ಬಗ್ಗೆ ಗೌರವ. ಕಲಾವಿದರ ಜೊತೆಗೆ ಬೆರೆತು ಬಾಳುವ ದೊಡ್ಡ ಗುಣ. ಆಡಂಬರದ ದುಬಾರಿ ಜೀವನ ಅವರಿಗೆ ಒಗ್ಗದು. ಸಂಕೋಚದ ಸ್ವಭಾವದಿಂದಾಗಿ ಸಭೆ, ಸಮಾರಂಭಗಳಿಂದ ಬಹಳ ದೂರ. ಪ್ರಚಾರದ ಹಿಂದೆ ಬಿದ್ದವರಲ್ಲ. ಅಖಂಡ ನಲವತ್ತು ವರುಷ ರಂಗಭೂಮಿ ಅವರಿಗೆ ಯಜ್ಞಭೂಮಿಯಾಗಿತ್ತು. ಅವರ ರಂಗಸೇವೆಗೆ ಅನೇಕ ಗೌರವ ಪುರಸ್ಕಾರಗಳು, ಪ್ರಶಸ್ತಿಗಳು ದೊರೆತಿವೆ. ಅವುಗಳಲ್ಲಿ ಪ್ರತಿಷ್ಠಿತ 'ಗುಬ್ಬಿ ವೀರಣ್ಣ ಪ್ರಶಸ್ತಿ'ಯೂ ಒಂದು. ಇವತ್ತಿಗೂ ಕಲಾವಿದರು, ಪ್ರೇಕ್ಷಕರು ಅವರನ್ನು 'ವೃತ್ತಿ ರಂಗಭೂಮಿಯ ಅಜಾತ ಶತ್ರು' ಎಂದೇ ಕರೆಯುತ್ತಾರೆ. ನಿಜಕ್ಕೂ ವೃತ್ತಿರಂಗಭೂಮಿ ಕಲಾವಿದರಿಗೆಲ್ಲ ಅವರದು ಮಾದರಿ ಬದುಕು.

*

## ಅನುಬಂಧ : 1

**ಜೀವನ**

ಜನನ – ೨೪ ಮಾರ್ಚ್ ೧೯೩೪

ತಂದೆ – ರಂಗಪ್ಪ

ತಾಯಿ – ಕಾಶವ್ವ

ಹುಟ್ಟೂರು – ಬೆನಕಟ್ಟಿ

ನೆಲೆಸಿದ ಊರು – ಕಮತಗಿ

ಅಣ್ಣಂದಿರು – ಗಿರಿಯಪ್ಪ, ರಾಯಪ್ಪ

ಅಕ್ಕ – ಲಕ್ಷ್ಮೀಬಾಯಿ

ಶಿಕ್ಷಣ – ಎಫ್.ವಾಯ್. ಸಾಯನ್ಸ್ (೧೯೫೬)

ಹೆಂಡತಿ – ರೇಣುಕಾ

ಮಕ್ಕಳು – ವೆಂಕಟೇಶ (೧೯೬೮)<br>ಶಶಿಧರ (೧೯೭೦)<br>ಶ್ರೀಧರ (೧೯೭೩)

## ಅನುಬಂಧ – 2

**ಅರಿಷಿಣಗೋಡಿಯವರಿಗೆ ಸಂದ ಸನ್ಮಾನ ಮತ್ತು ಪ್ರಶಸ್ತಿಗಳು**

* ೩–೫–೧೯೭೦, ಹುಬ್ಬಳ್ಳಿ – ಧಾರವಾಡ ಮಹಾನಗರ ನಾಗರಿಕರಿಂದ ಸನ್ಮಾನ ಪತ್ರ 'ನಾಟ್ಯ ಕಲಾಭೂಷಣ' ಬಿರುದು.
* ೨೯–೯–೧೯೭೭, ಗದಗ ವೀರೇಶ್ವರ ಪುಣ್ಯಾಶ್ರಮದಲ್ಲಿ ಪಂ. ಉಭಯಗಾನ ವಿಶಾರದ ಡಾ॥ ಪುಟ್ಟರಾಜ ಗವಾಯಿಗಳಿಂದ ಸನ್ಮಾನ 'ನಾಟ್ಯ ಕಲಾತಿಲಕ' ಬಿರುದು.
* ೬–೬–೧೯೭೬, ಅರಿಸಿಕೆರೆ ಕ್ಯಾಂಪಿನಲ್ಲಿ ಸಾಯಿನಾಥ ಮಂದಿರದಲ್ಲಿ ಸನ್ಮಾನ 'ನಾಟ್ಯ ಕಲಾ ಶ್ರೇಷ್ಠ' ಬಿರುದು.
* ೨–೧೨–೧೯೮೮, ತುಮಕೂರ ಕ್ಯಾಂಪಿನಲ್ಲಿ, ೨೨ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಡಾ॥ ಗುಬ್ಬಿ ವೀರಣ್ಣ ಸ್ಮರಣ ದಿನೋತ್ಸವದ ಸಂದರ್ಭದಲ್ಲಿ ಸನ್ಮಾನ ಪತ್ರ 'ನಾಟಕ ಕಲಾ ಪ್ರವೀಣ' ಬಿರುದು.
* ೧೧–೧೨–೧೯೮೮, ಜೇವರಗಿ ಕ್ಯಾಂಪಿನಲ್ಲಿ, ಶ್ರೀ ಷಣ್ಮುಖ ಶಿವಯೋಗಿ ಮಠದಲ್ಲಿ ಶ್ರೀ ಶಾಂತಲಿಂಗ ಮಹಾಸ್ವಾಮಿಗಳಿಂದ ಸನ್ಮಾನ ಪತ್ರ 'ಕಲಾರಶ್ಮಿ' ಬಿರುದು.

* ೧೧-೧೧-೧೯೯೨, ಅಥಣಿ ಕ್ಯಾಂಪ್, ಲಿಂ. ಮುರುಘೇಂದ್ರ ಶಿವಯೋಗಿಗಳ ಗಚ್ಚಿನ ಮಠದಲ್ಲಿ ಶ್ರೀ ಮ.ನಿ.ಪ್ರ. ಚೆನ್ನಬಸವ ಮಹಾಸ್ವಾಮಿಗಳಿಂದ ಸನ್ಮಾನ 'ಭಕ್ತ ಕಲಾಭೂಷಣ' ಬಿರುದು.
* ೧೯೯೮, ಕರ್ನಾಟಕ ರಾಜ್ಯೋತ್ಸವದ ಪ್ರಶಸ್ತಿ, ಮುಖ್ಯಮಂತ್ರಿ ಜೆ.ಎಚ್. ಪಟೇಲ್‌ರಿಂದ ರವೀಂದ್ರ ಕಲಾಕ್ಷೇತ್ರದಲ್ಲಿ.
* ೮-೬-೧೯೯೮, ಕನ್ನಡ ಪತ್ರಿಕಾ ಕಲಾ ಸಂಸ್ಕೃತಿ ವೇದಿಕೆ, ಬೆಂಗಳೂರು ಇವರಿಂದ 'ಪ್ರತಿಭಾಶ್ರೀ' ಪ್ರಶಸ್ತಿ.
* ೨೦೦೩, ಗುಬ್ಬಿ ವೀರಣ್ಣ ಪ್ರಶಸ್ತಿ, ಕರ್ನಾಟಕ ಸರಕಾರ.
* ೨೦೧೩, ಹುನಗುಂದ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೌರವ.

## ಅನುಬಂಧ – 3

**ಅರಿಷಿಣಗೋಡಿಯವರು ಬರೆದ ನಾಟಕಗಳು:**

ಲಂಚಸಾಮ್ರಾಜ್ಯ (೧೯೬೧)

ಹೆಣ್ಣು ಮಗಳು (೧೯೬೧)

ಆಸ್ತಿಯ ಪಾಲು (೧೯೬೧)

ಅನುರಾಧಾ (೧೯೬೧)

ಬಸ್ ಕಂಡಕ್ಟರ್ (೧೯೬೫)

ಸೈನಿಕನ ಸಹೋದರಿ (೧೯೬೫)

ಕಣ್ಣಿದ್ದೂ ಕುರುಡ (೧೯೬೮)

ಇಲ್ಲಿಗೆ ಬಂತೋ ಸಂಗಯ್ಯ (೧೯೬೮)

ಗರೀಬಿ ಹಟಾವೋ (೧೯೭೨)

ಗಂಡೆದೆಯ ಗೌರಿ (೧೯೭೮)

ಬಡವರೂ ನಗಬೇಕು (೧೯೭೮)

ಸಂಗ್ಯಾ-ಬಾಳ್ಯಾ (೧೯೮೫)

ನಕಲಿ ಸಂಪನ್ನರು (೧೯೮೬)

ಪ್ರಕಟಿತ ನಾಟಕಗಳು :

ಬಸ್ ಕಂಡಕ್ಟರ್ – ೧೯೭೫

ಹೆಣ್ಣು ಮಗಳು – ೧೯೭೫

ಕಣ್ಣಿದ್ದೂ ಕುರುಡ – ೧೯೭೫

ಇಲ್ಲಿಗೆ ಬಂತೋ ಸಂಗಯ್ಯ – ೧೯೭೫

ಸೈನಿಕನ ಸಹೋದರಿ – ೧೯೭೫

## ಅನುಬಂಧ – 4

**ಅರಿಷಿಣಗೋಡಿ ಅವರು ಅಭಿನಯಿಸಿದ ಪಾತ್ರಗಳು :**

| ನಾಟಕ | ಪಾತ್ರ |
|---|---|
| ೧. ಲಂಚಸಾಮ್ರಾಜ್ಯ | – ಶಿಲಾಧರ, ರಮೇಶ, ನಿಂಗಪ್ಪ (ಶಿಲಾಧರನ ತಂದೆ) |
| ೨. ಹೆಣ್ಣು ಮಗಳು | – ಗಿರೀಶ (ನಾಟಕ), ಸೋಮೇಶ (ತಂದೆ) |
| ೩. ಗರೀಬಿ ಹಟಾವೋ | – ಗುರುಬಸಪ್ಪ ಶೆಟ್ಟಿ (ಹಾಸ್ಯ ಪಾತ್ರ), ರಾಮು |
| ೪. ಸೈನಿಕನ ಸಹೋದರಿ | – ಸಂಜೀವ (ಹಾಸ್ಯ), ಲಿಂಗಣ್ಣ ಶೆಟ್ಟರು |
| ೫. ಇಲ್ಲಿಗೆ ಬಂತೋ ಸಂಗಯ್ಯ | – ಆರ್.ಎಂ.ಪಿ. ಡಾಕ್ಟರ್ |
| ೬. ಕೊಂಡು ತಂದ ಗಂಡ | – ಮಾಣಿ (ಹಾಸ್ಯ ಪಾತ್ರ) |
| ೭. ಬಸ್ ಕಂಡಕ್ಟರ್ | – ಪ್ರದೀಪ (ನಾಯಕ), ರಂಗಣ್ಣ (ತಂದೆ ಪಾತ್ರ) ದೇವಣ್ಣ (ಖಾನಾವಳಿ ಒಡೆಯ), ರಾಜು ಕಂಡಕ್ಟರ್ |

## ಅನುಬಂಧ – 5

**ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ**

| | | |
|---|---|---|
| ಆರಂಭದ ವರ್ಷ | – | ೩೧–೧೨–೧೯೬೧, ಬಾಗಲಕೋಟೆ ಕ್ಯಾಂಪ್ |
| ಮೊದಲ ನಾಟಕ | – | ಲಂಚ ಸಾಮ್ರಾಜ್ಯ |
| ಸಂಚರಿಸಿದ ಸ್ಥಳಗಳು | – | ಕೆರೂರ, ಇಂಡಿ, ಮುಧೋಳ, ಗೊಡಚಿ |
| | | * ಮೊದಲನೆಯ ಬ್ರಾಂಚ್ ಕಂಪನಿ (ಶ್ರೀ ಹೊಳೆಹುಚ್ಚೇಶ್ವರ ನಾಟ್ಯಸಂಘ, ಕಮತಗಿ) |

ಆರಂಭವಾದ ವರ್ಷ – ೧೯೬೬–೧೯೭೭

ಕ್ಯಾಂಪ್ – ರಬಕವಿ

* ಎರಡನೆಯ ಬ್ರಾಂಚ್ ಕಂಪನಿ

ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ

ಆರಂಭವಾದ ವರ್ಷ – ೧೯೭೭

ಕ್ಯಾಂಪ್ – ಗಂಗಾವತಿ

* ಮೂರನೆಯ ಬ್ರಾಂಚ್ ಕಂಪನಿ

ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ

ಆರಂಭವಾದ ವರ್ಷ – ೧೯೮೪

ಕ್ಯಾಂಪ್ – ಮೂಡಿಗೆರೆ

## ಅನುಬಂಧ – 6

**ಕಮತಗಿ ಕಂಪನಿಯ ಜಯಭೇರಿ ಬಾರಿಸಿದ ನಾಟಕಗಳು :**

೧೯೬೧ ರಿಂದ ೧೯೬೫ ರವರೆಗೆ ಲಂಚಸಾಮ್ರಾಜ್ಯ, ಹೆಣ್ಣು ಮಗಳು

೧೯೬೫ ರಿಂದ ಬಸ್ ಕಂಡಕ್ಟರ್, ಸೈನಿಕನ ಸಹೋದರಿ

೧೯೭೨ ರಿಂದ ಗರೀಬಿ ಹಟಾವೋ

೧೯೯೫ ರಿಂದ ೯೮ ರವರೆಗೆ ಸೊಸೆ ಹಾಕಿದ ಸವಾಲು

–ಟಿ.ಕೆ. ಮಹಮ್ಮದ ಅಲಿ

೨೦೦೦ರಿಂದ ಸೊಸೆ ಹಾಕಿದ ಸವಾಲು, ಮಂತ್ರಿ ಮಗಳು, ಹಸಿರು ಬಳೆ, ನನ್ನ ಗಂಡನ ಹೆಂಡತಿ, ಕಿವುಡ ಮಾಡಿದ ಕಿತಾಪತಿ

**ಕಮತಗಿ ಕಂಪನಿ ಅಭಿನಯಿಸಿದ ನಾಟಕಗಳು ಮತ್ತು ನಾಟಕಕಾರರು :**

೧೯೬೧ರಿಂದ ಲಂಚಸಾಮ್ರಾಜ್ಯ, ಹೆಣ್ಣು ಮಗಳು – ಅರಿಷಿಣಗೋಡಿ

೧೯೬೫ ರಿಂದ ಬಸ್ ಕಂಡಕ್ಟರ್, ಸೈನಿಕನ ಸಹೋದರಿ – ಅರಿಷಿಣಗೋಡಿ

೧೯೬೮ರಿಂದ ಇಲ್ಲಿಗೆ ಬಂತೋ ಸಂಗಯ್ಯ, ಕಣ್ಣಿದ್ದೂ ಕುರುಡ – ಅರಿಷಿಣಗೋಡಿ

೧೯೭೨ ರಿಂದ ಪ್ರಜಾ ಸರಕಾರ, ಸತಿಪತಿ – ಮಹಾಂತೇಶ ಶಾಸ್ತ್ರಿ

೧೯೭೫ ರಿಂದ ದೇವರಿಲ್ಲದ ಗುಡಿ – ಮಹಾಂತೇಶಶಾಸ್ತ್ರಿ

೧೯೭೮ ರಿಂದ ಗಂಡೆದೆಯ ಗೌರಿ, ಬಡವರೂ ನಗಬೇಕು – ಅರಿಷಿಣಗೋಡಿ

ಸಿಂಧೂರ ಲಕ್ಷ್ಮಣ – ಎನ್.ಎಸ್. ಜೋಶಿ

೧೯೮೦ ರಿಂದ ರೀತಿ ತಪ್ಪಿದರೂ ನೀತಿ ತಪ್ಪಿಲ್ಲ, ಪಾಪದ ದೇಹ ಪುಣ್ಯದ ಜೀವ
ನನ್ನ ಗಂಡನ ಹೆಂಡತಿ,
ಗೌರಿ ಹೋದಳು ಗಂಗೆ ಬಂದಳು – ಎಸ್.ಎಂ. ಖೇಡಗಿ
ಶ್ರೀ ಹೊಳೆಹುಚ್ಚೇಶ್ವರ ಮಹಾತ್ಮೆ – ಎನ್.ಎಸ್. ಜೋಶಿ
ಗಂಡೆದೆಯ ಗೌರಿ – ಅರಿಷಿಣಗೋಡಿ

೧೯೮೧ ರಿಂದ ಗೆದ್ದವರು ಯಾರು, ಕೊಂಡು ತಂದ ಗಂಡ
– ಎಚ್.ಎನ್. ಹೂಗಾರ

೧೯೮೫ ರಿಂದ ಸಂಗ್ಯಾ – ಬಾಳ್ಯ – ಅರಿಷಿಣಗೋಡಿ

೧೯೮೬ ರಿಂದ ನಕಲಿ ಸಂಪನ್ನರು – ಅರಿಷಿಣಗೋಡಿ
ಧರ್ಮದೇವತೆ – ಮಾಂಡ್ರೆ
ಸಂಗೊಳ್ಳಿರಾಯಣ್ಣ – ಎಸ್. ಎಂ. ಖೇಡಗಿ
ಎಚ್ಚರ ತಂಗಿ ಎಚ್ಚರ – ನಾ.ದೆ. ನರಸಿಂಹಮೂರ್ತಿ
ಮುದುಕನ ಮದುವೆ – ಪಿ.ಬಿ. ಧುತ್ತರಗಿ
ಗರಗದ ಮಡಿವಾಳೇಶ್ವರ ಮಹಾತ್ಮೆ – ಎಸ್.ಎಂ. ಖೇಡಗಿ
ಏರಿದ ನಂಜು – ಮಹಾಂತೇಶ ಶಾಸ್ತ್ರಿ
ಕೈಲಾಗದ ಗಂಡ ಕೈಲಾಸ ಕಂಡ – ಎಸ್.ಎಂ. ಕಣವಿ
ಭೂಮಿ ತೂಕದ ಹೆಣ್ಣು, ತವರು ಬಿಟ್ಟ ತಂಗಿ – ಕೆ. ಪ್ರಕಾಶ

**ಕಮತಗಿ ಕಂಪನಿಯ ನಟರು:**

೧. ಮಹಮ್ಮದ್ ಕೋಳಿ, ಕಮತಗಿ
೨. ಶಿವಲಿಂಗಪ್ಪ ಹಳ್ಳದ, ಕಮತಗಿ
೩. ಈಶ್ವರ ಗೋಂದಕರ, ಕಮತಗಿ
೪. ಬಸಯ್ಯ, ಪಟ್ಟದಕಲ್ಲು
೫. ಯಲ್ಲಪ್ಪ ರಡ್ಡೇರ ತಿಮ್ಮಾಪುರ
೬. ಗುಡುಸಾಬ, ಇಳಕಲ್ಲ
೭. ಅಬ್ಬಾಸಲಿ ಅಳ್ವಂಡಿ, ಇಳಕಲ್ಲ
೮. ಕೀರ್ತೆಪ್ಪ ಕೊಪ್ಪರದ
೯. ಸೋಮಯ್ಯ, ಲಕ್ಷ್ಮೇಶ್ವರ
೧೦. ರಾಮನಗೌಡ, ಕಟಗೇರಿ
೧೧. ರಹಿಮಾನಸಾಬ, ಶಿರಹಟ್ಟಿ
೧೨. ಬಸಪ್ಪ ಕಲ್ಲೂರ
೧೩. ಸುರೇಶ ಪಾಟೀಲ, ತೋಡಿಹಾಳ
೧೪. ಸೋಮಣ್ಣ, ಹೊಳಗುಂದಿ
೧೫. ರಾಮಗೋಪಾಲ, ಕೋವಾಡ (ಚಿತ್ರನಟ, ಕಂಪನಿಯಿಂದ ಚಿತ್ರರಂಗಕ್ಕೆ ಹೋದವರು)
೧೬. ಮಾರುತಿ ತೋರಣಗಟ್ಟಿ
೧೭. ಮೃತ್ಯುಂಜಯಸ್ವಾಮಿ
೧೮. ನಿಂಗನಗೌಡ ಅಂಬಲಿ
೧೯. ದೇವರಾಜ ಅಂಬಲಿ
೨೦. ಪರಮೇಶಿ, ಗದಗ
೨೧. ರಾಮಣ್ಣ, ಐನಾಪುರ
೨೨. ಪಾಂಡುರಂಗ, ಗೋಕರ್ಣ
೨೩. ಗುರುಸಿದ್ದಯ್ಯ, ಇದ್ದಲಗಿ
೨೪. ರಾಚಯ್ಯ ಗುಳೇದಗುಡ್ಡ

೨೫. ಶಂಕ್ರಯ್ಯ ರಕ್ಕಸಗಿ
೨೬. ಸಾರಂಗಯ್ಯ ಐಹೊಳೆ
೨೭. ಉಳಿವೆಪ್ಪ ಬಡಿಗೇರ
೨೮. ಬಿ. ಸಣ್ಣಾಚಾರಿ
೨೯. ಮರಿಯಣ್ಣ ಹೊಸಪೇಟೆ
೩೦. ಕೆ. ಬಾಲಚಂದ್ರಗೌಡ
೩೧. ಅಯ್ಯನಗೌಡ ಶಾರಗುಪ್ಪಿ
೩೨. ಬಾಬಣ್ಣ ಗೋಕಾಕ
೩೩. ರುದ್ರಪ್ಪ ಮಾಸ್ತರ, ಮಲ್ಲಗಟ್ಟಿ
೩೪. ಶಿವಾನಂದ, ಬಿದರಕೋಟೆ
೩೫. ಗಂಗಾಧರ ಗುಬ್ಬಿ
೩೬. ಪರಮೇಶಿ, ಸಿರ್ಸಿ
೩೭. ವಿಜಯಶೇಖರ ಆನೆಗುಂದಿ
೩೮. ಯಮನಪ್ಪ ಸಾಸನೂರ
೩೯. ಅಮ್ಮಣಗಿ ದೇಸಾಯಿ
೪೦. ಈಶ್ವರ ಶಿಗ್ಗಲಿ
೪೧. ಮರಿಯಣ್ಣ ಮದ್ದೂರ
೪೨. ಮಂಜುನಾಥ, ಕಮಟಾ
೪೩. ಅಶೋಕಶೆಟ್ರ, ಮಂಗಳೂರ
೪೪. ರಾಮಣ್ಣ ರಿತ್ತಿ
೪೫. ಎಂ. ದೇವರಾಜ, ಅರಸಿಕೆರೆ
೪೬. ಜಗದೀಶ, ದಾವಣಗೆರೆ
೪೭. ದೇಸಾಯಿ, ಸಿಂಧನೂರ
೪೮. ಬಾಣಪ್ಪ, ಕಿತ್ತೂರ
೪೯. ಸಂಗಪ್ಪ, ಕಡಿವಾಲ
೫೦. ಮಾರ್ತಾಂಡ ಗವಾಯಿ, ಗಂಗಾವತಿ
೫೧. ಮಾಣಿಕರಾವ್ ಗವಾಯಿ, ಗಂಗಾವತಿ
೫೨. ಕುಬೇರಪ್ಪ ಗವಾಯಿ, ಗಂಗಾವತಿ
೫೩. ತಯ್ಯಬಖಾನ, ಯಡಹಳ್ಳಿ
೫೪. ನಾಗೇಶ, ಮೈಸೂರ
೫೫. ಸಿದ್ಧರಾಜ, ಕಲ್ಲೂರ
೫೬. ಮಲ್ಲೇಶಿ, ಕಲ್ಲೂರ
೫೭. ಸಿದ್ದಣ್ಣ, ಮೈಂದರಗಿ
೫೮. ವಿರೂಪಾಕ್ಷಪ್ಪ, ಮೈಂದರಗಿ
೫೯. ವೀರಭದ್ರಪ್ಪ, ಮಂಗಳಗುಡ್ಡ
೬೦. ಬಸವರಾಜ ಮದರಿ
೬೧. ಕೆ. ಪ್ರಕಾಶ
೬೨. ಕೆ. ಶಂಕ್ರಯ್ಯಸ್ವಾಮಿ
೬೩. ವೆಂಕಟೇಶ ಹೆಗಡೆ
೬೪. ಜಯಣ್ಣ ಹೊಸಮನಿ
೬೫. ಶೇಖರ ಹೆಗಡೆ
೬೬. ಕುಮಾರ, ಸಿರ್ಸಿ
೬೭. ಕೃಷ್ಣಮೂರ್ತಿ, ಹಾಸನ
೬೮. ವಿರೂಪಾಕ್ಷಪ್ಪ, ಗದಗ
೬೯. ತಿಪ್ಪೇಶಿ ಕತಿಗಾಲ
೭೦. ಸದಾ, ಮಂಗಳೂರ
೭೧. ಸಂಗಮೇಶ, ಬ್ಯಾಡಗಿ
೭೨. ಕೊಟ್ರಯ್ಯ, ಬ್ಯಾಡಗಿ
೭೩. ಗಿರಿ, ದಾವಣಗೆರೆ
೭೪. ಚಿಕ್ಕರೆಡ್ಡಿ, ಹಂಚಿನಾಳ
೭೫. ಹನಮಂತಪ್ಪ, ಚಿಲಕಾರಗಿ
೭೬. ನಾಗರಾಜ, ಆಲೂರ
೭೭. ಪಂಚಾಕ್ಷರಿ, ಬನಹಟ್ಟಿ
೭೮. ಶ್ಯಾಮ, ಭೋಸಲೆ
೭೯. ಪ್ರಶಾಂತ ಜೋಶಿ
೮೦. ರಾಜು, ತಾಳಿಕೋಟೆ
೮೧. ವಿಜಯ, ತಾಳಿಕೋಟೆ
೮೨. ಕುಮಾರಸ್ವಾಮಿ
೮೩. ಉಮೇಶ, ಕುಕನೂರ
೮೪. ಬಾಬು, ಕುಕನೂರ
೮೫. ಅಣ್ಣಪ್ಪ ಕಟಗೇರಿ, ಬೆನಕಟ್ಟಿ
೮೬. ಕಾಳಪ್ಪ ಪತ್ತಾರ (ಬಡಿಗೇರ)

## ಅನುಬಂಧ – 8

**ಕಮತಗಿ ಕಂಪನಿಯ ನಟಿಯರು:**

೧. ಪ್ರಮೀಳಾಬಾಯಿ, ಗುಡೂರ
೨. ಶಾಂತಾಬಾಯಿ, ಇಳಕಲ್
೩. ನೀಲಮ್ಮ, ಬಾಗಲಕೋಟೆ
೪. ಮೆಹಬೂಬಿ ನೂರಜಹಾನ್, ಗದಗ
೫. ಹಸನಬೇಗಂ, ಬಾಗಲಕೊಟೆ
೬. ಮಮತಾಜ್, ಗುಡೂರ
೭. ಲೋಲಾ, ಬೆಂಗಳೂರ
೮. ಬಸವಣ್ಣೆವ್ವ, ಗದಗ
೯. ಸುಲೋಚನಾ, ಇಳಕಲ್
೧೦. ಲಲಿತಾ, ಕೋದಂಡ
೧೧. ಮೋಹಿನಿ, ಬೆಂಗಳೂರು
೧೨. ಮಾಲತಿಶ್ರೀ ಮೈಸೂರು
 (ಚಲನಚಿತ್ರ, ಟಿ.ವಿ., ರಂಗನಟಿ)
೧೩. ಸೋಮಕ್ಕ, ಕುಸಬಿ
೧೪. ಇಂದುಮತಿ, ದಾವಣಗೆರೆ
೧೫. ದೇವಕಿ, ದಾವಣಗೆರೆ
೧೬. ಜಯಾ, ರಿತ್ತಿ
೧೭. ಲಲಿತಾ, ದಾವಣಗೆರೆ
೧೮. ರಾಜಮ್ಮ, ತುಮಕೂರು
೧೯. ಶಾಂತಾ ಮಾಲ್ವಿ
೨೦. ಕೆ. ಜಯಲಕ್ಷ್ಮಿ
 (ಚಿತ್ರನಟಿ, ಕಂಪನಿಯಿಂದ
 ಚಿತ್ರರಂಗಕ್ಕೆ ಹೋದವರು)
೨೧. ಲೋಲಾಕ್ಷಿ, ಮದ್ದೂರ
೨೨. ಪದ್ಮಕ್ಕ ಖಾನಸಾಬ, ಕಲ್ಲೂರ
೨೩. ಕುಂದಾಪುರ ಸುಮಿತ್ರಾಬಾಯಿ
೨೪. ಚಂಪಾಬಾಯಿ ಪುರಿ, ಗದಗ
೨೫. ಸುಶೀಲಾ, ಕುಂದಾಪುರ
೨೬. ಶೀಲಾಬಾಯಿ, ಯಲ್ಲಾಪುರ
೨೭. ಶೋಭಾ, ಗದಗ
೨೮. ಗಾಯಿತ್ರಿ, ಗದಗ
೨೯. ಶಶಿಪ್ರಭಾ, ಬೆಂಗಳೂರ
೩೦. ಮೀನಾಕ್ಷಿ, ದಾವಣಗೆರೆ
೩೧. ಪಾರ್ವತಮ್ಮ, ದಾವಣಗೆರೆ
೩೨. ಕೆ. ಮಾಲಾ
೩೩. ಪ್ರೇಮಾ ಹೊಸಮನಿ
೩೪. ಬಾಬಿ, ಬೆಂಗಳೂರು
೩೫. ಪ್ರಿಯಾ, ದೇವದುರ್ಗ
೩೬. ಮಂಗಳಾ, ಶಿಕಾರಿಪುರ
೩೭. ಹೇಮಾ, ಗದಗ
೩೮. ಸರ್ವಮಂಗಳಾ
೩೯. ವಿಶಾಲ, ರಾಮದುರ್ಗ
೪೦. ಲೀಲಾ, ಮೈಸೂರ
೪೧. ಪುಷ್ಪಾ, ಹೂವಿನಹಡಗಲಿ
೪೨. ವಸುಂಧರಾ, ದಾವಣಗೆರೆ
೪೩. ಅರುಣಾ, ಸಿರ್ಸಿ
೪೪. ವಸಂತಾ, ಶಿರಹಟ್ಟಿ
೪೫. ವಸಂತಾ, ಹಾಸನ
೪೬. ಜ್ಯೋತಿ, ಮಂಗಳೂರ
೪೭. ಗುಂಡಮ್ಮ ಜೋಶಿ
೪೮. ಜಯಮ್ಮ, ಕಲ್ಲೂರ

# ಅನುಬಂಧ – 9

**ಮ್ಯಾನೇಜರರು:**

೧. ಬಸವರಾಜ, ನ್ಯಾಮತಿ
೨. ಕುಂಟೋಜಿ ಬಸಣ್ಣ, ಅಮಿನಗಡ
೩. ಬಾಲರಾಜ, ಬೆಂಗಳೂರ
೪. ಬಿ.ಸಿ. ಕೊಪ್ಪದ, ಬಿಜಾಪುರ
೫. ಜಿ.ಎನ್. ಕುಲಕರ್ಣಿ, ಹುಬ್ಬಳ್ಳಿ
೬. ಆರ್. ಸಿ. ಗೊರ್ಜಿನಾಳ, ಗದಗ
೭. ಎಸ್.ಬಿ. ಹಳ್ಳದ
೮. ಟಿ. ಶಿವಣ್ಣ, ತುಮಕೂರ
೯. ಕರೀಂಸಾಬ, ದೇವಗಿರಿ
೧೦. ರವೀಂದ್ರಕುಮಾರ, ಹಾಸನ

**ಸಂಗೀತ ನಿರ್ದೇಶಕರು:**

೧. ಸಂಗಮೇಶ, ಹೊನ್ನಿಗನೂರ
೨. ಚಿದಾನಂದಪ್ಪ ಸಪ್ಪಂಡಿ, ಇಳಕಲ್ಲ
೩. ಗಂಗಾಧರ ಭೂತಿ, ಬನಹಟ್ಟಿ
೪. ಪಟ್ಟಣಶೆಟ್ಟಿ ಮಾಸ್ತರ, ಗದಗ
೫. ವಾದಿರಾಜ ಗವಾಯಿಗಳು, ಕಂಪ್ಲಿ

**ಹಾರ್ಮೋನಿಯಂ ವಾದಕರು:**

೧. ಬಸವಲಿಂಗಪ್ಪ ಹೂಗಾರ, ಕಮತಗಿ
೨. ಶಂಕ್ರಪ್ಪ ಕಂಪ್ಲಿ, ಇಳಕಲ್ಲ
೩. ಈಶ್ವರ, ಮೊರಗೇರಿ
೪. ರೇವಣಸಿದ್ದಪ್ಪ, ಸುರಕೋಡ
೫. ಸೋಮನಾಥ, ತಂಗೋಡ
೬. ಗೋಪಾಲ, ಬಳ್ಳಾರಿ
೭. ಬಸವಣ್ಣೆಪ್ಪ, ಹೊಸಪೇಟೆ
೮. ಪಂಚಯ್ಯ, ಮಡ್ಲಿಮಠ
೯. ಮಲ್ಲಿಕಾರ್ಜುನ, ಅಸುಂಡಿ
೧೦. ಪರಯ್ಯಸ್ವಾಮಿ, ಬನಹಟ್ಟಿ
೧೧. ರಾಜು, ಶಿಡ್ಲಗೇರಿ

**ತಬಲಾ ವಾದಕರು:**

೧. ಬಸಲಿಂಗಪ್ಪ ಹೂಗಾರ, ಕಮತಗಿ
೨. ರಂಗಪ್ಪ ಗುರೆಲ್ಲ
೩. ಚೆನ್ನಪ್ಪ, ಧನ್ನೂರ
೪. ಗುಂಡುಕುಮಾರ, ಇಳಕಲ್ಲ
೫. ಚಂದ್ರು, ದಾವಣಗೆರೆ
೬. ವಿಜಯಕುಮಾರ, ಮರೋಳ
೭. ನಾಗೇಶ ಭಟ್ಟರು
೮. ಖಾನಸಾಬ, ಕಲ್ಲೂರ
೯. ಕಮಲರಾಜ, ದೇವದುರ್ಗ
೧೦. ಶಿವಾನಂದ, ಬಾಗಲಕೋಟ


**ಪೇಂಟರರು:**

೧. ಕೆ.ಎಲ್. ಕೆಂಧೂಳಿ ಪೇಂಟರ್, ಇಳಕಲ್ಲ
೨. ಶಿಲ್ಪಾಚಾರ್ಯ ಪೇಂಟರ್, ಚಿತ್ರದುರ್ಗ
೩. ಎಸ್. ಪ್ರಹ್ಲಾದ್ ಪೇಂಟರ್, ಹುಬ್ಬಳ್ಳಿ
೪. ರಾಜು ಪೇಂಟರ್, ಹಿರೇಹಾಳ
೫. ಅಮೀನ ಪೇಂಟರ್, ಇಳಕಲ್ಲ
೬. ಕೃಷ್ಣಾ ಪೇಂಟರ್, ಹುಬ್ಬಳ್ಳಿ
೭. ಮರಿ ಪೇಂಟರ್, ಬೆಂಗಳೂರು





ಅರಿಷಿಣಗೋಡಿ ಅವರ ಕೆಲವು ಭಾವಚಿತ್ರಗಳು






ಮಾಲತಿಶ್ರೀ ಮೈಸೂರು ಅವರೊಂದಿಗೆ ಗರೀಬಿ ಹಟಾವೊ ನಾಟಕದಲ್ಲಿ


ನಾಟಕದ ಪಾತ್ರವೊಂದರಲ್ಲಿ ನಟಿ ಜಯಲಕ್ಷ್ಮಿ ಪಾಟೀಲ ಅವರೊಂದಿಗೆ





ರಾಜ್ಯಪಾಲ ಚತುರ್ವೇದಿ ಅವರಿಂದ ಗುಬ್ಬಿ ವೀರಣ್ಣ ಪ್ರಶಸ್ತಿ ಪ್ರದಾನ. ಜೊತೆಯಲ್ಲಿ ವಿಜ್ಞಾನಿ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ.ಎಚ್. ನರಸಿಂಹಯ್ಯ.

ರಾಜ್ಯೋತ್ಸವ ಪ್ರಶಸ್ತಿ ಪ್ರದಾನ. ಸಂಸ್ಕೃತಿ ಸಚಿವೆ ಲೀಲಾದೇವಿ ಪ್ರಸಾದ್, ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಹಾಗೂ ಸಂಸ್ಕೃತಿ ಇಲಾಖೆ ನಿರ್ದೇಶಕ ವೈ.ಕೆ. ಮುದ್ದುಕೃಷ್ಣ.





ರಾಘವ ಮೆಮೋರಿಯಲ್ ಅಸೋಸಿಯೇಷನ್ (ರಿ)
ಬಳ್ಳಾರಿ
ಸನ್ಮಾನ ಪತ್ರ
ಶ್ರೀಮತಿ / ಶ್ರೀ / ಕುಮಾರಿ / ಕುಮಾರ ........................ ಇವರ
........................ ಕಲಾ ಸೇವೆಯನ್ನು ಗುರುತಿಸಿ ........................
........................ ಗೌರವಿಸಿ, ಸನ್ಮಾನಿಸಿ ನೀಡಿದ ಸನ್ಮಾನ ಪತ್ರ
ಬಳ್ಳಾರಿ
ದಿನಾಂಕ :
ಮುಖ್ಯ ಅತಿಥಿಗಳು
ಗೌರವ ಕಾರ್ಯದರ್ಶಿ
ಅಧ್ಯಕ್ಷರು

ಬಳ್ಳಾರಿ ರಾಘವ ಪ್ರಶಸ್ತಿ ಪತ್ರ

ಬೆಳಗಾವಿ ಜಿಲ್ಲೆ ಯರಗಟ್ಟಿಯಲ್ಲಿ ನಡೆದ ಹುಚ್ಚೇಶ್ವರ ನಾಟ್ಯ ಸಂಘದ ಕ್ಯಾಂಪಿನಲ್ಲಿ ಅಲ್ಲಿನ ಸ್ವಾಮೀಜಿ ಅವರು ಅರಿಷಿಣಗೋಡಿ ಅವರನ್ನು ಸತ್ಕರಿಸಿದರು. ಕೋಟ್ ಧರಿಸಿರುವವರು ಖ್ಯಾತ ನಾಟಕಕಾರ ಪ್ರಕಾಶ ಕಡಪಟ್ಟಿ






ಬಿ.ಆರ್.ಅರಿಷಿಣಗೋಡಿ ಅವರು ಪತ್ನಿ ರೇಣುಕಾ ಮಕ್ಕಳು ಮತ್ತು ಮೊಮ್ಮಕ್ಕಳೊಂದಿಗೆ. ನಿಂತವರು: ಡಾ.ಶ್ರೀಕಾಂತ್, ಡಾ.ಅನುಪಮಾ, ವಿಜಯ ಭಾರತಿ, ವೆಂಕಟೇಶ್, ಶಶಿಧರ ಮತ್ತು ಕಾಶಿಬಾಯಿ

ಹಾಲಿ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಹಾಗೂ ಹೆಸರಾಂತ ನಟಿಯರಾದ ಉಮಾಶ್ರೀ ಮತ್ತು ಮಾಲತಿಶ್ರೀ ಮೈಸೂರು ಅವರೊಂದಿಗೆ



ಕನ್ನಡ ಸಾಹಿತ್ಯ ಪರಿಷತ್ತು ಹುನಗುಂದ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಬಿ.ಆರ್.ಅರಿಷಿಣಗೋಡಿ ಅವರನ್ನು ಆಯ್ಕೆ ಮಾಡಿ ಗೌರವಿಸಿತ್ತು. ಈ ಸಂದರ್ಭದಲ್ಲಿ ಅಮೀನಗಡದಲ್ಲಿ ಜರುಗಿದ ಸಮ್ಮೇಳನಾಧ್ಯಕ್ಷರ ಮೆರವಣಿಗೆ. ಪಕ್ಕದಲ್ಲಿರುವವರು ಹುನಗುಂದ ಕಸಾಪ ಅಧ್ಯಕ್ಷ ಮಹಾಂತೇಶ ಗಜೇಂದ್ರಗಡ



ಶ್ರೀ ಬಿ.ಆರ್. ಅರಿಶಿಣಗೋಡಿ
2003

ಇಲ್ಲಿಗೆ ಬಂತೋ ಸಂಗಯ್ಯ ನಾಟಕದ
ಆರೆಂಪಿ ಡಾಕ್ಟರ್ ಪಾತ್ರದಲ್ಲಿ

